ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 16 ಶನಿವಾರ 2026

47

ಸಂಪುಟ: 47 | ಸಂಚಿಕೆ: 30 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, *website: www.mysurumithra.com*



ಮೈಸೂರು ಮಿತ್ರ ಶನಿವಾರ 16 ಮೇ 2026

ಗುಡುಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಖಂಡಿಸಿ

ವಿವಿಧ ಸಂಘಟನೆಗಳಿಂದ ಪಾದಯಾತ್ರೆ

- ಜಾನುವಾರುಗಳೊಂದಿಗೆ ಗುಡುಮಾದನಹಳ್ಳಿಯಿಂದ ಮೈಸೂರು ಜಿಪಂ ಕಚೇರಿ ಆವರಣ ಪ್ರವೇಶಿಸಿದ ಹೋರಾಟಗಾರರು
- ಕೊನೆಗೆ ಜಿಪಂನಲ್ಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯರ ಕಚೇರಿ ಮುಂದೆ ಧರಣಿ
- ಉದ್ದೇಶಿತ ಫಲವತ್ತಾದ ಭೂಮಿ ಹೊರತಾಗಿ ಬೇರೆಡೆ ಆಸ್ಪತ್ರೆ ನಿರ್ಮಾಣಕ್ಕೆ ಆಗ್ರಹ



ಮೈಸೂರು ಜಿಪಂ ಕಚೇರಿ ಆವರಣದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ, ಪರಿಸರಕ್ಕಾಗಿ ನಾವು, ದಲಿತ ಸಂಘಟನೆ ಹಾಗೂ ಪ್ರಗತಿಪರ ಸಂಘಟನೆಗಳ ವತಿಯಿಂದ ಶುಕ್ರವಾರ ಮುಖ್ಯಮಂತ್ರಿ ಕಚೇರಿ ಮುಂದೆ ಧರಣಿ ನಡೆಸಲಾಯಿತು.





ಮೈಸೂರು, ಮೇ 15(ಎಂಕೆ)– ತಾಲೂಕಿನ ಗುಡುಮಾದನಹಳ್ಳಿಯಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಮಾಡಲು ಭೂಮಿ ಮಂಜೂರು ಮಾಡಿರುವುದನ್ನು ರದ್ದುಪಡಿಸಿ, ಬೇರೆ ಕಡೆ ಆಸ್ಪತ್ರೆ ನಿರ್ಮಾಣ ಮಾಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ, ಪರಿಸರಕ್ಕಾಗಿ ನಾವು, ದಲಿತ ಸಂಘಟನೆ ಹಾಗೂ ಪ್ರಗತಿಪರ ಸಂಘಟನೆಗಳ ವತಿಯಿಂದ ಪಾದಯಾತ್ರೆ ನಡೆಸಿ, ಜಿಲ್ಲಾ ಪಂಚಾಯತ್‌ನಲ್ಲಿರುವ ಮುಖ್ಯಮಂತ್ರಿ ಕಚೇರಿ ಮುಂದೆ ಧರಣಿ ನಡೆಸಲಾಯಿತು.

ಗುಡುಮಾದನಹಳ್ಳಿಯಿಂದ ಶುಕ್ರವಾರ ಬೆಳಗ್ಗೆ 8 ಗಂಟೆಗೆ ದನ–ಕರುಗಳ ಸಮೇತ ಪಾದಯಾತ್ರೆ ಆರಂಭಿಸಿದ ಪ್ರತಿಭಟನಾಕಾರರು, 11.30ಕ್ಕೆ ಜಿಲ್ಲಾ ಪಂಚಾಯತ್ ಆವರಣದಲ್ಲಿ ಜಮಾವಣೆಗೊಂಡು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಹಸಿರು ವಲಯವನ್ನು ಉಳಿಸಿ, ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣಕ್ಕೆ ಗುಡುಮಾದನಹಳ್ಳಿಯ ಕೃಷಿ ಭೂಮಿ ಸೂಕ್ತವಲ್ಲ ಎಂಬ ಭಿತ್ತಿ ಪತ್ರಗಳನ್ನು ಹಂಚಿ, ಬೇರೆ ಸೂಕ್ತ ಸ್ಥಳದಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಮಾಡುವಂತೆ ಒತ್ತಾಯಿಸಿದರು.

ಬೆದರಿದ ರಾಸುಗಳು...!

ತಮ್ಮೊಡನೆ ಪ್ರತಿಭಟನೆಗೆಂದು ಕರೆತಂದಿದ್ದ ದನ–ಕರುಗಳು ಜಿಪಂನ ಗೇಟ್ ದಾಟಲು ಪರದಾಡಿದವು. ಗೇಟ್‌ನಲ್ಲಿ ಮೋರಿಗೆ ಪೈಪ್‌ಗಳನ್ನು ಅಳವಡಿಸಿರುವುದರಿಂದ ಕಾಲು ಸಿಲುಕಿಕೊಳ್ಳುವ ಭೀತಿಯಿಂದ ಬೆದರಿದ ರಾಸುಗಳು ಕೊನೆಗೆ ಹಾರಿ ಜಿಪಂ ಆವರಣದೊಳಗೆ ನಡೆದವು. ಅಲ್ಲದೆ ಪ್ರತಿಭಟನೆ ವೇಳೆ ರೈತ ಮುಖಂಡರು ಮತ್ತು ಪೊಲೀಸರ ನಡುವೆ ನಡೆದ ಮಾತಿನ ಚಕಮಕಿಯಿಂದಾಗಿ ಕೆಲ ಕಾಲ ಸ್ಥಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು.

ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಗುಡುಮಾದನ ಹಳ್ಳಿಯ ಸರ್ವೆ ನಂ.8, 60 ಮತ್ತು 68 ರ 36 ಎಕರೆ ವಿಸ್ತೀರ್ಣದ ಪೈಕಿ 20 ಎಕರೆ ಜಮೀನನ್ನು ಸರ್ಕಾರ ನಿಮ್ಹಾನ್ಸ್ ಆಸ್ಪತ್ರೆಗಾಗಿ ಮಂಜೂರು ಮಾಡಿದೆ. ಆದರೆ, ಈ ಸ್ಥಳವು ಆಸ್ಪತ್ರೆ ನಿರ್ಮಾಣಕ್ಕೆ ಯೋಗ್ಯವಾದ ಸ್ಥಳವಾಗಿರುವುದಿಲ್ಲ. ಈ ಸರ್ವೆ ನಂಬರ್‌ನಲ್ಲಿ 80 ಕುಟುಂಬಗಳು 60–70 ವರ್ಷಗಳಿಂದಲೂ ಸ್ವಾಧೀನಾನುಭವ ಹೊಂದಿ ಬೇಸಾಯ ಮಾಡುತ್ತಾ ಜೀವನ ನಡೆಸುತ್ತಿವೆ.

ತೆಂಗು ಇತರೆ ತೋಟಗಾರಿಕೆ ಬೆಳೆ ಸೇರಿದಂತೆ ವಾರ್ಷಿಕ 2 ಭತ್ತದ ಫಸಲನ್ನು ಬೆಳೆಯುತ್ತಿದ್ದಾರೆ. ದಳವಾಯಿ ಕೆರೆ, ವರುಣಾ ನಾಲೆ ಮತ್ತು ಮಳೆ ಬಿದ್ದ ಸಂದರ್ಭದಲ್ಲಿ ಚಾಮುಂಡಿ ಬೆಟ್ಟದ ತಪ್ಪಲಿನಿಂದ ಈ ಜಮೀನಿಗೆ ನೀರು ಹರಿದು ಬಂದು ವರ್ಷಪೂರ್ತಿ ಕೃಷಿಗೆ ನೀರಿನ ಸೌಲಭ್ಯವಿರುತ್ತದೆ. ಈ ಪ್ರದೇಶವು ಪೂರ್ಣ ಹಸಿರಿನಿಂದ ಕಂಗೊಳಿಸುತ್ತಿದೆ. ಕೃಷಿ ಜೊತೆಗೆ ಹೈನುಗಾರಿಕೆ ಮತ್ತು ಪಶು ಸಂಗೋಪನೆಯಲ್ಲಿ ತೊಡಗಿಸಿಕೊಂಡಿರುವ ರೈತರು, 400 ಹಸುಗಳು, 300 ಕುರಿಗಳು, 100 ಮೇಕೆಗಳನ್ನು ಸಾಕಿದ್ದು ಆಸ್ಪತ್ರೆ ನಿರ್ಮಾಣದಿಂದ ರೈತರು ಸಂಕಷ್ಟಕ್ಕೀಡಾಗುವುದಲ್ಲದೆ ಜಾನುವಾರುಗಳಿಗೆ ಆಹಾರವಿಲ್ಲದಂತಾಗುತ್ತದೆ ಎಂದರು.

ಹೈಕೋರ್ಟ್ ಆದೇಶದಂತೆ ಜಾನುವಾರುಗಳು ಇರುವ ಗ್ರಾಮಗಳಲ್ಲಿ ಯಾವುದೇ ಉದ್ದೇಶಕ್ಕೆ ಭೂಮಿಯನ್ನು ಮಂಜೂರು ಮಾಡುವ ಬದಲು ಗೋಮಾಳಕ್ಕೆ ಭೂಮಿಯನ್ನು ಮೀಸಲಿಡಬೇಕು. ಆದರೆ, ಸಂಪೂರ್ಣವಾಗಿ ನೀರಿನಿಂದ ಆವರಿಸಿರುವ ಈ ಭೂಮಿಯು ಕೃಷಿಗೆ ಮಾತ್ರ ಯೋಗ್ಯವಾಗಿದ್ದು, ಯಾವುದೇ ಕಟ್ಟಡ ನಿರ್ಮಾಣ ಮಾಡಲು ಸೂಕ್ತವಾಗಿಲ್ಲ. ಅಲ್ಲದೆ ಸರ್ಕಾರವು ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಮಾಡಲು ಮಂಜೂರು ಮಾಡಿ ತಲಾ–ತಲಾಂತರದಿಂದ ಸ್ವಾಧೀನಾನುಭವ ಹೊಂದಿರುವ ರೈತ ಕುಟುಂಬವನ್ನು ಒಕ್ಕಲೆಬ್ಬಿಸಲು ಮುಂದಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಸೂಕ್ತ ಸ್ಥಳ ಬೇಕಾದಷ್ಟಿವೆ: ಮೈಸೂರಿನಲ್ಲಿ ನಿಮ್ಹಾನ್ಸ್ ಆಸ್ಪತ್ರೆ ನಿರ್ಮಾಣ ಮಾಡುವುದನ್ನು ರೈತರು ತುಂಬು ಹೃದಯದಿಂದ ಸ್ವಾಗತಿಸುತ್ತೇವೆ. ಆದರೆ, ಸೂಕ್ತವಲ್ಲದ ಸ್ಥಳದಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣ ಮಾಡುವುದು ಸರಿಯಲ್ಲ ಮೈಸೂರು ತಾಲೂಕಿನ ಹೊಸಹುಂಡಿ ಗ್ರಾಮದ ಸ.ನಂ.44 ರಲ್ಲಿ 48 ಎಕರೆ, ಚೋರನಹಳ್ಳಿ ಸ.ನಂ.20 ರಲ್ಲಿ 10 ಎಕರೆ, ಹಡಜನ ಗ್ರಾಮದ ಸ.ನಂ 149ರಲ್ಲಿ 16 ಎಕರೆ, ವಾಜಮಂಗಲ ಗ್ರಾಮದ ಸ.ನಂ.96 ರಲ್ಲಿ 102 ಎಕರೆ ಸರ್ಕಾರಿ ಜಮೀನಿದೆ. ವರುಣಾ ಕ್ಷೇತ್ರದ ಇಮ್ಮಾವು ಗ್ರಾಮದಲ್ಲೂ ಜಮೀನಿದ್ದು, ಯಾವುದಾದರೂ ಒಂದು ಸ್ಥಳದಲ್ಲಿ ಆಸ್ಪತ್ರೆಯನ್ನು ನಿರ್ಮಾಣ ಮಾಡಬಹುದಾಗಿದೆ. ಆದ್ದರಿಂದ ಸರ್ಕಾರ ತನ್ನ ನಿರ್ಧಾರ ಪುನರ್ ಪರಿಶೀಲಿಸಿ ಗುಡುಮಾದನಹಳ್ಳಿ ಯಲ್ಲಿ ನಿಮ್ಹಾನ್ಸ್ ಆಸ್ಪತ್ರೆಗೆ ಭೂ ಮಂಜೂರು ಮಾಡಿರುವುದನ್ನು ರದ್ದುಪಡಿಸಿ, ಹಸಿರು ವಲಯವನ್ನು ರಕ್ಷಿಸಬೇಕು ಎಂದು ಕೋರಿದರು.

ಡಾ.ಡಿ.ಸಿ.ನಂಜುಂಡ ಅವರ 'ಆಪರೇಷನ್ ಸಿಂಧೂರ', 'ಸಿಂಧೂ ನದಿ ಒಪ್ಪಂದ–ಆಳ ಮತ್ತು ಅಗಲ' ಕೃತಿ ಬಿಡುಗಡೆ



'ಆಪರೇಷನ್ ಸಿಂಧೂರ' ಹಾಗೂ 'ಸಿಂಧೂ ನದಿ ಒಪ್ಪಂದ–ಆಳ ಮತ್ತು ಅಗಲ' ಕೃತಿಗಳನ್ನು ಬಿಜೆಪಿ ಮುಖಂಡರಾದ ಡಾ.ಹೇಮಾ ನಂದೀಶ್ ಬಿಡುಗಡೆಗೊಳಿಸಿದರು.

ಮೈಸೂರು, ಮೇ 15(ಜಿಎ)– ಜಿಲ್ಲಾ ಪತ್ರಕರ್ತರ ಭವನದಲ್ಲಿ ಅಂತರ್ಗತ ಬೆಳವಣಿಗೆ ಮತ್ತು ಸಂಶೋಧನಾ ಕೇಂದ್ರದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ. ಡಿ.ಸಿ. ನಂಜುಂಡ ಅವರು ರಚಿಸಿರುವ 'ಆಪರೇಷನ್ ಸಿಂಧೂರ' ಹಾಗೂ 'ಸಿಂಧೂ ನದಿ ಒಪ್ಪಂದ–ಆಳ ಮತ್ತು ಅಗಲ' ಕೃತಿಗಳನ್ನು ಬಿಜೆಪಿ ಮುಖಂಡರಾದ ಡಾ.ಹೇಮಾ ನಂದೀಶ್ ಬಿಡುಗಡೆಗೊಳಿಸಿದರು.

ಡಾ.ಡಿ.ಸಿ.ನಂಜುಂಡ ಅವರು ರಚಿಸಿರುವ 'ಆಪರೇಷನ್ ಸಿಂಧೂರ' ಹಾಗೂ 'ಸಿಂಧೂ ನದಿ ಒಪ್ಪಂದ–ಆಳ ಮತ್ತು ಅಗಲ' ಎರಡು ಕೃತಿಗಳು ಮಹತ್ತರ ಮೌಲ್ಯಾಧಾರಿತ ಕೃತಿಗಳಾಗಿವೆ. ಈ ಕೃತಿಗಳ ಮೂಲಕ ಮನೆ, ಮನಗಳಿಗೆ ದೇಶ ರಕ್ಷಣಾ ಸಾಮರ್ಥ್ಯವನ್ನು ತಲುಪಿಸಲು ಮುಂದಾಗಿದ್ದಾರೆ ಅವರಿಗೆ ಅಭಿನಂದನೆಗಳು ಎಂದರು.

ದೇಶದ ಸಮಗ್ರತೆ ಯಾವ ಸಂದರ್ಭದಲ್ಲಿ ಕೆಲ ವಿಷಯಗಳು ಅನಿವಾರ್ಯವಾಗಿರುತ್ತದೆ ಎಂಬುದಕ್ಕೆ ಆಪರೇಷನ್ ಸಿಂಧೂರ ಪ್ರಮುಖ ನಿರ್ಧಾರವಾಗಿದೆ. ಭಾರತದ ಮುಕುಟಕ್ಕೆ ಸಿಂಧೂರವಾಗಿರುವ ಜಮ್ಮು–ಕಾಶ್ಮೀರದಲ್ಲಿ ಉಗ್ರರು ಸಾಮಾನ್ಯ ನಾಗರಿಕರನ್ನು ಗುರುತಿಸಿ ಕೊಂದಿದ್ದರು. ಈ ಹೊತ್ತಿನಲ್ಲಿ ಮೋದಿ ತೆಗೆದುಕೊಂಡ ಏರ್‌ಸ್ಟ್ರೈಕ್ ನಿರ್ಧಾರ ಸೂಕ್ತವಾಗಿತ್ತು. ಇದರ ಬಗ್ಗೆ ಅನೇಕ ವಿಚಾರಗಳನ್ನು ಪುಸ್ತಕದಲ್ಲಿ ತಿಳಿಸಿದ್ದಾರೆ. ದೇಶದ ಭಾವೈಕ್ಯತೆಗೆ ಅಡಚಣೆ ಆದಾಗ ದೇಶ ತೆಗೆದುಕೊಳ್ಳುವ ನಿರ್ಧಾರದ ಬಗ್ಗೆ ತಿಳಿಯಿತು ಎಂದರು.

ಏರ್ ಸ್ಟ್ರೈಕ್ ನಡೆದಿದ್ದು ಊಹೆ ಮಾಡಲು ಸಾಧ್ಯವಿಲ್ಲ. ದೇಶದ ಐಕ್ಯತೆ ಕಾಪಾಡಿ ಕೊಳ್ಳಲು ಎಲ್ಲರೂ ಸೈನಿಕರಾಗಬೇಕು ಎಂಬಂತೆ ಭಾರತೀಯ ಸೈನ್ಯದ ಮಹಿಳಾ ಅಧಿಕಾರಿಗಳು ಕಾರ್ಯಾಚರಣೆ ಮಾಡಿದರು. ಇದು ಐತಿಹಾಸಿಕ ತಿರುವು ಪಡೆದು ಕೊಂಡಿತ್ತು ಎಂದರು. ಕೃತಿಕಾರ ಡಾ.ಡಿ.ಸಿ. ನಂಜುಂಡ, ಮೀನಾಕ್ಷಿ ಶ್ರೀಷಾ, ಮಂಟೇಲಿಂಗಾಚಾರ್, ನಂಜುಂಡಸ್ವಾಮಿ ಉಪಸ್ಥಿತರಿದ್ದರು.

ಇಂದು 'ಮಧುರ ಚೆನ್ನ–ಅನುಭಾವಿಯೊಂದಿಗೆ ಅನುಸಂಧಾನ' ಏಕವ್ಯಕ್ತಿ ನಾಟಕ ಪ್ರದರ್ಶನ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ 'ಮಧುರಚೆನ್ನ–ಅನುಭಾವಿಯೊಂದಿಗೆ ಅನುಸಂಧಾನ' ಏಕವ್ಯಕ್ತಿ ನಾಟಕದ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು, ಮೇ 15(ಜಿಎ)–ಕವಿತಾ ಕಲಾ ತಂಡದ ವತಿಯಿಂದ ಮೈಸೂರಿನ ಕಿರು ರಂಗಮಂದಿರದಲ್ಲಿ ಮೇ 16ರಂದು ಸಂಜೆ 6.30ಕ್ಕೆ ತಾವು ರಚಿಸಿ, ನಿರ್ದೇಶಿಸಿರುವ 'ಮಧುರಚೆನ್ನ–ಅನುಭಾವಿಯೊಂದಿಗೆ ಅನುಸಂಧಾನ' ಏಕವ್ಯಕ್ತಿ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಲೇಖಕ ಗಣೇಶ ಅಮೀನಗಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಾತನಾಡಿದ ಅವರು, ಮಧುರ ಚೆನ್ನ ಈ ಶತಮಾನದ ಮಹಾನ್ ಲೇಖಕರು. ಅವರನ್ನು ಹಿರಿಯರಿಗೆ ನೆನಪು ಮಾಡುವುದು ಮತ್ತು ಯುವ ಪೀಳಿಗೆಗೆ ಅವರ ಬಗ್ಗೆ ತಿಳಿಸುವ ಉದ್ದೇಶದಿಂದ ಈ ನಾಟಕವನ್ನು ಆಯೋಜಿಸಲಾಗಿದೆ ಎಂದರು ನಾಟಕ ಒಂದು ಗಂಟೆ ಇರಲಿದ್ದು, ಕವಿ ಕಾವ್ಯ ಪರಿಚಯ, ಜೀವನದ ಎಲ್ಲಾ ಮಜಲು ಗಳನ್ನು ನಾಟಕದ ಮೂಲಕ ತಿಳಿಸುವ ಪ್ರಯತ್ನವಾಗಿದೆ. ಈಗಾಗಲೇ ರಾಜ್ಯದ ವಿವಿಧೆಡೆ ಪ್ರದರ್ಶನ ಕಂಡು ಜನಮೆಚ್ಚುಗೆ ಗಳಿಸಿದೆ. ನಗರದಲ್ಲಿ ಪ್ರಥಮ ಪ್ರದರ್ಶನ ಕಾಣುತ್ತಿದೆ. ಪ್ರಮುಖವಾಗಿ ನಾಟಕ ಪ್ರವೇಶ ಉಚಿತ ಎಂದರು.

ಜಗದೇವ ಗಲಗಲಿ ಪ್ರಸ್ತುತಿ, ಬಿ.ಆರ್. ಬನಸೋಡೆ ಸಂಗೀತ ನಿರ್ದೇಶನದಲ್ಲಿ ನಾಟಕ ಮೂಡಿಬಂದಿದೆ. ನಾಟಕವನ್ನು ಮೈಸೂರು ಪ್ರಾದೇಶಿಕ ಆಯುಕ್ತ ನಿತೀಶ್ ಪಾಟೀಲ ಉದ್ಘಾಟಿಸುವರು. ನಾಟಕವನ್ನು ಮಧುರ ಚೆನ್ನ ಅವರ ಪುತ್ರ ಡಾ.ದೇವಪ್ರಿಯ ಗಲಗಲಿ ವೀಕ್ಷಿಸಲಿದ್ದಾರೆ. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಲೇಖಕ ಡಾ.ಮೊದಬದ ಮಲ್ಲಿಕಾರ್ಜುನ, ಮೈಸೂರು ಸಾಹಿತ್ಯ ಸಂಭ್ರಮದ ಸಂಸ್ಥಾಪಕಿ ಶುಭಾ ಸಂಜಯ್ ಅರಸ್, ಎಸ್‌ಬಿಐ ಮುಖ್ಯ ವ್ಯವಸ್ಥಾಪಕ ಪ್ರವೀಣ ಗೋರಬಾಳ, ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ ಅಧ್ಯಕ್ಷ ರಾಮಚಂದ್ರಭಟ್, ಕನ್ನಡ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟದ ಸಂಸ್ಥಾಪಕ ಅಧ್ಯಕ್ಷ ಎಂ.ಚಂದ್ರಶೇಖರ್ ಉಪಸ್ಥಿತರಿದ್ದರು.

ಸರ್ಕಾರದಿಂದ ತಾಯಂದಿರ ದಿನಾಚರಣೆ ಆಚರಿಸಲಿ

ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಮನವಿ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ವಿಶ್ವ ಅಮ್ಮನ ದಿನಾಚರಣೆ ಅಂಗವಾಗಿ ವಾಸುದೇವ ಮಹಾರಾಜ್ ಫೌಂಡೇಶನ್ ವತಿಯಿಂದ ಮಾತಾ ವಿಜಯಕುಮಾರಿ ವಿ.ರಾವ್ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಮೇ 15(ಜಿಎ)–ಭಾರತ ಮಾತೆಯ ಋಣ ತೀರಿಸಲು ಸರ್ಕಾರದಿಂದ ತಾಯಿಯಂದಿರ ದಿನಾಚರಣೆ ಆಚರಿಸಬೇಕು ಎಂದು ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ವಿಶ್ವ ಅಮ್ಮನ ದಿನಾಚರಣೆ ಅಂಗವಾಗಿ ವಾಸುದೇವ ಮಹಾರಾಜ್ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ ಮಾತಾ ವಿಜಯಕುಮಾರಿ ವಿ.ರಾವ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಜಗತ್ತಿನಲ್ಲಿ ಬೆಲೆ ಕಟ್ಟಲಾಗದು, ಪ್ರೀತಿ ಸಿಗುವುದು ತಾಯಿಯಿಂದ ಮಾತ್ರ ಎಂದರು.

ತಾಯಿಯೇ ಮೊದಲ ಗುರು ಎಂಬುದು ನಿಜವಾದ ಮಾತು. ಅದರಂತೆ ಭಾರತ ಮಾತೆಯೂ ನಮ್ಮ ತಾಯಿ ಆಗಿದ್ದು, ಈ ದಿನಾಚರಣೆ ಮಾಡುತ್ತೇವೆ ಎಂದರೆ ಅದು ಭಾರತ ಮಾತೆಯನ್ನು ಪೂಜಿಸಿದ್ದಂತೆ. ಆದ್ದರಿಂದ ಭೂಮಿ ತಾಯಿಯ ಋಣ ತೀರಿಸಲು ಸರ್ಕಾರದಿಂದ ತಾಯಿ ದಿನಾಚರಣೆಯನ್ನು ಆಚರಿಸಬೇಕು. ಇದರಿಂದ ಭಾರತ ಮಾತೆಯ ಋಣ ತೀರಿಸದಂತೆ ಆಗಲಿದೆ ಎಂದು ತಿಳಿಸಿದರು.

ಸಂಸ್ಕೃತ ವಿದುಷಿ ಡಾ.ಕೆ.ಲೀಲಾ ಪ್ರಕಾಶ್ ಮಾತನಾಡಿ, ದೇವರು ಎಲ್ಲಾ ಕಡೆ ತಾನು ಇರಲು ಸಾಧ್ಯವಿಲ್ಲ ಎಂದು ತಾಯಿಯನ್ನು ಸೃಷ್ಟಿಸಿದ್ದಾನೆ. ತಾಯಿ ಸಾಮಾನ್ಯಳಲ್ಲ, ಆಕೆ ಭುವನದ ಭಾಗ್ಯ. ಆಕೆಯನ್ನು ಸ್ಮರಿಸುವ ಮೂಲಕ ಸಾಧಕ ಮಹಿಳೆಯರಿಗೆ ಪ್ರಶಸ್ತಿ ನೀಡುತ್ತಿರುವ ಫೌಂಡೇಶನ್ ಕಾರ್ಯ ಶ್ಲಾಘನೀಯ ಎಂದರು. ಕಾರ್ಯಕ್ರಮದಲ್ಲಿ ಲೇಖಕಿ ಲಕ್ಷ್ಮಿ ಪೆಲಕಂಡ, ವಿದುಷಿ ಎಂ.ಆರ್. ಸುಧಾ ಅವರಿಗೆ ಮಾತಾ ವಿಜಯಕುಮಾರಿ ವಿ.ರಾವ್ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಲಯನ್ಸ್ ಸಂಸ್ಥೆ ನಿಕಟಪೂರ್ವ ಗವರ್ನರ್ ಲಯನ್ ಎಸ್.ವೆಂಕಟೇಶ್, ಸಂಗೀತ ಶಿಕ್ಷಕಿ ಎಂ.ವಿ.ಅನಿತಾ, ಲಕ್ಷ್ಮಿನರಸಿಂಹ ಸ್ವಾಮಿ ದೇವಸ್ಥಾನದ ಸಿಇಓ ಕೆ.ಆರ್. ಯೋಗಾನರಸಿಂಹನ್, ಫೌಂಡೇಷನ್ ಸಂಸ್ಥಾಪಕ ಎಸ್.ವಿ.ನಾಗೇಂದ್ರ ಬಾಬು ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.5.2026 ಶನಿವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಭರಣಿ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಚರ್ಮ ಆರೈಕೆ ಮತ್ತು ಡಿಟಾಕ್ಸಿಫಿಕೇಶನ್ ಯೋಗ ಶಿಬಿರ, ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ಆರ್ಥ್ರೈಟಿಸ್ ಚಿಕಿತ್ಸಾ ಶಿಬಿರ, ವೆರಿಕೋಸ್ ವೇನ್ಸ್ ಚಿಕಿತ್ಸಾ ಶಿಬಿರ, ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಸೂತ್ರ ಆಯುರ್ಧಾಮ**: ವೆರಿಕೋಸ್ ವೇನ್ಸ್ ಉಚಿತ ತಪಾಸಣೆ ಮತ್ತು ಸಲಹಾ ಶಿಬಿರ, ಕಾಲಿನ ರಕ್ತನಾಳ ಊತ, ಕಾಲಿನ ನೋವು, ಉಬ್ಬರೆ, ಚರ್ಮದ ಬಣ್ಣ ಬದಲಾವಣೆ, ಕಾಲಿನಲ್ಲಿ ಜೋಮು ಹಿಡಿಯುವುದು, ವಾಸಿಯಾಗದ ಗಾಯಗಳ ತಪಾಸಣೆ ಮತ್ತು ಸಲಹಾ ಶಿಬಿರ, ಸ್ಥಳ: ಸೂತ್ರ ಆಯುರ್ಧಾಮ, ಜೆಎಲ್‌ಬಿ ರಸ್ತೆ, ಚಾಮುಂಡಿಪುರಂ. ಬೆಳಗ್ಗೆ 10ರಿಂದ.
- **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ :** ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಪ್ರಯುಕ್ತ ವಿಶೇಷ ಉಪನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್ ಅವರಿಂದ ಸಮಕಾಲೀನ ಶಿಕ್ಷಣ ವ್ಯವಸ್ಥೆಯಲ್ಲಿ ಅಂಬೇಡ್ಕರ್ ಚಿಂತನೆ ಕುರಿತು ಉಪನ್ಯಾಸ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಶೈಕ್ಷಣಿಕ ಸಂಯೋಜಕ ಪ್ರೊ. ಎಂ.ಆರ್. ಜಯಪ್ರಕಾಶ್, ಪ್ರಿನ್ಸಿಪಾಲ್ ಡಾ. ಮಹೇಶ್ ದಳಪತಿ, ಸ್ಥಳ: ಶ್ರೀ ನಟರಾಜ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್** : ಗಾಂಧಾರಿ ವಿದ್ಯೆ ಶಿಬಿರದ ಉದ್ಘಾಟನೆ, ಪ್ರಮಾಣ ಪತ್ರ ವಿತರಣಾ ಸಮಾರಂಭ, ವಿದ್ಯಾರ್ಥಿಗಳಿಂದ ಗಾಂಧಾರಿ ವಿದ್ಯೆ ಮತ್ತು ಕಲಾ ಪ್ರದರ್ಶನ, ಉಪಸ್ಥಿತರು : ಯೋಗ ಪ್ರವೀಣ ಶ್ರೀ ಶಿವಪ್ರಕಾಶ್ ಗುರೂಜಿ, ಕಿರುತೆರೆ ನಟ ತೇಜಸ್ವಿ, ಡಾ. ಆರ್. ಭಾವನಾ, ಶ್ರೀಮತಿ ಜಾನವಿ ಕುಮಾರಿ, ಸ್ಥಳ: ಮಹಾವಿದ್ಯಾಲಯ ಆವರಣ, ರಾಮಕೃಷ್ಣನಗರ, ಸಂಜೆ 4ಕ್ಕೆ.
- **ಕಲಾಸುರುಚಿ, ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 932, ಕಥೆ ಹೇಳುವವರು: ಶ್ರೀಮತಿ ಮೇಘಶ್ರೀ ಸುರೇಶ್, ಕನ್ನಡ ಭಾಷಾ ಪ್ರಾಧ್ಯಾಪಕರು, ಆಕ್ಯುರೇಟ್ ಅಕಾಡೆಮಿ, ಡಿಪಿಯು ಕಾಲೇಜು, ಗಾಯಕರು ಮತ್ತು ನಿರೂಪಕರು, ಮೈಸೂರು. ಸ್ಥಳ: ಕಲಾಸುರುಚಿ, ಸುರುಚಿ ರಂಗಮನೆ, ನಂ. 476, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 4.30 ರಿಂದ.
- **ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟ, ಕದಳಿ ಮಹಿಳಾ ವೇದಿಕೆ** : ದತ್ತಿ ಕಾರ್ಯಕ್ರಮ, ಬಸವ ಜಯಂತಿ, ಕಾಯಕ ದಿನಾಚರಣೆ ಹಾಗೂ ಕಾಯಕಶ್ರೀ ಪ್ರಶಸ್ತಿ ಪ್ರದಾನ, ಸಾನ್ನಿಧ್ಯ : ಶ್ರೀ ಕುಂದೂರು ಮಠದ ಶ್ರೀ ಶರತ್‌ಚಂದ್ರ ಸ್ವಾಮೀಜಿ, ಉದ್ಘಾಟನೆ : ಕರ್ನಾಟಕ ಆರಕ್ಷಕ ಅಕಾಡೆಮಿ ಉಪನಿರ್ದೇಶಕ ಚನ್ನಬಸವಣ್ಣ, ಅಧ್ಯಕ್ಷತೆ : ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಉಪಸ್ಥಿತರು : ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಶ್ರೀಮತಿ ಶೋಭಾರಾಣಿ ಜೈಪ್ರಕಾಶ್, ಕಾಯಕಶ್ರೀ ಪ್ರಶಸ್ತಿ ಪುರಸ್ಕೃತರು : ಶ್ರೀಮತಿ ಮೇರಿ ಲೋಬೋ, ಎಸ್. ಕನಿಕದಾಸ್, ಸ್ಥಳ: ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಸಂಜೆ 5ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಪ್ರಾಯೋಜಿತ ಕಾರ್ಯಕ್ರಮ – ಹರಿತ್ತೆ ಜಗತ್ತು ಸಸ್ಯ ವೈದ್ಯರ ಕಿವಿಮಾತು, ಪ್ರಸ್ತುತಿ : ಡಾ. ವಸಂತ ಕುಮಾರ್ ತಿಮಕಾಪುರ, ಪ್ರಾಯೋಜಕರು–ಗ್ರೀನ್ ಲೈಫ್ ಕ್ರಾಪ್ ಟೆಕ್, ಮೈಸೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ಜೆ. ಶ್ರೀನಿವಾಸ ಐಯ್ಯಂಗಾರ್ – ವೀಣಾ ವಾದನ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ : 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ –ಶ್ರೀ ಯೋಗೀಶ್ವರ ಯಾಜ್ಞವಲ್ಕ್ಯ, ರಚನೆ–ಇಡಗೂರು ಪಿ.ಟಿ. ಕೃಷ್ಣಮೂರ್ತಿ, ನಿರ್ದೇಶನ–ಡಾ. ಎ. ಎಸ್. ಶಂಕರನಾರಾಯಣ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ ಆಯ್ದ ಕಾರ್ಯಕ್ರಮ), 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.30 ವಿಜ್ಞಾನದ ಮುನ್ನಡೆ, 6.50 ಕೃಷಿರಂಗ :ಕಿಸಾನ್‌ವಾಣಿ ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಸಮಗ್ರ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ –ಶ್ರೀರಂಗಪಟ್ಟಣ ತಾಲ್ಲೂಕು, ಕಸಬಾ ಹೋಬಳಿ ಬಿದರಹಳ್ಳಿಗ್ರಾಮದ ಕೃಷಿಕ ಸಹೋದರರಾದ ಡಾ. ಬಿ.ಕೆ. ಶ್ರೀಧರ್ ಮತ್ತು ಬಿ. ಕೆ. ಸತೀಶ್, ಪ್ರಸ್ತುತಿ– ಎನ್. ಕೇಶವ ಮೂರ್ತಿ, 8.00 ರೂಪಕ–ಇಳಿವಯಸ್ಸಿನ ಇಬ್ಬನಿ, ರಚನೆ ಮತ್ತು ಪ್ರಸ್ತುತಿ–ಸಿ. ಎಸ್. ಪೂರ್ಣಿಮಾ, (ನಿರ್ಮಾಣ ನೆರವು–ಕಾರ್ತಿಕ್ ಎಂ. ಎಸ್.), 8.30 ಹಿಂದಿ ಚಿತ್ರಗೀತೆಗಳು, 9.30 ಯುವವಾಣಿ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ, ಪಂಡಿತ್ ಕೈವಲ್ಯ ಕುಮಾರ್ ಗುರವ್–ಖಯಾಲ್ ಗಾಯನ

- **ಮೈಸೂರು ರೌಂಡ್ ಟೇಬಲ್–21 ಮತ್ತು ಮೈಸೂರು ಲೇಡೀಸ್ ಸರ್ಕಲ್–9** : ನೈಟ್ಸ್ ಇನ್ ಖಾಕಿ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಪೊಲೀಸ್ ಕಮಿಷನರ್ ಶ್ರೀಮತಿ ಸೀಮಾ ಲಾಟ್ಕರ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ಸುಶ್ರುತ್ ಬೆಳಗೂರ್, ನಾಗಶ್ರೀ ನಿಖಿಲೇಶ್, ಸುರಜ್ ಕೃಷ್ಣಮ್, ಸುನೀಲ್ ಶಂಕರ್, ಸ್ಥಳ: ವಿಂಡ್ ಚೈಮ್ಸ್, ಸಂಜೆ 5.30 ರಿಂದ.
- **ಭಾರತೀಯ ವಿದ್ಯಾಭವನ** : ವಿದ್ವಾನ್ ಸುಮಂತ್ ಮಂಜುನಾಥ್ ಮತ್ತು ವಿದುಷಿ ಮಾಳವಿ ಮಂಜುನಾಥ್ ಅವರಿಂದ ಪಿಟೀಲು ವಾದನ, ವಿದ್ವಾನ್ ಅದಮ್ಯ ರಮಾನಂದ್–ತಬಲ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಭಾರತೀಯ ವಿದ್ಯಾಭವನದ ತಾತಾಚಾರಿ ಸಭಾಂಗಣ, ವಿಜಯನಗರ, ಸಂಜೆ 6ಕ್ಕೆ.
- **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಮಹೀಪಾಲಾನಂದ ಅವರಿಂದ ಇನ್‌ಸೈಟ್ಸ್ ಫ್ರಂ ಪ್ಯಾರಾಬಲ್ಸ್ ಆಫ್ ಶ್ರೀ ರಾಮಕೃಷ್ಣ–16 ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.
- **ಬಿಎಸ್‌ಎಸ್ ವಿದ್ಯೋದಯ, ರಾಗಾ ಮ್ಯೂಸಿಕ್ ಅಕಾಡೆಮಿ, ಸಂಸ್ಕಾರ ಭಾರತಿ** : ಭಗಿನಿ ರಾಗ ಸೌರಭ, ವಿದ್ವಾನ್ ನಿರಂಜನ್ ದಿಂಡೋಡಿ ಅವರಿಂದ ಗಾಯನ ಕಾರ್ಯಕ್ರಮ, ವಿದ್ವಾನ್ ಕೇಶವ್ ಮೋಹನ್‌ಕುಮಾರ್–ವಯೋಲಿನ್, ವಿದ್ವಾನ್ ಹೆಚ್.ಎಲ್. ಶಿವಶಂಕರಸ್ವಾಮಿ–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ: ಬಿಎಸ್‌ಎಸ್ ವಿದ್ಯೋದಯ, ರಾಘವೇಂದ್ರ ಮಠದ ಹತ್ತಿರ, ಕೃಷ್ಣಮೂರ್ತಿಪುರಂ, ಸಂಜೆ 6ಕ್ಕೆ.
- **ಜ್ಞಾನದೀಪ ಎಜುಕೇಶನ್ ಟ್ರಸ್ಟ್, ಡಾ. ಬಿ.ಆರ್. ಅಂಬೇಡ್ಕರ್ ದ್ರಾವಿಡ ಯುವಕರ ಅಭಿವೃದ್ಧಿ ಮಹಾಸಂಘ** : ಬೆಳಗ್ಗೆ 9.30ಕ್ಕೆ ಚಿಣ್ಣರ ಚಿಲಿಪಿಲಿ ಮಕ್ಕಳ ಬೇಸಿಗೆ ಸಾಂಸ್ಕೃತಿಕ ಶಿಬಿರ, ಉದ್ಘಾಟನೆ : ಸೂಪರಿಂಟೆಂಡೆಂಟ್ ಇಂಜಿನಿಯರ್ ಆರ್. ವಿನಯ್ ಕುಮಾರ್, ಅಧ್ಯಕ್ಷತೆ : ಟ್ರಸ್ಟ್ ಉಪಾಧ್ಯಕ್ಷ ಡಾ. ರಮೇಶ್ ಜೇವೂರ್, ಮುಖ್ಯ ಅತಿಥಿಗಳು : ಹಿರಿಯ ಸಾಹಿತಿ ಪ್ರೊ. ಹೆಚ್. ಗೋವಿಂದಯ್ಯ, ವಕೀಲ ಆರ್. ಲಕ್ಷ್ಮಣ್, ಎನ್. ಬಸವರಾಜು, ಸಂಜೆ 5.30ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಮುಖ್ಯ ಅತಿಥಿಗಳು : ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಡಾ. ಮಮತ ಕಿರಣ್, ಡಾ. ರಾಧಾಮಣಿ, ಸ್ಥಳ: ಅಂಬೇಡ್ಕರ್ ಸಮುದಾಯ ಭವನ, ಅಶೋಕಪುರಂ.
- **ಹಜರತ್ ಟಿಪ್ಪು ಸುಲ್ತಾನ್ ಶಾಹೀದ್ ವಕ್ಫ್ ಎಸ್ಟೇಟ್** : 234ನೇ ಟಿಪ್ಪು ಸುಲ್ತಾನ್ ಉರುಸ್, ಮುಖ್ಯ ಅತಿಥಿಗಳು : ಶಾಸಕ ತನ್ವೀರ್ ಸೇಠ್, ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಕೃಷಿ ಸಚಿವ ಚಲುವರಾಯಸ್ವಾಮಿ, ಹಫೀಜ್ ಸೈಯದ್ ಮೊಹಮ್ಮದ್ ಆಲಿ ಹುಸೇನಿ, ಶಾಸಕ ರಮೇಶ್ ಬಂಡಿಸಿದ್ದೇಗೌಡ, ಸ್ಥಳ: ಗುಂಬಜ್–ಇ–ಶಾಹಿ, ಶ್ರೀರಂಗಪಟ್ಟಣ, ಸಂಜೆ 7ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 16 ಶನಿವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 30 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಜೂ.21ಕ್ಕೆ ಮತ್ತೆ ನೀಟ್

- ಅಕ್ರಮ ತಡೆಗೆ ಕಂಪ್ಯೂಟರ್ ಆಧಾರಿತ ಆನ್‌ಲೈನ್ ವ್ಯವಸ್ಥೆ
- 15 ನಿಮಿಷ ಅಧಿಕ ಕಾಲಾವಕಾಶ
- ನೀಟ್ ಪ್ರಶ್ನೆ ಪತ್ರಿಕೆ ಬಯಲು ಹೊಣೆ ಹೊತ್ತ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್

ಬೆಂಗಳೂರು, ಮೇ 15(ಕೆಎಂಶಿ)– ಮುಂದಿನ ವರ್ಷದಿಂದ ನೀಟ್ ಅನ್ನು ಕಂಪ್ಯೂಟರ್ ಆಧಾರಿತ ಆನ್‌ಲೈನ್‌ನಲ್ಲಿ ನಡೆಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.


ಧರ್ಮೇಂದ್ರ ಪ್ರಧಾನ್

ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗಟ್ಟುವ ಉದ್ದೇಶದಿಂದ ಈ ತೀರ್ಮಾನ ಕೈಗೊಂಡಿರುವ ಕೇಂದ್ರ ಜೂನ್ 21ಕ್ಕೆ ಮತ್ತೆ ನೀಟ್ ನಡೆಸುವ ದಿನಾಂಕ ಪ್ರಕಟಿಸಿದೆ.

ಮರು ಪರೀಕ್ಷೆಗೆ ಜೂನ್ 14ರೊಳಗೆ ಅಭ್ಯರ್ಥಿಗಳಿಗೆ ಪ್ರವೇಶ ಪತ್ರಗಳನ್ನು ವಿತರಿಸಲಾಗುವುದು. ಪರೀಕ್ಷಾ ಕೇಂದ್ರ ಆಯ್ಕೆಯನ್ನೂ ವಿದ್ಯಾರ್ಥಿಗಳಿಗೆ ಬಿಡಲಾಗಿದೆ. ಒಂದು ವಾರ ಮುಂಚಿತವಾಗಿ ಕೇಂದ್ರ ಆಯ್ಕೆ ಮಾಡಬೇಕಿದೆ. ಮರು ನೀಟ್‌ಗೆ 15 ನಿಮಿಷ ಹೆಚ್ಚಿನ ಸಮಯ ನೀಡಲಾಗುತ್ತಿದೆ. ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ದೆಹಲಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಸೋರಿಕೆ ಹೊಣೆಗಾರಿಕೆಯನ್ನು ನಾವೇ ಹೊರುತ್ತೇವೆ ಪರೀಕ್ಷಾ ಮಾಫಿಯಾ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ■10ನೇ ಪುಟಕ್ಕೆ

ಪೆಟ್ರೋಲ್-ಡೀಸೆಲ್ ದರ ಲೀಟರ್‌ಗೆ 3 ರೂ. ಏರಿಕೆ

4 ವರ್ಷಗಳ ಬಳಿಕ ಇಂಧನ ದರ ಪರಿಷ್ಕರಣೆ!

ನವದೆಹಲಿ, ಮೇ 15– ಮಧ್ಯಪ್ರಾಚ್ಯದಲ್ಲಿ ಮುಂದುವರಿದಿರುವ ಯುದ್ಧ ಹಾಗೂ ಉದ್ವಿಗ್ನ ಪರಿಸ್ಥಿತಿ ಬಿಸಿ ಇದೀಗ ಭಾರತಕ್ಕೂ ತಟ್ಟಿದ್ದು, ದೇಶದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರವನ್ನು ಲೀಟರ್‌ಗೆ ರೂ.3 ರಷ್ಟು ಹೆಚ್ಚಳ ಮಾಡಲಾಗಿದೆ. ನಾಲ್ಕು ವರ್ಷಗಳ ಬಳಿಕ ಸರ್ಕಾರಿ ತೈಲ ಕಂಪನಿಗಳು ಇಂಧನ ದರ ಪರಿಷ್ಕರಣೆಗೆ ಮುಂದಾಗಿರುವುದು ಜನತೆಗೆ ಮತ್ತೊಂದು ಬೆಲೆ ಶಾಕ್ ನೀಡಿದೆ.

ದೆಹಲಿಯಲ್ಲಿ ಪೆಟ್ರೋಲ್ ದರವು ರೂ. 94.77ರಿಂದ ರೂ.97.77ಕ್ಕೆ ಏರಿಕೆಯಾದರೆ, ಡೀಸೆಲ್ ದರವು ರೂ.89.67ರಿಂದ ರೂ. 90.67ಕ್ಕೆ ಹೆಚ್ಚಳವಾಗಿದೆ. ಇಂಡಿಯನ್ ಆಯಿಲ್ ಕಾರ್ಪೊರೇಷನ್, ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಹಾಗೂ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ ಸಂಸ್ಥೆಗಳು ಹೊಸ ದರ ಜಾರಿಗೆ ತಂದಿವೆ. ಮಧ್ಯಪ್ರಾಚ್ಯದಲ್ಲಿ



ಮೈಸೂರಲ್ಲಿ ದರಪಟ್ಟಿ

	ಹಳೇ ದರ	ಹೊಸ ದರ
ಪೆಟ್ರೋಲ್	102.46	105.73
ಡೀಸೆಲ್	90.57	93.69

ಉಂಟಾಗಿರುವ ಸಂಘರ್ಷ ಜಾಗತಿಕ ಕಚ್ಚಾ ತೈಲ ಮಾರುಕಟ್ಟೆಯಲ್ಲಿ ಭಾರೀ ಅಸ್ಥಿರತೆ ಉಂಟು ಮಾಡಿದೆ. ತೈಲ ಉತ್ಪಾದನೆ ಮತ್ತು ಸಾಗಣೆ ವ್ಯವಸ್ಥೆಯಲ್ಲಿ ವ್ಯತ್ಯಯದ ಭೀತಿಯಿಂದ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ನಿರಂತರವಾಗಿ ಏರಿಕೆಯಾಗುತ್ತಿದೆ. ಭಾರತ ಆಮದು ಮಾಡುವ ಕಚ್ಚಾತೈಲದ ■10ನೇ ಪುಟಕ್ಕೆ

ಖಾಸಗಿ ಬಸ್ ಟಿಕೆಟ್ ದರ ಹೆಚ್ಚಳ



ಬೆಂಗಳೂರು, ಮೇ 15– ಪೆಟ್ರೋಲ್, ಡಿಸೇಲ್ ದರ ಏರಿಕೆ ಬೆನ್ನಲ್ಲೇ ಖಾಸಗಿ ಬಸ್ ಟಿಕೆಟ್ ದರ ಹೆಚ್ಚಳ ಮಾಡಿದ್ದು, ಇಂದು ಮಧ್ಯರಾತ್ರಿಯಿಂದಲೇ ಜಾರಿಯಾಗಲಿದೆ. ಈ ಕುರಿತು ಕರ್ನಾಟಕ ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘ ಮಾಹಿತಿ ನೀಡಿದೆ. 20ರಿಂದ 30% ದರ ಏರಿಕೆ ಮಾಡಲಾಗಿದ್ದು, ಇಂದು ಮಧ್ಯರಾತ್ರಿಯಿಂದಲೇ ಜಾರಿಗೆ ಬರಲಿದೆ. ಪ್ರತಿದಿನ ಖಾಸಗಿ ಬಸ್ ಮಾಲೀಕರು ಕನಿಷ್ಠ 150 ಲೀಟರ್ ಡೀಸೆಲ್ ಹಾಕಿಸಿಕೊಳ್ಳಬೇಕು. ■10ನೇ ಪುಟಕ್ಕೆ

ದರ್ಶನ್‌ಗೆ ಇನ್ನೂ 1 ವರ್ಷ ಜೈಲು ಶಿಕ್ಷೆ!

ನವದೆಹಲಿ, ಮೇ 15– ಜಾಮೀನು ನಿರೀಕ್ಷೆಯಲ್ಲಿದ್ದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಪ್ರಮುಖ



ಆರೋಪಿ ನಟ ದರ್ಶನ್‌ಗೆ ಸುಪ್ರೀಂಕೋರ್ಟ್‌ನಲ್ಲಿ ಭಾರೀ ಹಿನ್ನಡೆಯಾಗಿದ್ದು ಇನ್ನು ಒಂದು ವರ್ಷ ಜೈಲಿನಲ್ಲಿ ಕಾಲ ಕಳೆಯುವುದು ಅನಿವಾರ್ಯವಾಗಿದೆ.

ಒಂದು ವರ್ಷದೊಳಗೆ ವಿಚಾರಣಾ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಸೂಚಿಸಿದ ಕೋರ್ಟ್ ಅಲ್ಲಿಯವರೆಗೆ ಜಾಮೀನು ನೀಡಲು ನಿರಾಕರಿಸಿದೆ. ಈ ಆದೇಶದಿಂದ ಮುಂದಿನ ವರ್ಷ ಮೇ 15ರವರೆಗೆ ದರ್ಶನ್‌ಗೆ ಜೈಲಿನಲ್ಲಿರುವುದು ಅನಿವಾರ್ಯವಾಗಿದೆ. ನ್ಯಾ. ಪರ್ದಿವಾಲಾ ಮತ್ತು ನ್ಯಾ. ವಿಜಯ್ ಬಿಷ್ಣೋಯಿ ಅವರ ಪೀಠದಲ್ಲಿ ದರ್ಶನ್ ಸಲ್ಲಿಸಿದ ಜಾಮೀನು ಅರ್ಜಿಯ ವಿಚಾರಣೆ ನಡೆಯಿತು. ■10ನೇ ಪುಟಕ್ಕೆ

ಸಾಮಾನ್ಯ ಜನರ ಬದುಕಿನ ಮೇಲೆ ನೇರ ದಾಳಿ

ಬೆಂಗಳೂರು: ಇಂಧನ ದರ ಹೆಚ್ಚಳವು ಸಾಮಾನ್ಯ ಜನರ ದೈನಂದಿನ ಬದುಕಿನ ಮೇಲೆ ನೇರ ಪರಿಣಾಮ



ಬೀರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನಲ್ಲಿ ಮಾತನಾಡಿದ ಅವರು, ಪೆಟ್ರೋಲ್–ಡೀಸೆಲ್ ದರ ಏರಿಕೆಯಿಂದ ಸಾರಿಗೆ ವೆಚ್ಚ ಹೆಚ್ಚಳವಾಗಲಿದ್ದು, ಅದರ ಪರಿಣಾಮವಾಗಿ ಆಹಾರ ಪದಾರ್ಥ ಸೇರಿದಂತೆ ಇತರೆ ವಸ್ತುಗಳ ಬೆಲೆಯೂ ಏರಿಕೆಯಾಗಲಿದೆ ಎಂದರು. ಈಗಾಗಲೇ ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿರುವ ಜನರ ಮೇಲೆ ಮತ್ತಷ್ಟು ಹೊರೆ ಹಾಕುವುದು ಸರಿಯಲ್ಲ ಎಂದು ಅಭಿಪ್ರಾಯಪಟ್ಟರು. ಇದರ ಸಂಪೂರ್ಣ ಹೊರೆ ಜನರ ಮೇಲೆ ಹಾಕಬಾರದು. ದರ ಏರಿಕೆ ನಿರ್ಧಾರ ವನ್ನು ಕೂಡಲೇ ಹಿಂಪಡೆಯಬೇಕು ಎಂದರು.

ಕೇಂದ್ರ ಸರ್ಕಾರದ ಸಮರ್ಥನೆ



ನವದೆಹಲಿ: ಭಾರತದಲ್ಲಿ ಇಂಧನ ದರ ಏರಿಕೆ ಜಾಗತಿಕ ಹೋಲಿಕೆಯಲ್ಲಿ ಅತ್ಯಲ್ಪ ವಾಗಿದೆ. ಹಲವಾರು ದೇಶಗಳಲ್ಲಿ ಇಂಧನ ದರಗಳು ಶೇ.20 ರಿಂದ ಶೇ.100 ರವರೆಗೆ ಹೆಚ್ಚಳ ಕಂಡಿದ್ದರೆ, ಭಾರತದಲ್ಲಿ ಪೆಟ್ರೋಲ್ ದರ ಸುಮಾರು ಶೇ.3.2 ಮತ್ತು ಡೀಸೆಲ್ ಶೇ. 3.4 ಮಾತ್ರ ಏರಿಕೆಯಾಗಿದೆ ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ದರ ಏರಿಕೆ ಸಮರ್ಥಿಸಿಕೊಂಡಿದ್ದಾರೆ.

ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ಬೆಲೆಗಳು ಬ್ಯಾರೆಲ್‌ಗೆ $100 ದಾಟಿದ ಸಂದರ್ಭದಲ್ಲೂ, ಸಾರ್ವಜನಿಕ ವಲಯದ ತೈಲ ಕಂಪನಿಗಳು ತಾತ್ಕಾಲಿಕವಾಗಿ ನಷ್ಟವನ್ನು ಹೊತ್ತುಕೊಂಡು ಗ್ರಾಹಕರ ಮೇಲೆ ತಕ್ಷಣದ ಭಾರ ಬೀಳದಂತೆ ನೋಡಿಕೊಂಡಿವೆ.

ಇದೇ ವೇಳೆ ಜಾಗತಿಕ ಇಂಧನ ಬೆಲೆ ಏರಿಕೆಯ ಅಂಕಿಅಂಶಗಳನ್ನೂ ರಿಜಿಜು ಹಂಚಿಕೊಂಡಿದ್ದಾರೆ. ಮಲೇಷ್ಯಾದಲ್ಲಿ ಪೆಟ್ರೋಲ್ ದರ ಸುಮಾರು ಶೇ.89.7 ಮತ್ತು ಡೀಸೆಲ್ ಶೇ.112.7 ಏರಿಕೆಯಾಗಿದ್ದರೆ, ಅಮೆರಿಕದಲ್ಲಿ ಪೆಟ್ರೋಲ್ ಶೇ.44 ಹಾಗೂ ಡೀಸೆಲ್ ಶೇ.48.1 ರಷ್ಟು ಹೆಚ್ಚಳ ಕಂಡಿದೆ. ಚೀನಾದಲ್ಲಿ ಪೆಟ್ರೋಲ್ ಶೇ.21.7 ಮತ್ತು ಡೀಸೆಲ್ ಶೇ.23.7ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಹುಡುಗ : ನೀನು 94% ಸೈಲೆಂಟ್, 95% ಚೆಲುವೆ, 96% ಆಕರ್ಷಣೆಯಾಗಿದ್ದೀಯಾ
ಹುಡುಗಿ : ಆಮೇಲೆ
ಹುಡುಗ : 97% ಕ್ಯೂಟ್, 98% ಸ್ವೀಟ್, 99% ಸ್ಮಾರ್ಟ್
ಹುಡುಗಿ : ಆಮೇಲೆ
ಹುಡುಗ : ನಾನು ಈಗ ಹೇಳಿದ್ದೆಲ್ಲಾ 100% ಜೋಕ್

ಮೈಸೂರು ಮಿತ್ರ

ಶನಿವಾರ, ಮೇ 16, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒಂದು ಹಂತದವರೆಗೆ ನೋವು ಸಹಿಸಿದ ನಂತರ ಮನುಷ್ಯ ಮೌನವಾಗುತ್ತಾನೆ. ಆಮೇಲೆ ಯಾರನ್ನು ದೂಷಿಸುವುದೂ ಇಲ್ಲ. ಯಾರಿಂದ ನಿರೀಕ್ಷಿಸುವುದೂ ಇಲ್ಲ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಮಳೆ ನೀರನ್ನು ಬಿಟ್ಟು ಮಂಜಿನ ನೀರಿಗೆ ಕೈಯೊಡ್ಡಿದ ಹಾಗೆ.

ನಿಮ್ಮ ಪತ್ರಗಳು

ಮೋದಿಯವರ ಹೇಳಿಕೆಯನ್ನು ತಪ್ಪಾಗಿ ಅರ್ಥೈಸುವುದು ಬೇಡ

ಮಾನ್ಯರೆ,

ದೇಶದ ಹಿತ ದೃಷ್ಟಿಯಿಂದ ಕೆಲ ಸಂಪನ್ಮೂಲಗಳ ಬಳಕೆಯಲ್ಲಿ ಮಿತವ್ಯಯ ಅನುಸರಿಸಿ ಎಂದು ಪ್ರಧಾನಿ ನರೇಂದ್ರಮೋದಿಯವರು ಹೇಳಿರುವ ಹೇಳಿಕೆಯನ್ನು ಕೆಲವರು ತಪ್ಪಾಗಿ ಅರ್ಥೈಸಿಕೊಂಡು ಅಸಮಾಧಾನ ಹಾಗೂ ಅಪಹಾಸ್ಯ ಮಾಡುತ್ತಿರುವುದು ವಿಪರ್ಯಾಸ. ಅನಗತ್ಯ ಚಿನ್ನ ಖರೀದಿ ಬೇಡ, ರಾಸಾಯನಿಕ ಗೊಬ್ಬರ ಬಳಕೆ ಕಡಿಮೆ ಮಾಡಿ, ಮನೆಯಿಂದಲೇ ಕೆಲಸ ಮಾಡಿ, ಪೆಟ್ರೋಲ್ ಡೀಸೆಲ್ ಗ್ಯಾಸ್ ಉಳಿಸಿ, ಅನಗತ್ಯ ವಿದೇಶ ಪ್ರವಾಸ ತಪ್ಪಿಸಿ ಹಾಗೂ ಭಾರತೀಯ ಉತ್ಪನ್ನಗಳಿಗೆ ಆದ್ಯತೆ ನೀಡಿ. ಇವು ಪ್ರಧಾನಿ ನರೇಂದ್ರ ಮೋದಿಯವರು ಸಮಸ್ತ ಭಾರತೀಯರಿಗೆ ಮಾಡಿಕೊಂಡಿರುವ ಕೋರಿಕೆ ಅಷ್ಟೇ. ಆದೇಶವಲ್ಲ! ಪ್ರಧಾನಿಯವರ ಮನವಿಯನ್ನು ಪಾಲಿಸುವುದು ಬಿಡುವುದು ದೇಶದ ಜನರ ವಿವೇಚನೆಗೆ ಬಿಟ್ಟದ್ದು. ಹೀಗಿರುವಾಗ ಸೋಶಿಯಲ್ ಮೀಡಿಯಾದಲ್ಲಿ ಪ್ರಧಾನಿಯವರನ್ನು ಹೀಯಾಳಿಸಿ ಅಪಹಾಸ್ಯ ಮಾಡುವುದು ಎಷ್ಟು ಸರಿ? ಇಷ್ಟಕ್ಕೂ ದೇಶದ ಹಿತ ಕಾಪಾಡುವ ದೃಷ್ಟಿಯಿಂದ 1967 ರಲ್ಲಿ ಇಂದಿರಾಗಾಂಧಿಯವರು ಕೂಡ ಇಂತಹದ್ದೇ ಹೇಳಿಕೆ ನೀಡಿರಲಿಲ್ಲವೇ? ಕಾಂಗ್ರೆಸ್ ಪ್ರಧಾನಿ ಆಗಿದ್ದ ಮನಮೋಹನ್ ಸಿಂಗ್ ಹಾಗೂ ರಾಜ್ಯದ ವೀರಪ್ಪ ಮೊಯ್ಲಿಯವರು ಕೂಡ ಹಲವು ಸಂದರ್ಭದಲ್ಲಿ ತೈಲದ ಮಿತ ಬಳಕೆ ಕುರಿತು ಹೇಳಿಕೆ ನೀಡಿರಲಿಲ್ಲವೇ? ಆಗೆಲ್ಲ ವಿರೋಧವಿಲ್ಲದ್ದು ಈಗ ಏಕೆ?

ಪ್ರಧಾನಿ ನರೇಂದ್ರ ಮೋದಿಯವರ ಮಿತವ್ಯಯದ ಕರೆಗೆ ಸ್ಪಂದಿಸಿರುವ ದೇಶದ ಹಲವು ಮಹನೀಯರು ಈಗಾಗಲೇ ಅದರ ಪಾಲನೆಯಲ್ಲಿದ್ದಾರೆ. ಇಂಧನ ಉಳಿಸಲು ಆದ್ಯತೆ ನೀಡುವ ಸಲುವಾಗಿ ಸ್ವತಃ ಪ್ರಧಾನಿಯವರು ತಮ್ಮ ಬೆಂಗಾವಲು ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡಿ ಮೇಲ್ಪಂಕ್ತಿಯಾಗಿದ್ದಾರೆ. ಪ್ರಧಾನಿಯವರ ಮನವಿ ಕೇವಲ ಒಂದು ಹೇಳಿಕೆಯಲ್ಲ. ಅದು ರಾಷ್ಟ್ರ ಹಿತಾಸಕ್ತಿಯ ಸಂದೇಶವಾಗಿದೆ. ದೇಶವನ್ನು ಬಲಪಡಿಸಲು ಮತ್ತು ಸಂಪನ್ಮೂಲಗಳನ್ನು ಸಂರಕ್ಷಿಸಲು ಪ್ರತಿಯೊಬ್ಬರ ಭಾಗವಹಿಸುವಿಕೆ ಅತ್ಯಗತ್ಯವಾಗಿದೆ. ಪ್ರಸ್ತುತ ಜಾಗತಿಕ ಸನ್ನಿವೇಶದಲ್ಲಿ ಮೋದಿಯವರ ಸಲಹೆಗಳನ್ನು ಆದಷ್ಟು ಪಾಲಿಸು ವುದು ದೇಶದ ಭದ್ರತೆ ಹಾಗೂ ಅಭಿವೃದ್ಧಿಯ ದೃಷ್ಟಿಯಿಂದ ಪೂರಕವಾಗಿದೆ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ಚಿನ್ನದ ಹೆಸರಿನಲ್ಲಾಗುವ ವಂಚನೆ ತಡೆಯಿರಿ

ಮಾನ್ಯರೆ,

ಚಿನ್ನದ ಹೂಡಿಕೆಯ ಹೆಸರಿನಲ್ಲಿ ನಡೆಯುತ್ತಿರುವ ದಗಾಬಾಜಿಗಳು ಅತ್ಯಂತ ಸಂಕೀರ್ಣವೂ ಮತ್ತು ವ್ಯವಸ್ಥಿತವೂ ಆಗಿವೆ. ವಂಚಕರು ಮುಖ್ಯವಾಗಿ ಪೊಂಜಿ ಮಾದರಿಯ ಯೋಜನೆಗಳನ್ನು ಬಳಸಿ ಅಲ್ಪಾವಧಿಯಲ್ಲಿ ಹಣ ದುಪ್ಪಟ್ಟು ಮಾಡುವ ಆಮಿಷವೊಡ್ಡಿ ಆರಂಭದಲ್ಲಿ ನಂಬಿಕೆಗಳಿಸಿ ನಂತರ ಕೋಟ್ಯಂತರ ರೂಪಾಯಿಗಳೊಂದಿಗೆ ನಾಪತ್ತೆಯಾಗುತ್ತಿದ್ದಾರೆ.

ಇತ್ತೀಚಿನ ಐಸಿಐಸಿಐ ಬ್ಯಾಂಕ್ ಹಗರಣದಲ್ಲಿ ಕಂಡುಬಂದಂತೆ ಅಸಲಿ ಚಿನ್ನದ ಬದಲಿಗೆ ನಕಲಿ ಚಿನ್ನದ ಪ್ಯಾಕೆಟ್‌ಗಳನ್ನು ಅಡವಿಟ್ಟು 23 ಕೋಟಿ ಸಾಲ ಪಡೆಯುವಂತಹ ಲೋನ್ ಫ್ರಾಡ್ ಜಾಲಗಳು ಬ್ಯಾಂಕಿಂಗ್ ವ್ಯವಸ್ಥೆಯನ್ನೇ ಅಲುಗಾಡಿಸುತ್ತಿವೆ. ಇದಲ್ಲದೆ ಅಸ್ತಿತ್ವದಲ್ಲಿಲ್ಲದ ಚಿನ್ನದ ಗಣಿಗಳಲ್ಲಿ ಹೂಡಿಕೆ ಅಥವಾ ಸುರಕ್ಷಿತ ಲಾಕರ್‌ನಲ್ಲಿ ಚಿನ್ನ ಇಟ್ಟಿರುವುದಾಗಿ ನಂಬಿಸುವ ಡಿಜಿಟಲ್ ಗೋಲ್ಡ್ ವಂಚನೆಗಳು ಹೆಚ್ಚಾಗುತ್ತಿವೆ.

ಮಾರುಕಟ್ಟೆಯಲ್ಲಿ ಕೃತಕವಾಗಿ ಷೇರು ಬೆಲೆ ಏರಿಸಿ ಹೂಡಿಕೆದಾರರನ್ನು ಸೆಳೆಯುವ ಪಂಪ್ ಅಂಡ್ ಡಂಪ್ ತಂತ್ರಗಳು ಮತ್ತು ನಕಲಿ ಸಾಲದ ಏಜೆಂಟರುಗಳು ದಾಖಲೆಗಳ ಹೆಸರಿನಲ್ಲಿ ಹಣ ಲೂಟಿ ಮಾಡುತ್ತಿರುವುದು ಸಾಮಾನ್ಯವಾಗಿದೆ. ದುರದೃಷ್ಟವಶಾತ್, ಈ ವಂಚಕ ಕಂಪನಿಗಳ ಹಿಂದೆ ಪ್ರಭಾವಿ ವ್ಯಕ್ತಿಗಳ ಕೈವಾಡವಿರುವುದರಿಂದ ಸಂತ್ರಸ್ತರು ತಮ್ಮ ಕಳೆದುಹೋದ ಹಣವನ್ನು ಮರಳಿ ಪಡೆಯಲು ಸಾಧ್ಯವಾಗದೆ ವರ್ಷಗಟ್ಟಲೆ ನ್ಯಾಯಾಲಯಗಳಿಗೆ ಅಲೆಯುತ್ತಿದ್ದಾರೆ. ಸರ್ಕಾರ ಇಂತಹ ವ್ಯವಸ್ಥಿತ ಮೋಸಗಳನ್ನು ತಡೆಯಬೇಕು.

–ಡಾ. ಎಚ್.ಕೆ.ವಿಜಯಕುಮಾರ, ಮೈಸೂರು.

ಪಾಲಿಕೆ, ಪೊಲೀಸರ ಗಮನಕ್ಕೆ!



ಮಾನ್ಯರೆ,

ಮೈಸೂರಿನ ಕುವೆಂಪು ನಗರದ ನೃಪತುಂಗ ರಸ್ತೆಯ ಪಾದಚಾರಿ ಮಾರ್ಗದ ನಡುವೆ ಈ ಬೃಹತ್ ಫಲಕವನ್ನು ಅಳವಡಿಸಲಾಗಿದೆ.ಈ ಫಲಕವು ಪಾದಚಾರಿ ಮಾರ್ಗಕ್ಕೆ ಅಡ್ಡವಾಗಿರುವುದರಿಂದ ನಡೆದುಕೊಂಡು ಹೋಗುವವರಿಗೆ ತಡೆಯುಂಟಾಗಿದೆ.ಅಷ್ಟೇ ಅಲ್ಲದೆ ರಸ್ತೆಯಲ್ಲಿ ಚಲಿಸುವ ವಾಹನಗಳಿಗೂ ಈ ಫಲಕ ಅಡ್ಡಿಯಾಗಿದೆ. ಈ ಕೂಡಲೇ ಪಾಲಿಕೆಯು ಈ ಅಪಾಯಕಾರಿ ಫಲಕವನ್ನು ಕಿತ್ತೆಸೆದು ಪಾದಚಾರಿಗಳ ಹಕ್ಕನ್ನು ರಕ್ಷಿಸಬೇಕಾಗಿದೆ. ಈ ಫಲಕವನ್ನು ತಕ್ಷಣ ತೆರವುಗೊಳಿಸಲು ಪೊಲೀಸ್ ಆಯುಕ್ತರು ಕುವೆಂಪು ನಗರ ಪೊಲೀಸರಿಗೆ ನಿರ್ದೇಶನ ನೀಡಲಿ.

–ಪಿ.ಜೆ.ರಾಘವೇಂದ್ರ ಮೈಸೂರು

ಮೈಸೂರು ವಿವಿ ಬಡಾವಣೆಯಲ್ಲಿ ನೀರಿನ ಸಮಸ್ಯೆ ಸರಿಪಡಿಸಿ

ಮಾನ್ಯರೆ,

ಮೈಸೂರಿನ ಮಹಾನಗರಪಾಲಿಕೆ ಹಾಗೂ ಶ್ರೀರಾಂಪುರ ಪಟ್ಟಣ ಪಂಚಾಯತಿ, ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಗೆ ಬರುವ ಲಿಂಗಾಂಬುಧಿಪಾಳ್ಯ (ಯುನಿವರ್ಸಿಟಿ ಲೇಔಟ್) ನಲ್ಲಿ ವಿಶ್ವವಿದ್ಯಾನಿಲಯ ಅಧಿಕಾರಿಗಳು ಹಾಗೂ ನೌಕರರು ಸಾರ್ವಜನಿಕರು ಸುಮಾರು ವರ್ಷಗಳಿಂದ ವಾಸಿಸುತ್ತಿದ್ದಾರೆ. ಆದರೆ ಈ ಬಡಾವಣೆಯಲ್ಲಿ ಕೆಲವು ದಿನಗಳಿಂದ ನೀರಿನ ಸಮಸ್ಯೆ ಉಂಟಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ವಿಚಾರವನ್ನು ಸಂಬಂಧಪಟ್ಟ ಶ್ರೀರಾಂಪುರ ಪಟ್ಟಣ ಪಂಚಾಯಿತಿ ಅಧಿಕಾರಿಗಳಿಗೆ ತಿಳಿಸಿದರೂ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ನೀರಿನ ಸಮಸ್ಯೆ ಬಗೆಹರಿಸಬೇಕೆಂದು ಈ ಮೂಲಕ ಮನವಿ.

–ಸಿದ್ದಲಿಂಗೇಗೌಡ, ಹೈರಿಗೆ, ಹೆಚ್. ಡಿ. ಕೋಟೆ ತಾ.

ಚಿಂತನೆ



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಸೋಲನ್ನೂ ಗೌರವಿಸುವ ಮನೋಭಾವ ರೂಢಿಸಿಕೊಳ್ಳಬೇಕು!!

ನಾವು ನಮ್ಮ ಜೀವಿತಾವಧಿಯಲ್ಲಿ ಹಲವಾರು ತರಹದ ಸ್ಪರ್ಧೆಗಳಲ್ಲಿ ಭಾಗವಹಿಸಬೇಕಾಗುತ್ತದೆ. ಅದರಲ್ಲಿ ಕೆಲವು ಬಹುಮಾನಕ್ಕಾಗಿ ಇರುವ ಸ್ಪರ್ಧೆಗಳಾದರೆ ಕೆಲವು ಜೀವನದ ಸವಾಲಿನ ಸ್ಪರ್ಧೆಗಳಾಗಿರುತ್ತವೆ. ಸ್ಪರ್ಧೆ ಎಂದಾಗ ಅದರಲ್ಲಿ ಸೋಲು–ಗೆಲುವು ಸಹಜವಾದುದು. ಇದು ಜೀವನದ ಬಹುತೇಕ ಸವಾಲಿಗೂ ಅನ್ವಯವಾಗುತ್ತದೆ.

ನಮ್ಮ ಮನಸ್ಸು ಸಾಮಾನ್ಯವಾಗಿ ಗೆಲುವನ್ನೇ ಬಯಸುತ್ತದೆ. ಕೆಲವು ಸಲ ಎದುರಾಳಿಯ ಸಾಮರ್ಥ್ಯ ಗಮನಿಸದೆ, ಅವರನ್ನು ಲಘುವಾಗಿ ಪರಿಗಣಿಸಿ ಸ್ಪರ್ಧೆಗೆ ಒಪ್ಪಿ ಸೋಲು ಕಂಡಾಗ ನಿರಾಶರಾಗುತ್ತೇವೆ. ಕೆಲವೊಮ್ಮೆ ಈ ಸೋಲು ಎಂಬುದು ಎಂತಹ ಆಘಾತ ನೀಡುತ್ತದೆ ಎಂದರೆ ಜೀವನವೇ ಬೇಡ ಎನಿಸುವಂತೆ ಆಗಿಬಿಡುತ್ತದೆ. ಆದರೆ ಸೋಲು ಹಾಗೂ ಗೆಲುವನ್ನು ಸಮಾನವಾಗಿ ಕಾಣುವ ಮನೋಭಾವ ಹೊಂದಿರು ವವರಿಗೆ ಸೋಲು ಏನೂ ಅನ್ನಿಸುವುದಿಲ್ಲ. ಅಂತಹ ಮನೋಭಾವ ಇಲ್ಲದಿದ್ದರೆ ಬರೀ ದುಃಖ ಅನುಭವಿಸಬೇಕಾಗುತ್ತದೆ.

ಇದೀಗ ತಾನೇ ಶಾಲಾ ಪರೀಕ್ಷೆಗಳು ಮುಗಿದಿವೆ. ಇನ್ನು ಕೆಲವೇ ದಿನಗಳಲ್ಲಿ ಫಲಿತಾಂಶವೂ ಪ್ರಕಟವಾಗಲಿವೆ. ಯಾರು ಉತ್ತಮವಾಗಿ ಪೂರ್ವ ತಯಾರಿ ಮಾಡಿಕೊಂಡಿರುತ್ತಾರೆಯೋ ಅವರು ಖಂಡಿತಾ ಉತ್ತಮ ದರ್ಜೆಯಲ್ಲಿ ಪಾಸಾಗುತ್ತಾರೆ. ಹಲವರಿಗೆ ರ್‍ಯಾಂಕು ಸಹ ದೊರಕುತ್ತದೆ. ಕೆಲವು ಮಕ್ಕಳು ರ್‍ಯಾಂಕ್ ಪಡೆದ ಮಕ್ಕಳಿಗಿಂತ ಶೇಕಡಾ ಒಂದೆರಡು ಅಂಕಗಳಲ್ಲಿ ರ್‍ಯಾಂಕಿನಿಂದ ಹೊರಗಿರುತ್ತಾರೆ. ಇಂತಹ ಮಕ್ಕಳ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಅವರು ಫಲಿತಾಂಶದ ನಂತರ ಮಾನಸಿಕವಾಗಿ ಕುಗ್ಗಿ ಹೋಗದಂತೆ ಪೋಷಕರು ಎಚ್ಚರಿಕೆ ವಹಿಸಬೇಕಾಗುತ್ತದೆ. ನಿರೀಕ್ಷೆಗೂ ಮೀರಿ ಅಂಕಗಳು ಬಂದಿದ್ದರೂ ಅಂತಹವರ ಮನೆಯಲ್ಲಿ ಸಂತೋಷದ ವಾತಾವರಣವೇ ಇರುವುದಿಲ್ಲ. ಇದು ನಮ್ಮ ಮಾನಸಿಕ ಸ್ಥಿತಿಯನ್ನು ಅವಲಂಭಿಸಿರುತ್ತದೆ. ನಮ್ಮ ಸೋಲಿಗಿಂತ ಮತ್ತೊಬ್ಬರೊಡನೆ ಮಾಡಿಕೊಳ್ಳುವ ಹೋಲಿಕೆಯು ನಮ್ಮಲ್ಲಿ ಹೆಚ್ಚಿನ ದುಃಖವನ್ನು ಉಂಟುಮಾಡುತ್ತದೆ.

ಇದು ಜೀವನಕ್ಕೂ ಅನ್ವಯವಾಗುತ್ತದೆ. ನಮ್ಮ ಜೀವನದಲ್ಲಿ ನಮ್ಮ ಅದೃಷ್ಟಕ್ಕೆ ಹಾಗೂ ಸಾಮರ್ಥ್ಯಕ್ಕೆ ಅನುಗುಣವಾಗಿ ನಮಗೆ ಒಂದಷ್ಟು ದೊರಕಿರುತ್ತದೆ. ಅದರಿಂದ ನಾವು ತೃಪ್ತ ಜೀವನ ನಡೆಸಲು ಅಡ್ಡಿಯೇನೂ ಇರುವುದಿಲ್ಲ. ಆದರೆ ಒಮ್ಮೆ ನಾವು ನಮ್ಮನ್ನು ಇತರರೊಡನೆ ಹೋಲಿಸಿಕೊಳ್ಳಲು ಆರಂಭಿಸಿದಾಗ ಇದ್ದಕ್ಕಿದ್ದಂತೆ ನಾವು ಮಾನಸಿಕವಾಗಿ ಕುಗ್ಗುತ್ತಾ ಹೋಗುತ್ತೇವೆ. ಆದರೆ ಒಂದು ವಿಷಯವನ್ನು ನಾವು ಸರಿಯಾಗಿ ಗಮನಿಸುವುದಿಲ್ಲ. ನನಗೆ ನನ್ನ ಅದೃಷ್ಟ ಹಾಗೂ ಸಾಮರ್ಥ್ಯಕ್ಕೆ ತಕ್ಕಂತಹ ಸ್ಥಿತಿ ದೊರಕಿದೆ, ಅಷ್ಟು ನನಗೆ ಸಾಕು ಎಂದು ಭಾವಿಸಿದಾಗ, ನಾವು ನಮಗಿರುವುದರಲ್ಲಿ ಸಂತೋಷ ಕಾಣಬಹುದು.

ಪರೀಕ್ಷಾ ಫಲಿತಾಂಶ ಪ್ರಕಟವಾದ ನಂತರ ಇಂತಹ ಬಿಕ್ಕಟ್ಟಿನ ಸ್ಥಿತಿಯನ್ನು ಅನೇಕ ಮಕ್ಕಳ ಮನೆಯಲ್ಲಿ ಕಾಣುತ್ತೇವೆ. ಅವರು ಕಷ್ಟಪಟ್ಟು ಓದಿ 92–95ರಷ್ಟು ಅಂಕ ಪಡೆದಿದ್ದರೂ ಪೋಷಕರು ಮಗುವಿಗೆ ಕಡಿಮೆ ಅಂಕ ಬಂದಿದೆ. ನಮ್ಮ ಪರಿಚಿತರ ಮಗನಿಗೆ/ಮಗಳಿಗೆ ಶೇ 96–98 ಅಂಕ ಬಂದಿದೆ. ಅವರ ಎದುರಿಗೆ ಹೇಗೆ ತಲೆ ಎತ್ತಿ ಓಡಾಡುವುದು ಎಂಬ ಯೋಚನೆ ಪೋಷಕರಿಗೆ. ಇಷ್ಟೊಂದು ಅಂಕ ಬಂದಿದೆ ಎಂಬ ಸಂತೋಷವೇ ಇರುವುದಿಲ್ಲ. ಹೀಗೆ ಪೋಷಕರು ತಲೆಕೆಡಿಸಿಕೊಂಡರೆ ಅವರ ಮಕ್ಕಳು ಅಷ್ಟು ಅಂಕ ಗಳಿಸಿದರೂ ತಾನು ದಡ್ಡನೇನೋ ಎಂಬ ವ್ಯಾಕುಲಕ್ಕೆ ಕಾರಣವಾಗುತ್ತದೆ. ಇದನ್ನು ಪೋಷಕರು ಅರಿಯಬೇಕು. ತಮ್ಮ ಮಗನಿಗಿಂತ ಕಡಿಮೆ ಅಂಕ ಬಂದವರೂ ಸಾಕಷ್ಟು ಜನರಿರುತ್ತಾರೆ. ಅವರನ್ನು ನಾವು ಗಮನಿಸುವುದೇ ಇಲ್ಲ. ಇದು ನಮ್ಮ ಜೀವನದ ದೊಡ್ಡ ತೊಡಕು. ಇದು ಸೋಲಲ್ಲದ ಸೋಲು. ಗೆದ್ದರೂ ಗೆದ್ದೆವೆಂಬ ಸಂತಸ ಕಾಣಲಾರದ ಮನೋಭಾವ.

ಇತ್ತೀಚೆಗೆ ಒಬ್ಬರು ದೊಡ್ಡದಾದ ಮನೆ ಕಟ್ಟಿಸಿದರು. ಜೋರಾಗಿ ಗೃಹಪ್ರವೇಶವನ್ನೂ ಮಾಡಿದರು. ಮನೆ ದೊಡ್ಡದೇ, ಮನೆಯೊಳಗೆ ಲಿಫ್ಟ್ ಸಹ ಇದೆ. ಎಲ್ಲಾ ಆಧುನಿಕ ಸಲಕರಣೆಗಳೂ ಇದೆ. ಅವರಿಗೆ ಇದನ್ನು ತನ್ನ ನೆಂಟರು ಪರಿಚಿತರು ನೋಡಬೇಕು, ಅವರೆದುರು ತನ್ನ ಪ್ರತಿಷ್ಠೆ ಹೆಚ್ಚಾಗಬೇಕು ಎಂದು ಎಲ್ಲರನ್ನೂ ಗೃಹಪ್ರವೇಶಕ್ಕೆ ಆಹ್ವಾನಿಸಿದರು. ನಿಜ, ಮನೆ ದೊಡ್ಡದಾಗಿದೆ, ಚೆನ್ನಾಗಿದೆ. ಬಂದವರಲ್ಲಿ ಹಲವರು ಕೇಳಿದ್ದು ಈ ಮನೆಯಲ್ಲಿ ಎಷ್ಟು ಜನರು ಇರುತ್ತೀರಿ? ಎಂದು. ಸದ್ಯಕ್ಕೆ ನಾವು ಮೂವರು ಇರುತ್ತೇವೆ. ಮಗನಿಗೆ ಮದುವೆಯಾಗಿ ಹೊರ ಊರಿನಲ್ಲಿ ಇದ್ದಾನೆ, ಯಾವಾಗಾದರೂ, ವರ್ಷಕ್ಕೆ ಒಂದೆರಡು ದಿನ ಬಂದು ಹೋಗುತ್ತಾನೆ. ಈಗ ಮಗಳು ನಮ್ಮೊಡನೆ ಇದ್ದಾಳೆ. ಅವಳಿಗೆ ಗಂಡು ಹುಡುಕುತ್ತಿದ್ದೇವೆ, ಮದುವೆ ಗೊತ್ತಾದರೆ ಅವಳಿಗೆ ಮದುವೆ ಮಾಡಿ ಕಳುಹಿಸುತ್ತೇವೆ ಎಂದರು.

ಅಂದರೆ ಈ ಮನೆಯಲ್ಲಿ ಮುಂದೆ ನೀವಿಬ್ಬರೇ ಆಗುತ್ತೀರಿ ಎಂದಾಗ, ಹೌದು. ಈಗ ನಮಗೂ ವಯಸ್ಸಾಗಿದೆ. ಆದರೆ ನಾವು ಬೇರೆಯವರಿಗಿಂತ ಕಡಿಮೆಯಿಲ್ಲ ಎಂದು ತೋರಿಸುವ ಸಲುವಾಗಿ ಇಷ್ಟು ದೊಡ್ಡ ಮನೆ ಕಟ್ಟಿಸಬೇಕಾಯಿತು ಎಂದರು. ಇದು ನಮ್ಮ ಪ್ರತಿಷ್ಠೆ, ನಮ್ಮ ಅನುಕೂಲಕ್ಕಿಂತ ಮತ್ತೊಬ್ಬರಿಗಿಂತ ನಾವು ಕಡಿಮೆಯಿಲ್ಲ ಎಂದು ತೋರಿಸುವ ಮನೋಭಾವ. ಮುಂದೆ ಮಗಳಿಗೆ ಮದುವೆಯಾದರೆ ಅಷ್ಟು ದೊಡ್ಡ ಮನೆಯಲ್ಲಿ ಇವರಿಬ್ಬರೇ. ಅದರಲ್ಲೂ ಒಬ್ಬರು ಹೊರಹೋದರೆ, ಮತ್ತೊಬ್ಬರು ಒಂದು ರೀತಿ ಭಯದಿಂದ ಇರಬೇಕಾಗುತ್ತದೆ. ಅಂತಹ ಸಂಕಟದ ಸ್ಥಿತಿ ಬರುತ್ತದೆ. ಆದರೆ ನಾವು ಯಾರಿಗೂ ಕಡಿಮೆಯಿಲ್ಲ ಎಂದು ತೋರಿಸುವ ಸಲುವಾಗಿ ಇಂತಹ ದುಸ್ಸಾಹಸಕ್ಕೆ ಕೈಹಾಕುತ್ತೇವೆ. ಇದೂ ಒಂದು ರೀತಿಯ ಮನೋಭಾವ.



> ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ನಾವು ಬೆಳೆಸಿಕೊಳ್ಳಬೇಕು. ಅಂತಹ ಮನೋಭಾವವನ್ನು ಮುಖ್ಯವಾಗಿ ಪೋಷಕರು ಮಕ್ಕಳಲ್ಲಿ ಬೆಳೆಸಬೇಕು. ಜೀವನ ಪಂದ್ಯವೂ ಸೋಲು–ಗೆಲುವಿನ ಹಾದಿಯಲ್ಲೇ ಇರುತ್ತದೆ. ಸೋತವರು ಮಾನಸಿಕವಾಗಿ ಕುಗ್ಗಿದರೆ ಮುಂದೆ ಅವರು ಯಾವ ಸ್ಪರ್ಧೆಯನ್ನೂ ಗೆಲ್ಲಲಾಗುವುದಿಲ್ಲ. ಸೋಲನ್ನೂ ಸಂಭ್ರಮಿಸುವವರು ಖಂಡಿತಾ ಮುಂದೆ ಗೆಲುವಿನ ಸರಣಿಯನ್ನೇ ತಮ್ಮದಾಗಿಸಿಕೊಳ್ಳುತ್ತಾರೆ ಎಂಬುದು ಜೀವನ ಪಾಠ.

ಸಾಮಾನ್ಯವಾಗಿ ಕ್ರೀಡಾ ಸ್ಪರ್ಧೆಗಳಲ್ಲಿ ಸಮಾನ ಶಕ್ತಿಯವರ ಜೊತೆಗೇ ಸ್ಪರ್ಧೆ ಇರುತ್ತದೆ. ಇಬ್ಬರೂ ಸಮಾನರೇ. ಆದರೆ ಒಬ್ಬರಿಗೆ ಸೋಲಾಗಲೇಬೇಕು, ಒಬ್ಬರು ಗೆಲ್ಲಲೇಬೇಕು. ಡ್ರಾ ಆಗುವ ಸನ್ನಿವೇಶಗಳನ್ನು ಹೊರತುಪಡಿಸಿ. ಹಾಗೆಂದು ಸೋತವರ ಸಾಮರ್ಥ್ಯ ಕಡಿಮೆ ಎಂದು ಭಾವಿಸ ಬಾರದು.

ಈ ಹಿಂದೆ ವಿಶ್ವಕಪ್ ಕ್ರಿಕೆಟ್‌ನಲ್ಲಿ ಭಾರತವು ಸೋತಾಗ ನಮ್ಮ ಮನೋಭಾವ ಹೇಗಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು. ಭಾರತ ತಂಡ ಫೈನಲ್ ಪಂದ್ಯಕ್ಕೆ ಬಂದಿದೆ ಎಂದರೆ ಅದು ಗೆಲ್ಲಲೇಬೇಕು ಎಂದು ಕಿಕೆಟ್ ಅಭಿಮಾನಿಗಳು ಆಶಿಸುತ್ತಾರೆ. ಇದಕ್ಕಾಗಿ ಬಾಜಿಗಳನ್ನೂ ಕಟ್ಟುತ್ತಾರೆ. 2003ರಲ್ಲಿ ಕ್ರಿಕೆಟ್ ವಿಶ್ವಕಪ್ ಪಂದ್ಯದಲ್ಲಿ ಭಾರತ ತಂಡ ಆಸ್ಟ್ರೇಲಿಯಾ ವಿರುದ್ಧ ಸೋಲು ಅನುಭವಿಸಿತು. ಕೊನೆಯ ಹಂತದವರೆಗೂ ತೀವ್ರ ಸ್ಪರ್ಧೆ ಇತ್ತು. ಆದರೆ ಭಾರತ ಸೋತಿತು. ಇದನ್ನು ಅರಗಿಸಿಕೊಳ್ಳಲಾರದ ಅನೇಕರು ನಂತರ ಪ್ರಾಣ ಕಳೆದುಕೊಂಡರು. ಪಂದ್ಯ ವೀಕ್ಷಿಸುತ್ತಿದ್ದ ಹಲವರು ಹೃದಯಾಘಾತಕ್ಕೆ ತುತ್ತಾದರು. ಇವರೆಲ್ಲರ ಮನಸ್ಸಿನಲ್ಲೂ ಭಾರತ ಗೆಲ್ಲುತ್ತದೆ, ಗೆಲ್ಲಲೇಬೇಕು ಎಂಬ ಹಂಬಲ ಇತ್ತು. ಆದರೆ ಎದುರಾಳಿ ತಂಡವೂ ಬಲಿಷ್ಠ ಎಂಬುದನ್ನು ನಾವು ಗಮನಿಸಲೇ ಇಲ್ಲ. ಈ ಒಂದು ಸೋಲು ನಮಗೆ ಮುಂದಿನ ಭವಿಷ್ಯವನ್ನೇ ಕಸಿದುಕೊಂಡಿತು ಎಂಬಂತೆ ಹಲವರು ಭಾವಿಸಿದ ಪರಿಣಾಮ ಅವರು ಪ್ರಾಣ ಕಳೆದುಕೊಂಡರು. ಈ ವರ್ಷವೂ ನಮ್ಮ ಕ್ರಿಕೆಟ್ ತಂಡ ವಿಶ್ವಕಪ್ ಗೆದ್ದಿದೆ. ಎದುರಾಳಿಯನ್ನು ದೊಡ್ಡದಾಗಿಯೇ ಸೋಲಿಸಿದೆ. ಈಗ ಆ ಎದುರಾಳಿ ತಂಡಕ್ಕೆ ಪ್ರೋತ್ಸಾಹದ ಮಾತುಗಳನ್ನು ಆ ದೇಶದ ಜನ ಆಡದಿದ್ದರೆ, ಆ ತಂಡ ಮಾನಸಿಕವಾಗಿ ಕುಗ್ಗಿ ಹೋಗುತ್ತದೆ. ನಮ್ಮ ತಂಡವು ಈ ಹಿಂದೆ ಗೆದ್ದಾಗ ತಂಡದವರನ್ನು ದೇವರಂತೆ ಭಾವಿಸಿ ಇಡೀ ದೇಶದಲ್ಲಿ ಅವರನ್ನು ಸಂಭ್ರಮದಿಂದ ಕಾಣಲಾಗಿತ್ತು ಅದೇ ಸೋಲು ಕಂಡು ದೇಶಕ್ಕೆ ಹಿಂದಿರುಗಿದಾಗ ಆ ತಂಡ ಜನರ ಕೋಪಕ್ಕೆ ಗುರಿಯಾಯಿತು. ಇಲ್ಲಿ ನಮ್ಮ ಕ್ರೀಡಾ ಮನೋಭಾವ ಸಂಕುಚಿತವಾಗುತ್ತಿರುವುದನ್ನು ಕಾಣಬಹುದು.

ಪರೀಕ್ಷೆಯಲ್ಲಿ ರ್‍ಯಾಂಕ್ ಪಡೆದ ಮಕ್ಕಳನ್ನು ಎಲ್ಲೆಡೆ ಸನ್ಮಾನಿಸಲಾಗುತ್ತದೆ. ಅವರನ್ನು ಹಾಡಿ ಹೊಗಳಲಾಗುತ್ತದೆ, ಪತ್ರಿಕೆಗಳಲ್ಲಿ ದೂರದರ್ಶನಗಳಲ್ಲಿ ಅವರ ಸಂದರ್ಶನ ಪ್ರಕಟವಾಗುತ್ತದೆ. ಆದರೆ ಅದೇ ಕೆಲವೇ ಅಂಕಗಳಲ್ಲಿ ರ್‍ಯಾಂಕ್ ಗಳಿಸದವರನ್ನು ಯಾರೂ ಕೇಳುವುದೇ ಇಲ್ಲ. ದುರ್ಬಲ ಮನಸ್ಸಿನವರಾದರೆ ಅಂತಹ ಮಕ್ಕಳು ಆಘಾತಕ್ಕೆ ಒಳಗಾಗುತ್ತಾರೆ. ನಾವು ನಮ್ಮ ಮಕ್ಕಳಿಗೆ ಮೊದಲಿನಿಂದಲೂ ಸೋಲನ್ನೂ ಸವಾಲಾಗಿ ಸ್ವೀಕರಿಸುವ ಮನೋಭಾವ ಬೆಳೆಸಬೇಕು. ಜೀವನದಲ್ಲಿ ಇಂತಹ ಹಲವು ಸ್ಪರ್ಧೆಗಳು, ಸನ್ನಿವೇಶಗಳು ಬರುತ್ತವೆ. ಇದೇ ಕೊನೆಯಲ್ಲ, ನಾವು ಅದಕ್ಕಿಂತ ದೊಡ್ಡದಾದ ಸವಾಲನ್ನೂ ಧೈರ್ಯ ವಾಗಿ ಸ್ವೀಕರಿಸಬೇಕು ಎಂಬುದನ್ನು ಆರಂಭದಿಂದಲೇ ಮಕ್ಕಳಿಗೆ ಕಲಿಸಬೇಕು.

ಸಮಾಜ ಅವರನ್ನು ಗುರುತಿಸಿ ಸನ್ಮಾನ ಮಾಡದಿದ್ದರೂ ನಾವು ನಮ್ಮ ಬಂಧು–ಬಳಗದವರೊಡನೆ ಸಂಭ್ರಮಿಸಬೇಕು. ಮಕ್ಕಳನ್ನು ಪ್ರೋತ್ಸಾಹಿಸಬೇಕು. ಆಗ ಮಕ್ಕಳು ಮುಂದಿನ ಸವಾಲುಗಳಿಗೆ ಸಿದ್ಧರಾಗುತ್ತಾರೆ. ಗೆಲುವನ್ನು ಹೇಗೆ ಸಂಭ್ರಮಿಸುತ್ತೇವೆಯೋ. ಹಾಗೆಯೇ ಸೋಲನ್ನೂ ಸವಾಲಾಗಿ ಸ್ವೀಕರಿಸುವ ಮನೋಭಾವ ಬೆಳೆಸಬೇಕು. ಜೀವನದಲ್ಲಿ ಶಾಲಾ ಪರೀಕ್ಷೆಗಳೇ ಅಂತಿಮವಲ್ಲ. ಜೀವನದಲ್ಲಿ ಅದಕ್ಕಿಂತಲೂ ದೊಡ್ಡದಾದ ಸವಾಲುಗಳು ಬರುತ್ತವೆ, ಅದನ್ನೂ ನಾವು ಸಮಚಿತ್ತದಿಂದ ಎದುರಿಸಬೇಕು ಎಂಬುದನ್ನು ಕಲಿಸಬೇಕು.

ಇತ್ತೀಚೆಗೆ ಸಾಮಾಜಿಕ ಮಾಧ್ಯಮದಲ್ಲಿ ಬಂದ ಒಂದು ಪ್ರಸಂಗ ಚೇತೋಹಾರಿಯಾಗಿ ಕಂಡುಬಂದಿತು. ಅಂತಾರಾಷ್ಟ್ರೀಯ ಸ್ಪರ್ಧೆ. ಅಲ್ಲಿ ಸುಮಾರು ಹತ್ತು ವಯಸ್ಸಿನ ಇಬ್ಬರು ಹೆಣ್ಣುಮಕ್ಕಳ ನಡುವಿನ ಸ್ಪರ್ಧೆ ಅದು. ಇಬ್ಬರು ಸಮ ಸಾಮರ್ಥ್ಯದವರು. ಅವರ ನಡುವೆ ಅಂತಿಮ ಪಂದ್ಯ ನಡೆಯಿತು. ಆ ಮಕ್ಕಳು ಸೇರಿದ್ದ ದೇಶ ದವರು ಸಹಜವಾಗಿ ತಮ್ಮ ಮಗುವೇ ಗೆಲ್ಲಬೇಕು ಎಂದು ಬಯಸಿ ದ್ದರು. ಸ್ಪರ್ಧೆ ಎಂದಮೇಲೆ ಒಬ್ಬರು ಸೋಲುವುದು ಅನಿವಾರ್ಯ. ಅದು ಬೇಕೆಂದೇ ಸೋತ ಸೋಲಾಗಿರುವುದಿಲ್ಲ. ಯಾವುದೋ ಒಂದು ಸಣ್ಣ ತಪ್ಪು ಪಂದ್ಯದಲ್ಲಿ ಸೋಲುವಂತೆ ಮಾಡಿರುತ್ತದೆ. ಆ ಪಂದ್ಯದಲ್ಲೂ ಆಗಿದ್ದು ಹಾಗೆಯೇ. ಒಬ್ಬ ಬಾಲಕಿ ಗೆದ್ದಳು, ಮತ್ತೊಬ್ಬಳು ಸೋತಳು.

ಪಂದ್ಯ ಸಮಸಾಮರ್ಥ್ಯದ್ದು. ಗೆಲುವಿನ ನಿರ್ಣಯ ಮೇಲ್ನೋಟಕ್ಕೆ ಕಾಣದಂತಹುದು. ಹಾಗೇ ನೋಡಿದಾಗ ಫಲಿತಾಂಶ ಇಬ್ಬರ ಪರವಾಗಿಯೂ ಬರಬಹುದಾಗಿದ್ದಂತಹುದು. ನಿರ್ಣಾಯಕರು ಇಬ್ಬರೂ ಬಾಲಕಿಯರನ್ನೂ ವೇದಿಕೆಗೆ ಕರೆದರು. ಇಬ್ಬರ ಒಂದೊಂದು ಕೈಹಿಡಿದರು. ಗೆದ್ದವರ ಕೈ ಮೇಲಕ್ಕೆ ಮಾಡಿ ಗೆಲುವು ಸೂಚಿಸುವುದು ಅಲ್ಲಿನ ಪಂದ್ಯದ ರೀತಿ. ಇಬ್ಬರೂ ಮಕ್ಕಳು ಮಾನಸಿಕ ಒತ್ತಡಕ್ಕೆ ಒಳಗಾಗಿ ನಿಂತಿದ್ದರು. ಕೊನೆಗೆ ನಿರ್ಣಾಯಕರು ಒಬ್ಬ ಸ್ಪರ್ಧಿಯ ಕೈಮೇಲಕ್ಕೆ ಎತ್ತಿದರು. ಅಂದರೆ ಕೈಮೇಲೆತ್ತದ ಬಾಲಕಿ ಸೋತಿದ್ದಳು. ಗೆದ್ದವರಲ್ಲಿ ಯಾವಾಗಲೂ ಸಂಭ್ರಮ ಇದ್ದೇ ಇರುತ್ತದೆ. ಆಗ ಸೋತವರನ್ನು ಯಾರೂ ಮಾತನಾಡಿಸದೆ ಅವರು ಮತ್ತಷ್ಟು ಮಾನಸಿಕವಾಗಿ ಕುಗ್ಗಿಹೋಗುವಂತೆ ಮಾಡುವ ದೃಶ್ಯ ಸಾಮಾನ್ಯ. ಆದರೆ ಇಲ್ಲಿ ಗೆದ್ದ ಬಾಲಕಿ ಆ ರೀತಿಯ ಸಂಭ್ರಮದ ಆಚರಣೆಗೆ ಹೋಗದೆ, ಸೋತ ಸಮವಯಸ್ಕ ಬಾಲಕಿಯ ಬಳಿ ಬಂದು ಆಕೆಗೆ ಹಸ್ತಲಾಘವ ಇತ್ತಿದ್ದೇ ಅಲ್ಲದೆ, ಆಕೆಯನ್ನು ತನ್ನ ಬೆನ್ನ ಮೇಲೆ ಕೂರಿಸಿಕೊಂಡು ಓಡಾಡಿದಳು.

ಇದು ಸೋತ ಬಾಲಕಿಯ ಮುಖದಲ್ಲಿ ಮತ್ತೆ ಕಳೆ ಬರುವಂತೆ ಆಯಿತು. ಇಂತಹ ಮನೋಭಾವ ಆ ಸಣ್ಣ ಹುಡುಗಿಯಲ್ಲಿ ಕಂಡು ಆಶ್ಚರ್ಯವಾಯಿತು. ಖಂಡಿತಾ ಆಕೆಗೆ ಆ ಮನೋಭಾವ ಬರಲು ಆಕೆಯ ತರಬೇತಿದಾರರು ಹಾಗೂ ಪೋಷಕರು ಕಾರಣರಾಗಿರುತ್ತಾರೆ. ಈಕೆಯೇ ಸೋತಿದ್ದರೂ ಅವರು ಅದೇ ಕ್ರೀಡಾ ಮನೋಭಾವ ಪ್ರದರ್ಶಿಸುತ್ತಿದ್ದರು. ಮತ್ತೊಂದು ಪಂದ್ಯ ಇದ್ದೇ ಇರುತ್ತದೆ. ಈಗ ಸೋತವರು ಆಗಲೂ ಸೋಲುತ್ತಾರೆ ಎಂದೇನಿಲ್ಲ. ಈಗ ಗೆದ್ದ ಹುಡುಗಿ ಆಗಲೂ ಗೆದ್ದೇ ಗೆಲ್ಲುತ್ತಾಳೆ ಎಂದಿಲ್ಲ. ಆದ್ದರಿಂದ ಸೋಲು–ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ನಾವು ಬೆಳೆಸಿಕೊಳ್ಳಬೇಕು. ಅಂತಹ ಮನೋಭಾವ ಮುಖ್ಯವಾಗಿ ಪೋಷಕರು ಮಕ್ಕಳಲ್ಲಿ ಬೆಳೆಸಬೇಕು. ಜೀವನ ಪಂದ್ಯವೂ ಸೋಲು ಗೆಲುವಿನ ಹಾದಿಯಲ್ಲೇ ಇರುತ್ತದೆ. ಸೋತವರು ಮಾನಸಿಕವಾಗಿ ಕುಗ್ಗಿದರೆ ಮುಂದೆ ಅವರು ಯಾವ ಸ್ಪರ್ಧೆಯನ್ನೂ ಗೆಲ್ಲಲಾಗುವುದಿಲ್ಲ. ಸೋಲನ್ನೂ ಸಂಭ್ರಮಿಸುವವರು ಖಂಡಿತಾ ಮುಂದೆ ಗೆಲುವಿನ ಸರಣಿಯನ್ನೇ ತಮ್ಮದಾಗಿಸಿಕೊಳ್ಳುತ್ತಾರೆ ಎಂಬುದು ಜೀವನ ಪಾಠ.

ತಿಲಕ್‌ನಗರದಲ್ಲಿ ಶತಮಾನೋತ್ಸವ ಆಚರಿಸಿಕೊಂಡ ಸರ್ಕಾರಿ ಶಾಲೆ

ಸ್ಥಳೀಯರಿಂದ ಪುನರ್ಜೀವನಗೊಂಡ ಶಾಲಾ ಕಟ್ಟಡ; ಸಂಸದ ಯದುವೀರ್, ಶಾಸಕ ಕೆ. ಹರೀಶ್‌ಗೌಡ, ಮಾಜಿ ಶಾಸಕ ನಾಗೇಂದ್ರ ಶುಭ ಕೋರಿಕೆ

ಮೈಸೂರು,ಮೇ.15(ಎಂಟಿವೈ)– ಖಾಸಗಿ ಶಿಕ್ಷಣ ಸಂಸ್ಥೆಗಳ ಆರ್ಭಟದಿಂದ ಸರ್ಕಾರಿ ಶಾಲೆಗಳು ನಲುಗಿ ಹೋಗದಂತೆ ಅವುಗಳ ಸಂರಕ್ಷಣೆ ಮಾಡುವ ಜವಾಬ್ದಾರಿ ಎಲ್ಲರದ್ದಾಗಿದೆ ಎಂದು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ತಿಲಕ್‌ನಗರದಲ್ಲಿರುವ ಸರ್ಕಾರಿ ಶಾಲೆಯಲ್ಲಿ ನಡೆದ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಪ್ರಸ್ತುತದಲ್ಲಿ ಸರ್ಕಾರಿ ಶಾಲೆಗಳು ಅನೇಕ ಸವಾಲುಗ ಳನ್ನು ಎದುರಿಸುತ್ತಿವೆ. ಅದರಲ್ಲೂ ಖಾಸಗಿ ಶಾಲೆಗಳಿಂದ ಅನೇಕ ಸರ್ಕಾರಿ ಶಾಲೆಗಳು ಮುಚ್ಚುವ ಪರಿಸ್ಥಿತಿ ಬಂದಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವ ಹೊಣೆಗಾರಿಕೆ ಎಲ್ಲರದ್ದಾಗಿದೆ. ಮೈಸೂರಿನ ತಿಲಕ್‌ನಗರದ 25ನೇ ವಾರ್ಡ್ ವ್ಯಾಪ್ತಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ 120 ವರ್ಷ ಪೂರೈಸಿರುವುದು ಶ್ಲಾಘನೀಯ. ಈ ಶಾಲೆಯನ್ನು ತಿಲಕ್‌ನಗರ ಹಿತರಕ್ಷಣಾ ಸಮಿತಿ ಸದಸ್ಯರು ಪುನಶ್ಚೇತನಗೊಳಿಸಿರುವುದು ಹೆಮ್ಮೆಪಡುವ ಸಂಗತಿ ಎಂದರು.

ಮೈಸೂರು ಅರಸರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದಾರೆ. ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಿಕ್ಷಣಕ್ಕೆ ನೀಡಿದ ಕೊಡುಗೆ ಅಪಾರ. ವಿವಿಧೆಡೆ ಶಾಲಾ–ಕಾಲೇಜು ಸ್ಥಾಪಿಸಿ ಎಲ್ಲರಿಗೂ ಶಿಕ್ಷಣ ದೊರಕುವಂತೆ ಮಾಡಿದ್ದಾರೆ. ಅವರ ಕಾಲದಲ್ಲಿ ಸ್ಥಾಪಿಸಲಾದ ನೂರಾರು ಶಾಲೆಗಳಲ್ಲಿ ತಿಲಕ್‌ನಗರದ ಶಾಲೆಯೂ ಒಂದಾಗಿದೆ. ಇದುವರೆಗೆ ಸಾವಿರಾರು ಮಕ್ಕಳಿಗೆ ವಿದ್ಯಾರ್ಜನೆ ಮಾಡುತ್ತಿರುವುದು ಸಂತೋಷದ ಸಂಗತಿ ಎಂದು ಅಭಿಪ್ರಾಯಪಟ್ಟರು.



ಮೈಸೂರು ತಿಲಕ್‌ನಗರದಲ್ಲಿರುವ ಸರ್ಕಾರಿ ಶಾಲೆಯ ಆವರಣದಲ್ಲಿ ನಡೆದ ಶಾಲಾ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಮಾಜಿ ಶಾಸಕ ಎಲ್.ನಾಗೇಂದ್ರ ಇತರರು ಭಾಗವಹಿಸಿದ್ದರು.

ಶಾಲೆಯನ್ನು ಸ್ಥಳೀಯರೇ ಪುನರ್ಜೀವನಗೊಳಿಸಿರುವುದು ಸಂತಸದ ಸಂಗತಿ. ಮುಂದಿನ ದಿನಗಳಲ್ಲಿ ಶಾಲೆಯ ಸುತ್ತ ಕಾಂಪೌಂಡ್ ನಿರ್ಮಿಸಲು ನೆರವು ನೀಡುತ್ತೇನೆ. ಸಿಎಸ್‌ಆರ್ ನಿಧಿಯಿಂದ ಸ್ಮಾರ್ಟ್ ಕ್ಲಾಸ್, ಡಿಜಿಟಲ್ ಗ್ರಂಥಾಲಯ ಸ್ಥಾಪನೆಯೊಂದಿಗೆ ಶಾಲೆಯ ಮಕ್ಕಳಿಗೆ ಅವಶ್ಯಕತೆಯಿರುವ ಸೌಲಭ್ಯ ಕಲ್ಪಿಸಲಾಗುವುದು ಎಂದು ಭರವಸೆ ನೀಡಿದರು.

ಮಾಜಿ ಶಾಸಕ ಎಲ್.ನಾಗೇಂದ್ರ ಮಾತನಾಡಿ, ಮಹಾರಾಜರ ಒತ್ತಾಸೆಗೆ ಸ್ಥಳೀಯರೂ ಕೈ ಜೋಡಿಸಿ ಈ ಶಾಲೆಯನ್ನು ಉಳಿಸಿಕೊಂಡಿದ್ದಾರೆ. ತಿಲಕ್‌ನಗರದ ಸುತ್ತಮುತ್ತಲಿನ ನಿವಾಸಿಗಳು, ಶಾಲಾ ಆಡಳಿತ ಮಂಡಳಿ, ಹಳೆಯ ವಿದ್ಯಾರ್ಥಿಗಳ ಸಂಘ ಮತ್ತು ಪೋಷಕರು ಶಾಲೆಯ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಗಾಣಿಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಅನಂತು, ಪಾಲಿಕೆ ಮಾಜಿ ಸದಸ್ಯರಾದ ಎಸ್.ಎಂ.ನಂದಕುಮಾರ್, ಆರ್.ರಂಗಸ್ವಾಮಿ, ಜನತಾ ಬಜಾರ್ ನಿರ್ದೇಶಕ ಎನ್.ಮಂಜುನಾಥ್, ಶಾಲಾ ಆಡಳಿತ ಮಂಡಳಿ, ಹಳೆಯ ವಿದ್ಯಾರ್ಥಿಗಳ ಸಂಘದ ಪದಾಧಿಕಾರಿಗಳು, ಪೋಷಕರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಶಾಲೆ ಅಭಿವೃದ್ಧಿಗೆ ಅಗತ್ಯ ನೆರವು

ತಿಲಕ್‌ನಗರದ ಹಿತರಕ್ಷಣಾ ಸಮಿತಿ ಸದಸ್ಯರು, ಸ್ಥಳೀಯರು ಸರ್ಕಾರಿ ಶಾಲೆಗೆ ಹೊಸ ರೂಪ ನೀಡಿರುವುದು ಶ್ಲಾಘನೀಯ. ಸಾರ್ವಜನಿಕರು ಸರ್ಕಾರಿ ಶಾಲೆ ಉಳಿಸುವ ಅಭಿಯಾನ ನಡೆಸಿ, ತಮ್ಮ ಬಡಾವಣೆಯಲ್ಲಿರುವ ಶಾಲೆಯನ್ನು ಅಭಿವೃದ್ಧಿಪಡಿಸಿದ್ದಾರೆ. ಇದರಿಂದ ಬಡಾವಣೆಯಲ್ಲಿರುವ ಮತ್ತಷ್ಟು ಶಾಲೆಗಳ ಅಭಿವೃದ್ಧಿಗೆ ಸ್ಥಳೀಯರು ಮುಂದಾಗಲು ಪ್ರೇರಣೆ ನೀಡಿದಂತಾಗಿದೆ. ಈ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಶಾಲಾ ಅಭಿವೃದ್ಧಿಗೆ ಅಗತ್ಯ ನೆರವು ಒದಗಿಸಲಾಗುವುದು.

– ಕೆ.ಹರೀಶ್ ಗೌಡ, ಶಾಸಕ



ತಿಲಕ್‌ನಗರದ ಸರ್ಕಾರಿ ಶಾಲೆಯ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಪಾಲ್ಗೊಂಡು, ಶುಭ ಕೋರಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮುಂದಿನ ಚುನಾವಣೆಯಲ್ಲೂ ಚಾಮುಂಡೇಶ್ವರಿ ಕ್ಷೇತ್ರವೇ ನನ್ನ ಕಣ; ಜೆಡಿಎಸ್‌ನಿಂದಲೇ ಸ್ಪರ್ಧೆ

ಮಾಜಿ ಪ್ರಧಾನಿ ದೇವೇಗೌಡರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದ ಬಳಿಕ ಜಿಟಿಡಿ ಘೋಷಣೆ



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಶುಕ್ರವಾರ ಭೇಟಿ ಮಾಡಿ, ಹುಟ್ಟುಹಬ್ಬದ ಶುಭಾಶಯ ತಿಳಿಸಿ, ಅಭಿನಂದಿಸಿದರು. ಈ ವೇಳೆ ಹೆಚ್.ಡಿ.ದೇವೇಗೌಡರ ಪುತ್ರಿಯರಾದ ಶ್ರೀಮತಿ ಅನಸೂಯ, ಶ್ರೀಮತಿ ಶೈಲಜಾ, ಮುಡಾ ಮಾಜಿ ಅಧ್ಯಕ್ಷ ಹರದನಹಳ್ಳಿ ವಿಜಯ್, ಮಿರ್ಲೆ ರಾಜೀವ್, ಕು.ನಮಿತಾ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು, ಮೇ 15– ನಾನು ಜೆಡಿಎಸ್‌ನಲ್ಲೇ ಇದ್ದೇನೆ, 2028ರ ವಿಧಾನಸಭೆ ಚುನಾವಣೆಯಲ್ಲೂ ಜೆಡಿಎಸ್‌ನಿಂದಲೇ ಸ್ಪರ್ಧಿಸುತ್ತೇನೆ. ಇದರಿಂದ ಹಿಂದೆ ಸರಿಯುವ ಮಾತೇ ಇಲ್ಲ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಪುನರುಚ್ಚರಿಸಿದ್ದಾರೆ.

ಬೆಂಗಳೂರಿನಲ್ಲಿ ಶುಕ್ರವಾರ ಜೆಡಿಎಸ್ ವರಿಷ್ಠರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಭೇಟಿ ಮಾಡಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದರು.

ಹಿರಿಯರು ಹಾಗೂ ಪೂಜ್ಯರಾದ ಹೆಚ್.ಡಿ.ದೇವೇಗೌಡರು 93ನೇ ವರ್ಷದ ಹುಟ್ಟುಹಬ್ಬ(ಮೇ 18) ಆಚರಿಸಿಕೊಳ್ಳಲಿರುವ ಹಿನ್ನೆಲೆಯಲ್ಲಿ ಮಹಾಲಕ್ಷ್ಮಿ ದೇವಾಲಯದಲ್ಲಿ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿದ್ದೆ. ಹಾಗಾಗಿ ಪ್ರಸಾದವನ್ನು ದೇವೇಗೌಡರಿಗೆ ನೀಡಿ, ಶುಭಾಶಯ ತಿಳಿಸಿ ಆಶೀರ್ವಾದ ಪಡೆದಿದ್ದೇನೆ ಎಂದರು.

ರಾಜಕೀಯ ಚರ್ಚೆ ಮಾಡಿಲ್ಲ: ಆರಂಭದಲ್ಲೇ ರಾಜಕೀಯಕ್ಕೆ ಸಂಬಂಧಿಸಿದ ಮಾತುಕತೆ ಬೇಡ ಎಂದು ನಿವೇದಿಸಿಕೊಂಡೆ. ಹಾಗಾಗಿ ಭೇಟಿ ವೇಳೆ ಯಾವುದೇ ರಾಜಕೀಯದ ಬಗ್ಗೆ ಮಾತನಾಡಿಲ್ಲ. ಆದರೂ ಸುದೀರ್ಘವಾಗಿ ನಮ್ಮೊಂದಿಗೆ ಮಾತನಾಡಿದ ಗೌಡರು, 10 ರೂ. ಬಾಡಿಗೆ ಮನೆಯಲ್ಲಿದ್ದ ದಿನಗಳಿಂದ ಈವರೆಗಿನ ಹಲವು ವಿಚಾರ ಹಂಚಿಕೊಂಡರು. ವಾಲ್ಮೀಕಿ ರಾಮಾಯಣವನ್ನು ಈಗ ಓದುತ್ತಿದ್ದೇನೆ ಎಂದು ತಿಳಿಸಿದರು.

ಹೆಚ್.ಡಿ.ದೇವೇಗೌಡರು ದೇಶದ ಪ್ರಧಾನಿಯಾಗಿ ಕನ್ನಡ ನಾಡಿನ ಕೀರ್ತಿ ಮೆರೆಸಿದ್ದಾರೆ. ಇವರಿಂದಲೇ ರಾಗಿ ಮುದ್ದೆ ರಾಷ್ಟ್ರ ರಾಜಧಾನಿಯಲ್ಲಿ ಪ್ರಚಾರವಾಯಿತು ಎಂದು ಪ್ರಧಾನಿ ಮೋದಿ ಅವರೇ ಹೇಳಿದ್ದಾರೆ. ದೇವೇ ಗೌಡರು ಮುಖ್ಯಮಂತ್ರಿಯಾಗಿ ಹಾಗೂ ಪ್ರಧಾನಿಯಾಗಿ ಅಪಾರ ಸೇವೆ ಸಲ್ಲಿಸಿದ್ದಾರೆ. ರೈತರು, ಬಡವರಿಗಾಗಿ 65 ವರ್ಷ ನಿರಂತರ ಸೇವೆ ಮಾಡಿದ್ದಾರೆ. ನನ್ನನ್ನು ಮರಿ ದೇವೇಗೌಡ ಎಂದು ಬೆನ್ನುತಟ್ಟಿ ಜೊತೆಯಲ್ಲೇ ಬೆಳೆಸಿದ್ದಾರೆ. ದೊಡ್ಡ ಗೌಡರ ಬಗ್ಗೆ ಅಪಾರ ಅಭಿಮಾನ, ಪ್ರೀತಿ ಇದೆ ಎಂದರು.

ದಂಪತಿ ಆಶೀರ್ವದಿಸಿದ್ದಾರೆ: ಮಹಾಲಕ್ಷ್ಮಿ ದೇವಸ್ಥಾನದ ಪ್ರಸಾದ ನೀಡಿ, ಹುಟ್ಟುಹಬ್ಬದ ಶುಭಾಶಯ ಕೋರಿದ್ದೇನೆ. ನಿಮ್ಮಿಂದ ಈ ನಾಡು ಹಾಗೂ ದೇಶಕ್ಕೆ ಮತ್ತಷ್ಟು ಸೇವೆ ಸಿಗಲಿ, ತಾಯಿ ಚಾಮುಂಡೇಶ್ವರಿ ಆಯುರಾರೋಗ್ಯ ಕರುಣಿಸಲಿ ಎಂದು ಬೇಡಿಕೊಂಡಿದ್ದೇನೆ. ಇದೇ ವೇಳೆ ದೇವೇಗೌಡರ ಧರ್ಮಪತ್ನಿ ಚನ್ನಮ್ಮ ಅವರ ಆಶೀರ್ವಾದವನ್ನೂ ಪಡೆದಿದ್ದೇನೆ. ದಂಪತಿಗಳಿಬ್ಬರೂ ಚೆನ್ನಾಗಿರು, ಒಳ್ಳೆಯದಾಗಲಿ ಎಂದು ಹಾರೈಸಿದ್ದಾರೆ ಎಂದು ಜಿಟಿಡಿ ತಿಳಿಸಿದರು.

ನಾನು ಜೆಡಿಎಸ್‌ನಲ್ಲೇ ಇದ್ದೇನೆ: ಈಗಿನಿಂದ ಪಕ್ಷದಲ್ಲಿ ಸಕ್ರಿಯರಾಗುವಿರಾ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿ, ನಾನು ಎಷ್ಟು ಪ್ರಾಮಾಣಿಕವಾಗಿ ಪಕ್ಷಕ್ಕಾಗಿ ದುಡಿದಿದ್ದೇನೆ, ನನ್ನ ಗುಣ–ನಡತೆ ಹೇಗಿದೆ ಎಂಬುದು ಗೌಡರಿಗೆ ಗೊತ್ತಿದೆ. ಈವರೆಗೆ ಪಕ್ಷದ ಯಾವುದೇ ಪದಾಧಿಕಾರಿಗಳಾಗಲೀ, ಕೇಂದ್ರ ಸಚಿವ ಕುಮಾರಸ್ವಾಮಿ ಆಗಲಿ, ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಗಲಿ ನನಗೆ ಆಹ್ವಾನ ನೀಡಿಲ್ಲ. ಮುಂದೆ ಆಹ್ವಾನ ನೀಡಿದರೆ ನೋಡೋಣ. ನಮ್ಮ ಕ್ಷೇತ್ರದಲ್ಲಿ ಸುಮಾರು 6 ಲಕ್ಷ ಜನಸಂಖ್ಯೆ ಇದೆ. ಇತರೆ ಕ್ಷೇತ್ರಗಳಿಗಿಂತ ಮೂರು ಪಟ್ಟು ದೊಡ್ಡದಿದೆ. ಅಭಿವೃದ್ಧಿಗಾಗಿ ಹಗಲಿರುಳು ದುಡಿಯುತ್ತಿದ್ದೇನೆ. ನಾನು ಜೆಡಿಎಸ್‌ನಲ್ಲೇ ಇದ್ದೇನೆ, 2028ರ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲೇ ಜೆಡಿಎಸ್‌ನಿಂದ ಸ್ಪರ್ಧಿಸುತ್ತೇನೆ. ಇದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು.

ಹಿಂದೆಯೂ ತಾವು ಇದೇ ರೀತಿ ಬೇಸರಗೊಂಡಾಗ ದೇವೇಗೌಡರು ಕರೆದು ಮಾತನಾಡಿದ್ದರು. ನಂತರ ನೀವು ಮತ್ತೆ ಪಕ್ಷದಲ್ಲಿ ಸಕ್ರಿಯವಾಗಿದ್ದೀರಿ. ಈಗಲೂ ಅದೇ ರೀತಿ ಆಗಬಹುದಾ ಎಂಬುದಕ್ಕೆ ಪ್ರತಿಕ್ರಿಯಿಸಿ, ಆ ಕಾಲ ಬರಬಹುದು ಎಂಬುದು ನನ್ನ ಆಶಯವೂ ಆಗಿದೆ ಎಂದರು.

ಡೋಂಟ್ ವರಿ...! ಎಲ್ಲಾ ಒಳ್ಳೇದಾಗುತ್ತೆ...!!

ಬೆಂಗಳೂರು: ಮಾಜಿ ಪ್ರಧಾನಮಂತ್ರಿ ಹಾಗೂ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರೂ ಆದ ಹೆಚ್.ಡಿ. ದೇವೇಗೌಡರಿಗೆ ಮಾಜಿ ಸಚಿವರೂ ಆದ ಹಾಲಿ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಅಡ್ವಾನ್ಸ್ ಆಗಿ ಜನ್ಮ ದಿನದ ಶುಭಾಶಯ ಕೋರಿದ ವೇಳೆ ಮಾಮೂಲಿ ಧಾಟಿಯಲ್ಲಿ ಮಾತಿಗಿಳಿದ ಮಾಜಿ ಪ್ರಧಾನಿಗಳು, ಈಗ ವಾಲ್ಮೀಕಿ ರಾಮಾಯಣ ಓದುತ್ತಿದ್ದೇನೆ. ಮನಸ್ಸು ಆಗಾಗ ನಾವು ಬೆಳೆದು ಬಂದ ಕಾಲಮಾನದತ್ತ ಹರಿಯುತ್ತೆ. ಇಲ್ಲಿವರೆಗೆ ಬಂದದ್ದೇ ಪವಾಡ ಎನ್ನಿಸುತ್ತದೆ. 10 ರೂ. ಬಾಡಿಗೆ ಮನೆಯಿಂದ ಜೀವನ ಆರಂಭವಾಯಿತು... ಎಂದು ಮೆಲುಕು ಹಾಕಿದ್ದಾರೆ.

ಈ ವೇಳೆ ರಾಜಕೀಯ ವಿಚಾರವೇನನ್ನು ಪ್ರಸ್ತಾಪಿಸದ ದೇವೇಗೌಡರು 'ಡೋಂಟ್ ವರಿ, ಎಲ್ಲ ಒಳ್ಳೆದಾಗುತ್ತೆ...! ಎಂದು ಬೀಳ್ಕೊಟ್ಟಿದ್ದಾರೆ.

ಹಿರಿಯ ಶಾಸಕ ತನ್ವೀರ್ ಸೇಠ್ ಅಭಿಮತ

ಬಸವಣ್ಣನವರ ತತ್ವ ಪ್ರಸ್ತುತ ಕಾಲಘಟ್ಟಕ್ಕೆ ಅನಿವಾರ್ಯ



ಬಸವಣ್ಣ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ಮೇ 15(ವಿವಿಹೆಚ್)– ಸಮಸಮಾಜ ನಿರ್ಮಾಣಕ್ಕಾಗಿ 12ನೇ ಶತಮಾನದಲ್ಲಿಯೇ ಶ್ರಮಿಸಿದ ಬಸವಣ್ಣನವರ ತತ್ವ ಪಾಲನೆ ಮಾಡುವ ವ್ಯವಸ್ಥೆ ಮರುಕಳಿಸುವಂತೆ ಮಾಡಬೇಕಿರುವುದು ಇದು ಅನಿವಾರ್ಯವಾಗಿದೆ ಎಂದು ಎನ್.ಆರ್. ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅಭಿಪ್ರಾಯಪಟ್ಟರು.

> ಚುನಾವಣೆ ವೇಳೆ ಘೋಷಣೆ ಮಾಡಿದ್ದಂತೆ ನನ್ನ ಕ್ಷೇತ್ರದಲ್ಲಿ 2027ರ ಹೊತ್ತಿಗೆ ಬಸವೇಶ್ವರ ಭವನ ನಿರ್ಮಾಣ ಆಗಲಿದೆ.
> –ತನ್ವೀರ್ ಸೇಠ್, ಶಾಸಕ.

ನಗರದ ಶಿಕ್ಷಕರ ಬಡಾವಣೆ, ಶಕ್ತಿನಗರ ಹಾಗೂ ವಿದ್ಯಾಶಂಕರ ಬಡಾವಣೆಯ ಬಸವ ಸಮಿತಿ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಸಮಿತಿಯ ಮೊದಲ ವಾರ್ಷಿಕೋತ್ಸವ, ಬಸವ ಜಯಂತಿ, ಪ್ರತಿಭಾ ಪುರಸ್ಕಾರ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಇಂದಿನ ಸಮಾಜದಲ್ಲಿ ಒಂದು ಕಡೆಯಿಂದ ಸುಧಾರಣೆ ಮಾಡುತ್ತಾ ಬರುತ್ತಿದ್ದರೆ, ಮತ್ತೊಂದು ಕಡೆಯಿಂದ ಅವು ಗಳನ್ನು ವ್ಯವಸ್ಥಿತವಾಗಿ ಹಾಳು ಮಾಡುತ್ತಿರುವುದು ಕಂಡುಬರುತ್ತಿದೆ ಸಮಾಜದ ಪರಿವರ್ತನೆಗಾಗಿ ಬಸವಣ್ಣನವರು ಬೋಧಿಸಿದ ವಚನಗಳನ್ನು ನಾವೆಲ್ಲರೂ ಅರ್ಥಮಾಡಿ ಕೊಂಡಿಲ್ಲ ಎಂಬುದನ್ನು ಈ ವ್ಯವಸ್ಥೆಯು ನಮಗೆ ಮತ್ತೆ ಮತ್ತೆ ನೆನಪು ಮಾಡುತ್ತಿದೆ. ಬಸವಣ್ಣನವರ ತತ್ವ ಪ್ರಸ್ತುತ ಕಾಲಘಟ್ಟಕ್ಕೆ ಮಹತ್ವದ್ದಾಗಲಿದೆ ಎಂದರು.

ಕೇವಲ ಧಾರ್ಮಿಕ ಆಚರಣೆಗಾಗಿ ಮಾತ್ರವೇ ಬಸವಣ್ಣನವರನ್ನು ಸೀಮಿತಗೊಳಿಸಿಕೊಂಡು ಬರುತ್ತಿರುವ ಕಾಲಘಟ್ಟದಲ್ಲಿ ನಾವಿದ್ದೇವೆ. ಬಸವಣ್ಣನವರ ತತ್ವವನ್ನು ಪಾಲಿಸಿ, ಶುದ್ಧವಾದ ಕೆಲಸ ಮಾಡಿದರೆ ಊರು ಶುದ್ಧವಾಗುತ್ತದೆ. ಊರು ಶುದ್ಧವಾದರೆ ಇಡೀ ವಿಶ್ವವೇ ಶುದ್ಧವಾಗುತ್ತದೆ ಎಂದು ವಿವರಿಸಿದರು.

ಮಕ್ಕಳಿಗೆ ನಿರಂತರವಾಗಿ ಓದುವಂತೆ ಒತ್ತಡ ಹಾಕುವುದು ಮಾತ್ರ ಪೋಷಕರ ಕರ್ತವ್ಯವಲ್ಲ. ಬದಲಾಗಿ ಅವರಿಗೆ ಬೆಳೆಯುವುದಕ್ಕೆ ಪೂರಕವಾದ ವಾತಾವರಣ ಸೃಷ್ಟಿ ಮಾಡಿ, ಅಗತ್ಯ ನಿರ್ದೇಶನ ಗಳನ್ನು ನೀಡುವುದಾಗಿದೆ. ಯಾರೋ ಹೇಳಿದಂತೆ ಎಲ್ಲರನ್ನು ಡಾಕ್ಟರ್, ಎಂಜಿನಿಯರ್ ಮಾಡುವುದಕ್ಕೆ ಓಡಾಡುವ ಬದಲು, ಸಮಾಜಕ್ಕೆ ಒಳಿತಾಗುವ, ಮಕ್ಕಳಿಗೂ ಭವಿಷ್ಯ ಸಿಗುವ ಇತರೆ ವೃತ್ತಿಗಳನ್ನು ಆರಿಸಿಕೊಳ್ಳುವಂತೆ ಪ್ರೇರೇಪಿಸಬೇಕಿದೆ ಎಂದರು.

ಎಸ್‌ಎಸ್‌ಎಲ್‌ಸಿ, ಪಿಯುಸಿ ಬಳಿಕ ಮಕ್ಕಳ ಭವಿಷ್ಯಕ್ಕೆ ಏನು ಮಾಡಬೇಕು ಎನ್ನುವ ಬಗ್ಗೆ ಪೋಷಕರಿಗೆ ಮೊದಲು ಮಾರ್ಗದರ್ಶನ ನೀಡಬೇಕು. ಏಕೆಂದರೆ ಇಂದು ಶಿಕ್ಷಣ ಪಡೆಯುವುದು ಅಷ್ಟೊಂದು ಸುಲಭ ಅಲ್ಲ, ಹಣ ಕೊಟ್ಟು ಶಿಕ್ಷಣ ಪಡೆಯುವುದಕ್ಕೆ ಎಲ್ಲರಿಗೂ ಸಾಧ್ಯ ಆಗುವುದಿಲ್ಲ. ಆದ್ದರಿಂದ ಪ್ರತಿಭಾ ಪುರಸ್ಕಾರ ಜೊತೆಗೆ ಮಕ್ಕಳಿಗೆ ಮಾರ್ಗ ದರ್ಶನ ಕೊಡುವಂತಹ ಕಾರ್ಯಕ್ರಮ ಹಮ್ಮಿಕೊಂಡರೆ ಮಕ್ಕಳಿಗೆ ಹೊಸ ಆಲೋಚನೆಗಳು, ಹೊಸ ಮಾರ್ಗಗಳು ಸಿಗುತ್ತವೆ. ಅವರು ತಾವು ಏನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ಗೊಂದಲ ಪರಿಹಾರವಾಗಿ ಸ್ಪಷ್ಟತೆ ದೊರೆಯುತ್ತದೆ ಎಂದರು.

ಈ ವೇಳೆ ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಡಾ.ಪಿ. ಶಿವರಾಜು, ವಿಟಿಯು ಕಾರ್ಯಕ್ರಮ ಸಂಯೋಜಕಿ ಡಾ.ಹೇಮಾ ಪಾಟೀಲ್, ಸರ್ಕಲ್ ಇನ್‌ಸ್ಪೆಕ್ಟರ್ ಎಸ್.ನಾಗೇಶ್ ಅವರನ್ನು ಸನ್ಮಾನಿಸಿ, ಅಭಿನಂದಿಸಲಾಯಿತು. ಜೊತೆಗೆ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಉನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಅಭಿನಂದಿಸಲಾಯಿತು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ರಾಘವೇಂದ್ರ ನಗರದ ಬಸವೇಶ್ವರ ಮಠದ ಶಿವಪ್ರಭು ಸ್ವಾಮೀಜಿ, ಬಸವ ಸಮಿತಿಯ ಅಧ್ಯಕ್ಷ ಎಚ್. ಆರ್.ವೃಷಭೇಂದ್ರ, ವಿಶ್ರಾಂತ ಪ್ರಾಧ್ಯಾಪಕ ಪ್ರೊ.ಡಿ.ಎಸ್.ಸದಾಶಿವ ಮೂರ್ತಿ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾ ಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಹಿನಕಲ್ ಬಸವರಾಜು, ಉಪಾಧ್ಯಕ್ಷ ಹೆಚ್.ಪಿ. ನಂಜುಂಡ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಬಿ.ಎಂ. ಪುಟ್ಟಣ್ಣ ಉಪಸ್ಥಿತರಿದ್ದರು.

4ನೇ ವರ್ಷದ ಪುಣ್ಯಸ್ಮರಣೆ



ದಿ|| ನೀಲಕಂಠ ಶೆಟ್ಟರು

ನೀವು ನಮ್ಮನ್ನಗಲಿ ಇಂದಿಗೆ 4ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವೆ, ನಿಮ್ಮ ನಡೆ, ನುಡಿ, ಆದರ್ಶ ನಮಗೆ ದಾರಿ ದೀಪವಾಗಿದೆ. ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ

ದುಃಖತಪ್ತರು: ಪತ್ನಿ ಮಂಗಳಮ್ಮ, ಮಗ:ಕೆ.ಎನ್ ನಟರಾಜ್, ಸೊಸೆ, ಬಿ.ಶಾಂತಲ, ಮಕ್ಕಳು ಹಾಗೂ ಕುಟುಂಬವರ್ಗದವರು

9ನೇ ವರ್ಷದ ಸವಿನೆನಪು



ಶಿವಣ್ಣನವರು

ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ನೀಲಮ್ಮ ಮತ್ತು ಕುಟುಂಬವರ್ಗ, ಗುಂಡುರಾವ್‌ನಗರ, ಮೈಸೂರು.

ಔಷಧ ವ್ಯಾಪಾರ ಬಂದ್ ಬೆಂಬಲಿಸದಿರಲು ಮೈಸೂರು ಔಷಧ ವ್ಯಾಪಾರಿಗಳ ಸಂಘ ನಿರ್ಧಾರ

ಮೈಸೂರು, ಮೇ 15– ಆನ್‌ಲೈನ್ ಮೂಲಕ ಔಷಧಿ ಮಾರಾಟ ನಿಲ್ಲಿಸುವಂತೆ ಆಗ್ರಹಿಸಿ ಹಾಗೂ ಕಾರ್ಪೊರೇಟ್ ಕಂಪನಿಗಳು ಮನಸ್ಸಿಗೆ ಬಂದಂತೆ ಔಷಧಿಗಳಿಗೆ ರಿಯಾಯ್ತಿ ನೀಡುತ್ತಿರುವುದನ್ನು ಖಂಡಿಸಿ ಮೇ 20ರಂದು ಕರೆ ನೀಡಿರುವ ಔಷಧ ವ್ಯಾಪಾರ ಬಂದ್ ಬೆಂಬಲಿಸದಿರಲು ಮೈಸೂರು ಜಿಲ್ಲಾ ಔಷಧಿ ವ್ಯಾಪಾರಿಗಳು ಹಾಗೂ ವಿತರಕರ ಸಂಘ (ಎಂಡಿಸಿಡಿಎ) ನಿರ್ಧರಿಸಿದೆ ಎಂದು ಸಂಘದ ಅಧ್ಯಕ್ಷ ಎಸ್.ಮಂಜುನಾಥ್ ತಿಳಿಸಿದ್ದಾರೆ.


ಮಂಜುನಾಥ್

ಸಮಾಜದಲ್ಲಿ ಉತ್ತಮ ಔಷಧಿ ಲಭ್ಯತೆ, ಕೃತಕ ಅಭಾವ, ಕಾಳಸಂತೆ ದಾಸ್ತಾನು ತಡೆಯುವ ಸಲುವಾಗಿ ಜಾರಿಯಲ್ಲಿರುವ ಅಗತ್ಯ ವಸ್ತುಗಳ ಕಾಯ್ದೆ–1955 (ಇ ಸಿ ಆ್ಯಕ್ಟ್) ಹಾಗೂ ಔಷಧಿ ವ್ಯಾಪಾರಕ್ಕಾಗಿ ಇರುವ ಔಷಧಿಗಳು ಮತ್ತು ಕಾಂತಿ ವರ್ಧಕಗಳ ಕಾಯ್ದೆ 1940(ಡಿ ಅಂಡ್ ಸಿ ಆ್ಯಕ್ಟ್) ಇದ್ದರೂ ಇದರ ವ್ಯಾಪಕ ಉಲ್ಲಂಘನೆಯಾಗುತ್ತಿದೆ. ಇದನ್ನು ಖಂಡಿಸಿ ಅಖಿಲ ಭಾರತ ಔಷಧಿ ವ್ಯಾಪಾರಿಗಳ ಸಂಘ ರಾಷ್ಟ್ರಾದ್ಯಂತ ಒಂದು ದಿನದ ಮುಷ್ಕರಕ್ಕೆ ಕರೆ ನೀಡಿದೆ.

ಆದರೆ, ನಮ್ಮ ವ್ಯಾಪಾರ–ವಹಿವಾಟು ಸಮಾಜದ ಮೂಲ ಹಾಗೂ ಅತ್ಯಂತ ಅವಶ್ಯ ಅಗತ್ಯಗಳಲ್ಲಿ ಅತೀ ಪ್ರಮುಖವಾಗಿದ್ದು, ಸಾರ್ವಜನಿಕ ಹಿತ ಕಾಯುವ ಗುರುತರ ಜವಬ್ದಾರಿ ನಮ್ಮ ಮೇಲಿದೆ. ಹೋರಾಟದಿಂದಷ್ಟೇ ಬೇಡಿಕೆಗಳು ಈಡೇರುತ್ತವೆ ಎಂದು ಭಾವಿಸುವುದು ತಪ್ಪು. ನ್ಯಾಯ ದೊರಕಿಸಿಕೊಳ್ಳಲು ಹಲವು ಮಾರ್ಗಗಳಿವೆ. ಪೈಪೋಟಿ ಜಗತ್ತಿನಲ್ಲಿ ಔಷಧಿ ವ್ಯಾಪಾರಿಗಳು ಅಸ್ತಿತ್ವ ಕಾಪಾಡಿಕೊಳ್ಳುವುದು ಅವಶ್ಯವಾಗಿದೆ. ಹಾಗಾಗಿ ನಮ್ಮ ಬೇಡಿಕೆಗಳ ಸಂಬಂಧ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸುವ ಮೂಲಕ ಸರ್ಕಾರಗಳ ಗಮನ ಸೆಳೆಯಲು ನಿರ್ಧರಿಸಲಾಗಿದೆ.

ಜನರಿಗೆ ಅನಾನುಕೂಲವಾಗುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಔಷಧ ವ್ಯಾಪಾರ ಬಂದ್‌ಗೆ ಬೆಂಬಲ ನೀಡದಿರಲು ನಿರ್ಧರಿಸಿರುವುದಾಗಿ ಮಂಜುನಾಥ್ ಪುನರ್ ಸ್ಪಷ್ಟಪಡಿಸಿದ್ದಾರೆ.

ಸನಾತನ ಧರ್ಮದ ಶ್ರೇಷ್ಠತೆಯ ಸಂದೇಶವನ್ನು ದೇಶಕ್ಕೆಲ್ಲಾ ಸಾರಬೇಕಿದೆ

●ಮಾಜಿ ಸಚಿವ ಎಸ್.ಎ.ರಾಮದಾಸ್ ಅಭಿಮತ ●ಕೃಷ್ಣಮೂರ್ತಿಪುರಂ ರಾಘವೇಂದ್ರ ಮಠದ ಮುಖ್ಯಾಧಿಕಾರಿ ಶ್ರೀನಿವಾಸರಾಯರಿಗೆ ಅಭಿನಂದನೆ

ಮೈಸೂರು, ಮೇ 15(ಎಸ್‌ಪಿಎನ್)– ದೇಶವ್ಯಾಪಿ ಸನಾತನ ಧರ್ಮದ ವಿರುದ್ಧ ಮಾತನಾಡುವವರ ಸಂಖ್ಯೆ ದೊಡ್ಡದಿದೆ. ಈ ಸಂದರ್ಭದಲ್ಲಿ ಸನಾತನ ಧರ್ಮದ ಶ್ರೇಷ್ಠತೆ ಕುರಿತು ದೇಶಕ್ಕೆ ದೊಡ್ಡ ಸಂದೇಶ ನೀಡುವ ಅವಶ್ಯಕತೆ ಇದೆ ಎಂದು ಮಾಜಿ ಸಚಿವರೂ ಆದ ಹಿರಿಯ ಬಿಜೆಪಿ ಮುಖಂಡ ಎಸ್.ಎ.ರಾಮದಾಸ್ ಅಭಿಪ್ರಾಯಪಟ್ಟರು.


ಮೈಸೂರು ಕೃಷ್ಣಮೂರ್ತಿಪುರಂನ ರಾಘವೇಂದ್ರ ಸ್ವಾಮಿ ಸನ್ನಿಧಾನದ ತತ್ವಜ್ಞಾನ ಮಂದಿರದಲ್ಲಿ ಶುಕ್ರವಾರ ಶ್ರೀಮಠದ ಮುಖ್ಯಾಧಿಕಾರಿ ಶ್ರೀನಿವಾಸರಾಯರ ಅಭಿನಂದನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಸನಾತನ ಧರ್ಮದ ಕುರಿತು ದೇಶವ್ಯಾಪಿ ವಿಚಾರ ಮಂಥನದ ಅಗತ್ಯವಿದೆ. ಶ್ರೀ ಸತ್ಯಾತ್ಮತೀರ್ಥ ಸ್ವಾಮೀಜಿ ಅವರು ತಮ್ಮ ಪ್ರವಚನ ಹಾಗೂ ಧಾರ್ಮಿಕ ಕಾರ್ಯದ ಮೂಲಕ ಸಮಾಜದ ಎಲ್ಲಾ ವರ್ಗದವರನ್ನು ಒಗ್ಗೂಡಿಸುವ ಕಾರ್ಯ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದು ಬಣ್ಣಿಸಿದರು.

ತತ್ವಮಂದಿರ ಪ್ರಸ್ತುತ ವೇದಜ್ಞಾನದ ಪ್ರತೀಕವಾಗಿದೆ. ಇದರ ಹಿಂದಿನ ಕಾರಣ ಪುರುಷರು ಶ್ರೀನಿವಾಸ ರಾಯರು. ಇವರು ಎಲ್ಲಾ ಮಠಗಳ ಕೊಂಡಿಯಂತೆ ಇದ್ದವರು. ಸಾಮಾನ್ಯ ವ್ಯಕ್ತಿಯಾಗಿ ಎತ್ತರಕ್ಕೆ ಬೆಳೆದು, ಗಟ್ಟಿಯಾಗಿ ಉಳಿದಿದ್ದಾರೆ. ತತ್ವಜ್ಞಾನಕ್ಕೆ ದೊಡ್ಡ ಸಮರ್ಪಣೆ ಮಾಡಿದ್ದಾರೆ ಎಂದು ಬಣ್ಣಿಸಿದರು.

ಪಂಡಿತ ಚತುರ್ವೇದಿ ವೇದವ್ಯಾಸಚಾರ್ಯ ಮಾತನಾಡಿ, ಧರ್ಮವನ್ನು ಎಲ್ಲರೂ ಕಾಯಬೇಕು. ಅದನ್ನು ನಾವು ಕಾಪಾಡಿದರೆ, ನಮ್ಮನ್ನು ಧರ್ಮ ಕಾಪಾಡುತ್ತದೆ. ಮನುಷ್ಯನಿಗೆ ಮುಕ್ತ ಮನಸು ಮುಖ್ಯ. ಜೀವನದಲ್ಲಿ ಸತ್ಯ ನಿಷ್ಠೆ ನಿರಂತರವಾಗಿರಬೇಕು. ಸತ್ಯ ಆತ್ಮದಂತೆ. ಹಾಗೆಯೇ ಸತ್ಯವೇ ನಮ್ಮ ದೇಹದ ಆತ್ಮವಾಗಬೇಕು. ಸತ್ಯ ಮಾರ್ಗದಲ್ಲಿ ನಡೆಯುವ ಪ್ರತಿಯೊಬ್ಬ ಮನುಷ್ಯನಿಗೆ ಜೀವನದಲ್ಲಿ ಯಶಸ್ಸು ಖಚಿತ ಎಂದು ಹೇಳಿದರು.

ಕೃಷ್ಣಮೂರ್ತಿಪುರಂನ ರಾಯರ ಸನ್ನಿಧಾನಕ್ಕೆ ಶ್ರೀನಿವಾಸರಾಯರ ಕೊಡುಗೆ ಅಪಾರ. ಅಧ್ಯಯನಕ್ಕೆ ಒಳ್ಳೆಯ ವೇದಿಕೆ ಒದಗಿಸಿ ಉನ್ನತ ಜ್ಞಾನ ಕಾರ್ಯ ಮಾಡಿದ್ದಾರೆ. ಇದರಿಂದ ಅನೇಕರಿಗೆ ಅನುಕೂಲವಾಗಿದೆ ಎಂದು ಪ್ರಶಂಸಿಸಿದರು.


ಮೈಸೂರು ಕೃಷ್ಣಮೂರ್ತಿಪುರಂನ ರಾಘವೇಂದ್ರ ಸ್ವಾಮಿ ಸನ್ನಿಧಾನದ ತತ್ವಜ್ಞಾನ ಮಂದಿರದಲ್ಲಿ ಶುಕ್ರವಾರ ಶ್ರೀಮಠದ ಮುಖ್ಯಾಧಿಕಾರಿ ಶ್ರೀನಿವಾಸರಾಯರ ಅಭಿನಂದಿಸಲಾಯಿತು.

ಶಾಸಕ ಟಿ.ಎಸ್.ಶ್ರೀವತ್ಸ ಮಾತನಾಡಿ, ಶ್ರೀನಿವಾಸ ರಾಯರು ಮಾಡಿರುವ ಪ್ರಾಣದೇವರ ದೀರ್ಘ ಕಾಲದ ಸೇವೆ ಸಾಮಾನ್ಯದ ಮಾತಲ್ಲ. ಶ್ರೀನಿವಾಸ ರಾಯರು ಶ್ರೀರಾಘವೇಂದ್ರ ಸ್ವಾಮೀಜಿ ಅವರ ಆರಾಧನೆ ನಿರಂತರ ಸೇವೆ ಮಾಡಿಕೊಂಡು ಬಂದಿದ್ದಾರೆ. ಜೊತೆಗೆ ಸಮಾಜಕ್ಕೆ ಜ್ಞಾನದ ವಿಚಾರಧಾರೆಗಳನ್ನು ಧಾರೆ ಎರೆದಿದ್ದಾರೆ ಎಂದು ಬಣ್ಣಿಸಿದರು.

ಮುಡಾ ಮಾಜಿ ಅಧ್ಯಕ್ಷ ಹಾಗೂ ಕಾಂಗ್ರೆಸ್ ಮುಖಂಡ ಹೆಚ್.ವಿ.ರಾಜೀವ್ ಮಾತನಾಡಿ, ಶ್ರೀನಿವಾಸರಾಯರು ಅಚ್ಚುಕಟ್ಟಾಗಿ ಹೃದಯ ಪೂರಕವಾಗಿ ಗೋ ಸೇವೆ ಮಾಡಿ ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದು ಬಣ್ಣಿಸಿದರು.

ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಮಾತನಾಡಿ, ಸ್ವತಂತ್ರ ಪೂರ್ವದಲ್ಲಿ ಸ್ಥಾಪನೆಗೊಂಡಿರುವ ರಾಘವೇಂದ್ರ ಸ್ವಾಮೀಜಿಗಳ ಸನ್ನಿಧಾನ, ರಾಜಮನೆತನದೊಂದಿಗೆ ಇಂದಿಗೂ ಸಂಬಂಧ ಹೊಂದಿರುವುದು ವಿಶೇಷ. ಶ್ರೀನಿವಾಸ ರಾಯರು ನಿಸ್ವಾರ್ಥ ಸೇವೆ ನೀಡಿದ್ದಾರೆ ಎಂದರು.

ಈ ವೇಳೆ ಅಧಿಕ ಮಾಸೋತ್ಸವ ಪ್ರಯುಕ್ತ ಮೈಸೂರು ದಿಗ್ವಿಜಯಕ್ಕೆ ಆಗಮಿಸಿದ ಸತ್ಯಾತ್ಮತೀರ್ಥ ಸ್ವಾಮೀಜಿ ಪ್ರವಚನ ನೀಡಿದರು. ಈ ಸಂದರ್ಭದಲ್ಲಿ ದಾಸರ ದೇವರನಾಮ ಜಪಿಸಲಾಯಿತು. ಸಮಾರಂಭದಲ್ಲಿ ಪಂಡಿತ ಆನಂದತೀರ್ಥಾಚಾರ್ಯ ನಾಗಸಂಪಿಗೆ, ಪಂಡಿತ ವ್ಯಾಸನಕೆರೆ ಪ್ರಭಂಜನಾಚಾರ್ಯ ಸೇರಿದಂತೆ ಇತರರಿದ್ದರು.

ಪ್ರಧಾನಿಯವರ ಸಲಹೆಯನ್ನು ತಪ್ಪಾಗಿ ಬಿಂಬಿಸುವ ಯತ್ನ

ಬಿಜೆಪಿ ಮುಖಂಡರಾದ ತಿರುಮಲೇಶ್ವರಿ ನಳಿನಿಗೌಡ ಬೇಸರ

ಮೈಸೂರು, ಮೇ 15– ದೇಶದ ಸಂಪನ್ಮೂಲಗಳ ಸಂರಕ್ಷಣೆ ಹಾಗೂ ಆರ್ಥಿಕ ಸ್ಥಿರತೆಯನ್ನು ಕಾಪಾಡುವ ಉದ್ದೇಶದಿಂದ ಪ್ರಧಾನಿ ಮೋದಿ ಅವರು ನೀಡಿರುವ ಸಲಹೆಯನ್ನು ಕಾಂಗ್ರೆಸ್ ರಾಜಕೀಯ ಟೀಕೆಗೆ ಬಳಸಿಕೊಳ್ಳುತ್ತಿರುವುದು ಖಂಡನೀಯ ಎಂದು ಮೈಸೂರು ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ತಿರುಮಲೇಶ್ವರಿ ನಳಿನಿಗೌಡ ಹೇಳಿದ್ದಾರೆ.



ಈ ಬಗ್ಗೆ ಪತ್ರಿಕಾ ಹೇಳಿಕೆ ನೀಡಿರುವ ಅವರು, ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ದೇಶದ ಆರ್ಥಿಕ ಹಿತದೃಷ್ಟಿಯಿಂದ ಚಿನ್ನ ಖರೀದಿ ಕಡಿಮೆ ಮಾಡಬೇಕು, ಅಡುಗೆ ಎಣ್ಣೆ ಮಿತವಾಗಿ ಬಳಸಬೇಕು, ಖಾಸಗಿ ವಾಹನ ಬಳಕೆ ಕಡಿಮೆ ಮಾಡಿ ಸಾರ್ವಜನಿಕ ಸಾರಿಗೆಯನ್ನು ಹೆಚ್ಚು ಬಳಸಬೇಕು ಎಂದು ಸಲಹೆ ನೀಡಿರುವುದರಲ್ಲಿ ತಪ್ಪೇನಿದೆ?. ಇದನ್ನು ಕಾಂಗ್ರೆಸ್ ಸೇರಿದಂತೆ ಪ್ರತಿಪಕ್ಷಗಳು ರಾಜಕೀಯಕ್ಕಾಗಿ ತಪ್ಪಾಗಿ ಪ್ರತಿಬಿಂಬಿಸುವ ಪ್ರಯತ್ನ ನಡೆಸಿವೆ. ದೇಶದ ವಿಚಾರದಲ್ಲಿ ಎಲ್ಲಾ ಪಕ್ಷದವರೂ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು ಎಂದು ಮನವಿ ಮಾಡಿದ್ದಾರೆ.

ಕಾಂಗ್ರೆಸ್ ನಾಯಕರು ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಇತ್ತೀಚಿನ ಹೇಳಿಕೆಗಳು ಖಂಡನಾರ್ಹವಾಗಿವೆ. ಸಂವಿಧಾನದ ಕುರಿತು ನೀಡಿರುವ ಹೇಳಿಕೆಗಳು ಆಕ್ಷೇಪಾರ್ಹ ಹಾಗೂ ದೇಶದ ಪ್ರಜಾಪ್ರಭುತ್ವ ವ್ಯವಸ್ಥೆ ಮೇಲಿನ ಜನರ ನಂಬಿಕೆಯನ್ನು ಕುಂದಿಸುವ ರೀತಿಯಲ್ಲಿವೆ. ಬಿಜೆಪಿ ಸರ್ಕಾರವು ಸದಾ ಸಂವಿಧಾನಕ್ಕೆ ಗೌರವ ನೀಡಿ, ಅದರ ಮೌಲ್ಯಗಳ ಆಧಾರದ ಮೇಲೆ ಆಡಳಿತ ನಡೆಸುತ್ತಿದೆ. ಡಾ.ಬಿ. ಆರ್. ಅಂಬೇಡ್ಕರ್ ಅವರ ಆಶಯಗಳಿಗೆ ಅನುಗುಣವಾಗಿ ಜನಪರ ಹಾಗೂ ಪಾರದರ್ಶಕ ಆಡಳಿತ ನೀಡುತ್ತಿದೆ ಎಂದು ತಿಳಿಸಿದ್ದಾರೆ.

ಮೂರು ವರ್ಷದಿಂದ ಮೂರು ಕಾಸಿನ ಕೆಲಸ ಮಾಡದ ಸಿಎಂ–ಡಿಸಿಎಂಗೆ ಜನರಿಂದ ಮುಖ ಮುಚ್ಚಿಕೊಳ್ಳಲು ಬುರ್ಕಾ ಬೇಕೇಬೇಕು

ಶಾಲೆಯಲ್ಲಿ ಹಿಜಾಬ್ ಧರಿಸಲು ಅವಕಾಶ ನೀಡಿದ ಸರ್ಕಾರದ ವಿರುದ್ಧ ಮಾಜಿ ಸಂಸದ ಪ್ರತಾಪ್ ಸಿಂಹ ವಾಗ್ದಾಳಿ

ಮೈಸೂರು, ಮೇ 15– ಮೂರು ಕಾಸಿನ ಕೆಲಸ ಮಾಡದೆ ಜನರಿಗೆ ಮುಖ ತೋರಿಸಲಾಗದ ಸ್ಥಿತಿಯಲ್ಲಿರುವ ಸಿಎಂ ಹಾಗೂ ಡಿಸಿಎಂಗೆ ಬುರ್ಕಾ ಬೇಕಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ವ್ಯಂಗ್ಯವಾಡಿದ್ದಾರೆ.

ಶಾಲೆಗಳಲ್ಲಿ ಹಿಜಾಬ್ ಧರಿಸಲು ರಾಜ್ಯ ಸರ್ಕಾರ ಅವಕಾಶ ನೀಡಿರುವ ಬಗ್ಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, ಮುಸ್ಲಿಮರು ಯಾರೂ ಹಿಜಾಬ್‌ಗೆ ಅವಕಾಶ ಕೇಳಿರಲಿಲ್ಲ. ಸಮವಸ್ತ್ರ ಸಂಹಿತೆಯನ್ನು ಬದಿಗಿಟ್ಟು ರಾಜ್ಯ ಸರ್ಕಾರ ಹಿಜಾಬ್‌ಗೆ ಅವಕಾಶ ನೀಡಿದೆ. ಮುಸ್ಲಿಮರ ಪ್ರೀತಿ ಗಳಿಸುವುದಕ್ಕಿಂತ ಹಿಂದೂಗಳ ಉರಿಸುವುದೇ ಕಾಂಗ್ರೆಸ್‌ನ ಅಜೆಂಡಾ ಆಗಿದೆ. ಮುಸ್ಲಿಮ್ ಹೆಣ್ಣು ಮಕ್ಕಳಿಗೆ ಹಿಜಾಬ್ ಬೇಕೋ ಬೇಡವೋ ಗೊತ್ತಿಲ್ಲ. ಆದರೆ, ಮೂರು ವರ್ಷಗಳಿಂದ ಮೂರು ಕಾಸಿನ ಕೆಲಸ ಮಾಡದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಜನರಿಂದ ಮುಖ ತೋರಿಸಲಾಗದೆ, ಮುಚ್ಚಿಕೊಳ್ಳಲು ಬುರ್ಕಾ ಬೇಕೇಬೇಕು ಎಂದು ಕಿಡಿಕಾರಿದರು.

ಶಾಲೆಯಲ್ಲಿ ಕೇಸರಿ ಶಾಲು ಹಾಕುವಂತಿಲ್ಲ ಎಂದಿದ್ದಾರೆ. ಜನಿವಾರ, ಶಿವದಾರ ಬಟ್ಟೆ ಒಳಗೆ ಹಾಕುತ್ತೇವೆ. ಅದಕ್ಕೆ ಅನುಮತಿ ಕೊಡುವುದಕ್ಕೆ ನೀವು ಯಾವ ದೊಣ್ಣೆ ನಾಯಕ. ಶಾಲೆಗಳಿಗೆ ಬುರ್ಕಾವೂ ಬೇಡ, ಕೇಸರಿ ಶಾಲು ಬೇಡವಾಗಿದೆ. ಸಿದ್ದರಾಮಯ್ಯನವರದು ತಾಲಿಬಾನ್ ಸರಕಾರ. ಅವರು ಕರ್ನಾಟಕದ ಖಮೇನಿ ಆಗಲು ಯತ್ನಿಸುತ್ತಿದ್ದಾರೆ.ಸನಾತನ ಧರ್ಮ ನಾಶಮಾಡಲು ಮಾಡಲು ಸಿದ್ದ ರಾಮಯ್ಯರಂತಹವರು ಹವಣಿಸುತ್ತಿದ್ದಾರೆ. ಹಿಂದೂಗಳು ಜಾತಿ ಜಾತಿ ಎಂದು ಹೊಡೆದಾಡುವುದನ್ನು ಬಿಟ್ಟು ಒಗ್ಗೂಡುವ ಕಾಲ ಬಂದಿದೆ. ಎರಡು ವರ್ಷ ಕಳೆಯಲಿ ಪೀಡೆ ತೊಲಗಿತು ಎಂದು ಕಾಂಗ್ರೆಸ್‌ಗೆ ಜನರು ತರ್ಪಣ ಬಿಡುತ್ತಾರೆ ಎಂದರು.




ಹುಟ್ಟುವ ಮಗುವಿಗೂ ಸಾಲವಿದೆ: ಡಿಸೇಲ್, ಪೆಟ್ರೋಲ್ ಉಳಿತಾಯದ ಬಗ್ಗೆ ಪ್ರಧಾನಿ ಮೋದಿ ಕರೆ ನೀಡಿರುವುದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಕರಾರು ವ್ಯಕ್ತಪಡಿಸಿದ್ದಕ್ಕೆ ಪ್ರತಿಕ್ರಿಯಿಸಿದ ಪ್ರತಾಪ್ ಸಿಂಹ, ಸಿದ್ದರಾಮಯ್ಯ ವಿಶ್ವದ ಬಹು ದೊಡ್ಡ ಅರ್ಥಶಾಸ್ತ್ರಜ್ಞರು. ಅವರಿಗಿಂತ ವಿಶ್ವದಲ್ಲಿ ಇನ್ಯಾರಿಗೂ ಅರ್ಥಶಾಸ್ತ್ರ ಗೊತ್ತಿಲ್ಲ ಬಿಡಿ. ಸಿದ್ದರಾಮಯ್ಯನವರು ಈ ನಾಡಿನಲ್ಲಿ ಹುಟ್ಟುವ ಪ್ರತಿ ಮಗುವಿನ ಮೇಲೆ ಸಾಲ ಹೊರಿಸಿದ್ದಾರೆ. ವಾಸ್ತವವಾಗಿ ಅವರಿಗೆ ಅರ್ಥಶಾಸ್ತ್ರ ಹಾಗೂ ಗಣಿತ ಅರ್ಥವೇ ಆಗಿಲ್ಲವೇನೋ. ಯುದ್ದಗಳ ಹಿನ್ನೆಲೆಯಲ್ಲಿ ಪ್ರಧಾನಿಗಳು ಉಳಿತಾಯದ ಸಲಹೆ ನೀಡಿದ್ದಾರೆ. ಅರ್ಥ ವ್ಯವಸ್ಥೆ ಬಗ್ಗೆ ಜ್ಞಾನವುಳ್ಳವರು ಅದನ್ನು ಸರಿ ಅಂದಿದ್ದಾರೆ. ಅರ್ಥಶಾಸ್ತ್ರವೇ ಗೊತ್ತಿಲ್ಲದವರು ಅದನ್ನು ತಪ್ಪು ಎನ್ನುತ್ತಿದ್ದಾರೆ. ಸಿದ್ದರಾಮಯ್ಯನವರು ಮೋದಿ ಅವರಿಗೆ ಪಾಠ ಮಾಡುವ ಅಗತ್ಯವಿಲ್ಲ ಎಂದು ವಾಗ್ದಾಳಿ ನಡೆಸಿದರು.

ಇದೊಂದು ದೊಡ್ಡ ಪಿಡುಗು: ನೀಟ್ ಪರೀಕ್ಷೆ ರದ್ದು ವಿಚಾರವಾಗಿ ಮಾತನಾಡಿ, ಪ್ರಶ್ನೆ ಪತ್ರಿಕೆ ಸೋರಿಕೆ ಎನ್ನುವುದು ಬಹುದೊಡ್ಡ ಪಿಡುಗು. ಇದನ್ನು ತಪ್ಪಿಸಲು ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ಕೇಂದ್ರ ಸರ್ಕಾರ ಪ್ರಶ್ನೆ ಪತ್ರಿಕೆ ವಿಚಾರವನ್ನು ಮುಚ್ಚಿಟ್ಟಿಲ್ಲ. ಕರ್ಮಕಾಂಡವನ್ನು ಬಟಾಬಯಲು ಮಾಡಿ, ವ್ಯವಸ್ಥೆ ಸರಿಪಡಿಸಲು ಯತ್ನಿಸಿದೆ. ರಾಜ್ಯದ ಕೆಪಿಎಸ್‌ಸಿಯಲ್ಲಿ ಹಗರಣ ನಡೆದಿದ್ದರೂ ನೇಮಕಾತಿ ಪತ್ರ ನೀಡಲಾಗಿದೆ. ಆದರೆ ಕೇಂದ್ರ ಸರ್ಕಾರ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅನ್ಯಾಯ ಆಗಬಾರದು ಎಂದು ಪರೀಕ್ಷೆ ರದ್ದು ಮಾಡಿದೆ ಎಂದು ಹೇಳಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜನರೊಂದಿಗೆ ಜನತಾದಳ ಹಿನ್ನೆಲೆ

ಇಂದು ಸಾ.ರಾ.ಮಹೇಶ್ ನೇತೃತ್ವದಲ್ಲಿ ಸಿದ್ಧತೆ ಪರಿಶೀಲನೆ

ಮೈಸೂರು, ಮೇ 15– ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ 'ಜನರೊಂದಿಗೆ ಜನತಾದಳ' ಕಾರ್ಯಕ್ರಮದ ಪೂರ್ವಭಾವಿಯಾಗಿ ಜೆಡಿಎಸ್ ಪಕ್ಷದ ರಾಜ್ಯ ರಾಜಕೀಯ ವ್ಯವಹಾರಗಳ ಸದಸ್ಯರಾದ ಮಾಜಿ ಸಚಿವ ಸಾ.ರಾ.ಮಹೇಶ್ ನೇತೃತ್ವದಲ್ಲಿ ಪಕ್ಷದ ಮುಖಂಡರು ಶನಿವಾರ(ಮೇ 16) ಬೆಳಗ್ಗೆ 10.30ಕ್ಕೆ ಸ್ಥಳ ಪರಿಶೀಲನೆ ಹಾಗೂ ಸಿದ್ಧತಾ ಕಾರ್ಯಗಳ ವೀಕ್ಷಿಸಲಿದ್ದಾರೆ.



ಬೋಗಾದಿ ರಿಂಗ್ ರಸ್ತೆಯ ನಾಗಲಿಂಗೇಶ್ವರ–ಬೋಗೇಶ್ವರ ದೇವಸ್ಥಾನದ ಎದುರಿನ ಬ್ಯಾಂಕರ್ಸ್ ಲೇಔಟ್ ಪಕ್ಕದ ಖಾಲಿ ನಿವೇಶನವನ್ನು ಕಾರ್ಯಕ್ರಮಕ್ಕೆ ನಿಗದಿಗೊಳಿಸಿದ್ದು, ಸ್ಥಳ ಪರಿಶೀಲನೆ ಬಳಿಕ ಸಿದ್ಧತೆ ಬಗ್ಗೆ ಚರ್ಚೆ ನಡೆಸಲಿದ್ದಾರೆ.

ಶಾಸಕ ಜಿ.ಡಿ.ಹರೀಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಸಿ.ಎನ್. ಮಂಜೇಗೌಡ, ಕೆ.ವಿವೇಕಾನಂದ, ಮಾಜಿ ಶಾಸಕ ಕೆ.ಮಹದೇವು, ಹೆಚ್.ಡಿ.ಕೋಟೆಯ ಜೆಡಿಎಸ್ ಮುಖಂಡ ಕೃಷ್ಣ ನಾಯಕ್, ವರುಣ ಕ್ಷೇತ್ರದ ಜೆಡಿಎಸ್ ಮುಖಂಡ ಅಭಿಷೇಕ್ ಮಣೆಗಾರ್, ಜೆಡಿಎಸ್ ಮೈಸೂರು ನಗರ ಅಧ್ಯಕ್ಷ ಎಸ್‌ಬಿಎಂ ಮಂಜು ಸೇರಿದಂತೆ ಮಾಜಿ ಮೇಯರ್‌ಗಳು, ಪಾಲಿಕೆ ಮಾಜಿ ಸದಸ್ಯರು, ಮುಖಂಡರು, ಪದಾಧಿಕಾರಿಗಳು ಉಪಸ್ಥಿತರಿರಲಿದ್ದಾರೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದ್ದಾರೆ.

ವಿವಿಧ ಬೇಡಿಕೆಗೆ ಆಗ್ರಹಿಸಿ ಎರಡು ದಿನ ಮುಷ್ಕರ

ಮೈಸೂರು, ಮೇ 15– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆಲ್ ಇಂಡಿಯಾ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಸ್ಟಾಫ್ ಫೆಡರೇಷನ್ (ಎಐಎಸ್‌ಬಿಐಎಸ್‌ಎಫ್) ಮೇ 25 ಮತ್ತು 26ರಂದು ಮುಷ್ಕರ ಹಮ್ಮಿಕೊಂಡಿದೆ.

ಮೆಸೆಂಜರ್‌ಗಳು ಮತ್ತು ಶಸ್ತ್ರಸಜ್ಜಿತ ಭದ್ರತಾ ಸಿಬ್ಬಂದಿ ತಕ್ಷಣದ ನೇಮಕಾತಿ, 2019ರಿಂದ ಸೇರ್ಪಡೆಯಾದ ನೌಕರರಿಗೆ ಐಸಿಟಿ ವರ್ಗಾವಣೆ ಜಾರಿಗೆ ತರುವುದು, ಶಾಶ್ವತ ಹುದ್ದೆಗಳ ಔಟ್‌ಸೋರ್ಸಿಂಗ್ ಸ್ಥಗಿತಗೊಳಿಸುವುದು, ವೇತನ ಸಮಾನತೆ ಸಮಸ್ಯೆಗಳನ್ನು ಪರಿಹರಿಸುವುದು, ಎನ್‌ಪಿಎಸ್‌ಗೆ ಒಳಪಡುವ ನೌಕರರಿಗೆ ಪಿಂಚಣಿ ನಿಧಿ ನಿರ್ವಹಣೆಯನ್ನು ಬದಲಾಯಿಸಲು ಆಯ್ಕೆ ಕಲ್ಪಿಸುವುದು, ಸಮರ್ಪಕ ಸಿಬ್ಬಂದಿ ನೇಮಕಾತಿ, ವೈದ್ಯಕೀಯ ಮರುಪಾವತಿ ಯೋಜನೆಯಲ್ಲಿ ಸುಧಾರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ಹಮ್ಮಿಕೊಳ್ಳಲಾಗಿದ್ದು, ಇದಕ್ಕೆ ಗ್ರಾಹಕರು ಮತ್ತು ಸಾರ್ವಜನಿಕರು ಸಹಕರಿಸಬೇಕು ಎಂದು ಸ್ಟೇಟ್ ಬ್ಯಾಂಕ್ ಸ್ಟಾಫ್ ಯೂನಿಯನ್‌ನ ಪ್ರಧಾನ ಕಾರ್ಯದರ್ಶಿ ಎಂ.ರವಿಕುಮಾರ್ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ತುಂಗಭದ್ರಾ ಸೇತುವೆ ಮೇಲಿಂದ ಕೆಳಗೆ ಬಿದ್ದ ಟ್ರ್ಯಾಕ್ಟರ್

ಒಂದೇ ಕುಟುಂಬದ ಏಳು ಮಂದಿ ದುರ್ಮರಣ

ಮುನಿರಾಬಾದ್, ಮೇ 15–ವೇಗವಾಗಿ ಹಿಂಬದಿಯಿಂದ ಬಂದ ಟ್ಯಾಂಕರ್ ಡಿಕ್ಕಿ ಹೊಡೆದ ಪರಿಣಾಮ ನಿಯಂತ್ರಣ ತಪ್ಪಿದ ಟ್ರ್ಯಾಕ್ಟರ್ ತುಂಗಭದ್ರಾ ಸೇತುವೆ ಮೇಲಿಂದ ಕೆಳಗೆ ಬಿದ್ದಿದ್ದು, ಮಗು ಸೇರಿದಂತೆ ಏಳು ಮಂದಿ ಸಾವನ್ನಪ್ಪಿರುವ ಘಟನೆ ಕೊಪ್ಪಳ ಜಿಲ್ಲೆಯಲ್ಲಿ ಶುಕ್ರವಾರ ನಡೆದಿದೆ. ಘಟನೆಯಲ್ಲಿ 9 ಮಂದಿ ಗಾಯಗೊಂಡಿದ್ದಾರೆ.


ಮೃತರನ್ನು ಸಂಡೂರು ತಾಲೂಕಿನ ಯಶವಂತ ನಗರ ಹಾಗೂ ಕೂಡ್ಲಿಗಿ ತಾಲೂಕಿನ ಮರ್ಲಾಯನಹಳ್ಳಿ ಗ್ರಾಮದ ನಿವಾಸಿಗಳು ಎಂದು ಗುರುತಿಸಲಾಗಿದೆ. ಕೊಪ್ಪಳದ ಹುಲಿಗೆಮ್ಮ ದೇವಸ್ಥಾನಕ್ಕೆ ತೆರಳುತ್ತಿದ್ದಾಗ ದುರ್ಘಟನೆ ಜರುಗಿದೆ. ಅಪಘಾತದ ತೀವ್ರತೆಗೆ ಟ್ರ್ಯಾಕ್ಟರ್ ಸಂಪೂರ್ಣವಾಗಿ ನಜ್ಜುಗುಜ್ಜಾಗಿದ್ದು ಸ್ಥಳದಲ್ಲಿ ಕಿರುಚಾಟ ಮತ್ತು ಆಕ್ರಂದನ ಮುಗಿಲು ಮುಟ್ಟಿದೆ.

ಮೃತರಲ್ಲಿ ಮಕ್ಕಳು ಮತ್ತು ಮಹಿಳೆಯರು ಸೇರಿದ್ದಾರೆ ಎನ್ನಲಾಗಿದ್ದು ಕುಟುಂಬದ ಹಿರಿಯ ಸದಸ್ಯರು ಈ ದುರಂತದಲ್ಲಿ ಬಲಿಯಾಗಿದ್ದಾರೆ. ದೇವಿಯ ದರ್ಶನ ಪಡೆದು ಪುನೀತರಾಗಬೇಕೆಂದು ಹೊರಟಿದ್ದ ಭಕ್ತರು ವಿಧಿಯ ಕರಾಳ ಆಟಕ್ಕೆ ಸಿಲುಕಿ ಸಾವಿನ ಮನೆ ಸೇರಿದ್ದಾರೆ. ಗಾಯಾಳುಗಳ ಸ್ಥಿತಿ ಕೂಡ ಚಿಂತಾಜನಕವಾಗಿದ್ದು ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ.

ಐದು ಲಕ್ಷ ಪರಿಹಾರ: ತುಂಗಭದ್ರಾ ಅಣೆಕಟ್ಟೆ ಸಮೀಪದ ರಾಷ್ಟ್ರೀಯ ಹೆದ್ದಾರಿ 50ರಲ್ಲಿ ಶುಕ್ರವಾರ ಸಂಜೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಮೃತಪಟ್ಟ ಆರು ಮಂದಿಯ ಕುಟುಂಬಗಳಿಗೆ ಮುಖ್ಯಮಂತ್ರಿ ಅವರ ಪರಿಹಾರ ನಿಧಿಯಿಂದ ತಲಾ 5 ಲಕ್ಷ ನೀಡಲಾಗುವುದು ಎಂದು ಸಂಸದ ಇ.ತುಕಾರಾಂ ಹೇಳಿದರು.

ವಿಜಯಪುರದಲ್ಲಿ ಮನೆ ಮೇಲ್ಛಾವಣಿ ಕುಸಿದು ಒಂದೇ ಕುಟುಂಬದ ನಾಲ್ವರು ಸಾವು

ವಿಜಯಪುರ, ಮೇ 15– ಗಾಳಿ ಸಹಿತ ಭಾರೀ ಮಳೆಗೆ ಮನೆಯ ಮೇಲ್ಛಾವಣಿ ಕುಸಿದು ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿರುವ ದಾರುಣ ಘಟನೆ ಗುರುವಾರ (ಮೇ14) ರಾತ್ರಿ ಆಲಮೇಲ ತಾಲೂಕಿನ ಮೊರಗಟಿ ಗ್ರಾಮದಲ್ಲಿ ನಡೆದಿದೆ.




ಘಟನೆಯಲ್ಲಿ ಪತಿ, ಪತ್ನಿ ಹಾಗೂ ಇಬ್ಬರು ಮಕ್ಕಳು ಜೀವಂತ ಸಮಾಧಿಯಾಗಿದ್ದಾರೆ. ಮೃತರನ್ನು ಗುರುನಾಥ್ ಬಡಿಗೇರ್ (35), ಅವರ ಪತ್ನಿ ಜ್ಯೋತಿ ಬಡಿಗೇರ್ (28), ಹಾಗೂ ಅವರ ಇಬ್ಬರು ಪುತ್ರಿಯರಾದ ಕಲ್ಲಮ್ಮ ಬಡಿಗೇರ್ (13) ಮತ್ತು ಕೀರ್ತಿ ಬಡಿಗೇರ್ (9) ಎಂದು ಗುರುತಿಸಲಾಗಿದೆ. ಸ್ವಂತ ಮನೆಯಲ್ಲಿ ದುರಸ್ತಿ ಕಾರ್ಯ ನಡೆಯುತ್ತಿದ್ದ ಕಾರಣ ಕುಟುಂಬವು ತಾತ್ಕಾಲಿಕವಾಗಿ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದು. ರಾತ್ರಿ ನಿರಂತರ ಮಳೆ ಹಾಗೂ ಗಾಳಿಯಿಂದ ದುರ್ಬಲಗೊಂಡಿದ್ದ ಮನೆಯ ಮೇಲ್ಛಾವಣಿ ಅಚಾನಕ್ ಆಗಿ ಕುಸಿದು ಬಿದ್ದಿದೆ. ಈ ವೇಳೆ ನಿದ್ರೆಯಲ್ಲಿದ್ದ ಕುಟುಂಬ ಸದಸ್ಯರು ಅವಶೇಷಗಳಡಿ ಸಿಲುಕಿ ಮೃತಪಟ್ಟಿದ್ದಾರೆ.

ಸುದ್ದಿ ತಿಳಿದ ತಕ್ಷಣ ಅಗ್ನಿಶಾಮಕ ದಳದ ಸಿಬ್ಬಂದಿ ಮತ್ತು ಪೊಲೀಸರು ಸ್ಥಳಕ್ಕೆ ಧಾವಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದರು. ಗ್ರಾಮಸ್ಥರು ಕೂಡ ಅವಶೇಷಗಳನ್ನು ತೆರವುಗೊಳಿಸುವ ಕಾರ್ಯದಲ್ಲಿ ಸಹಕರಿಸಿದರು.

ಘಟನೆಯಿಂದ ಗ್ರಾಮದಲ್ಲಿ ಆತಂಕ ಮತ್ತು ಶೋಕದ ವಾತಾವರಣ ನಿರ್ಮಾಣವಾಗಿದೆ. ಹಳೆಯ ಹಾಗೂ ಶಿಥಿಲಾವಸ್ಥೆಯ ಮನೆಯಲ್ಲೇ ಕುಟುಂಬ ವಾಸವಾಗಿದ್ದದ್ದು ಈ ದುರಂತಕ್ಕೆ ಕಾರಣವಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.

ಡಾ.ಎಸ್.ಕೆ.ಸುಬ್ಬೇಗೌಡ ನಿಧನ



ಮೈಸೂರು, ಮೇ 15– ಮೈಸೂರಿನ ಯರಗನಹಳ್ಳಿ ನಿವಾಸಿ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕ, ಖ್ಯಾತ ಮನೋರೋಗ ತಜ್ಞ ಡಾ.ಎಸ್. ಕೆ.ಸುಬ್ಬೇಗೌಡ(82) ಅವರು ಶುಕ್ರವಾರ ಬೆಳಗ್ಗೆ ನಿಧನರಾದರು.

ಇವರು ನಿವೃತ್ತಿ ನಂತರವು ಆದಿ ಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಮೈಸೂರಿನ ಗೋಪಾಲ ಗೌಡ ಶಾಂತವೇರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತಿದ್ದರು. ಮೂಲತಃ ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲೂಕಿನ ಸೊಳ್ಳೆಪುರ ಗ್ರಾಮದವರಾದ ಇವರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸಂಜೆ ಯರಗನಹಳ್ಳಿಯ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹುಟ್ಟುಹಬ್ಬ ಸಂಭ್ರಮ



ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷರಾದ ಸಿ.ನಾರಾಯಣಗೌಡರ ಹುಟ್ಟುಹಬ್ಬವನ್ನು ಸಂಘದ ಕಚೇರಿ ಆವರಣದಲ್ಲಿ ಆಚರಿಸಲಾಯಿತು. ಈ ವೇಳೆ ಸಂಘದ ಪದಾಧಿಕಾರಿಗಳು, ಸದಸ್ಯರು ಸೇರಿದಂತೆ ಅನೇಕ ಹೋಟೆಲ್ ಉದ್ಯಮಿಗಳು ಹಾಗೂ ಹಿತೈಷಿಗಳು ಶುಭಾಶಯ ಕೋರಿ, ಅಭಿನಂದಿಸಿದರು.

ಚೆನ್ನೈ ವಿರುದ್ಧ ಲಕ್ನೋಗೆ ಸೂಪರ್ ಗೆಲುವು

ಲಕ್ನೋ, ಮೇ 15(ವಿವಿಹೆಚ್)– ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ನಡೆದ ಐಪಿಎಲ್ ಚಾರಿಕ ಪಂದ್ಯದಲ್ಲಿ ಮಿಚೆಲ್ ಮಾರ್ಷ್ ಅವರ ಆಕರ್ಷಕ ಅರ್ಧ ಶತಕದಾಟದ ನೆರವಿನಿಂದ ಲಕ್ನೋಸೂಪರ್ ಜೈಂಟ್ಸ್ 7 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು.

ಇಲ್ಲಿನ ಏಕನಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಐಪಿಎಲ್–2026ರ 59ನೇ ಲೀಗ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಸಿಎಸ್‌ಕೆ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 187 ರನ್ ಕಲೆಹಾಕಿತು. ಈ ಮೊತ್ತವನ್ನು ಸರಾಗವಾಗಿ ಬೆನ್ನತ್ತಿದ ಲಕ್ನೋ 156.4 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 188ರನ್ ಗಳಿಸಿತು.

ಟಾಸ್ ಸೋತು ಮೊದಲು ಇನ್ನಿಂಗ್ಸ್ ಆರಂಭಿಸಿದ ಚೆನ್ನೈ ಬ್ಯಾಟರ್‌ಗಳ ಆಟ ಲಕ್ನೋದಲ್ಲಿ ನಡೆಯಲಿಲ್ಲ. ಸಂಜು ಸ್ಯಾಮ್ಸನ್ 20(20), ನಾಯಕ ಋತುರಾಜ್ ಗಾಯಕ್ವಾಡ್ 13(9), ಊರ್ವಿಲ್ ಪಟೇಲ್ 6(7), ಡೆವಾಲ್ಡ್ ಬ್ರೇವಿಸ್ 25(16) ರನ್ ಗಳಿಸಿ ಪೆವಿಲಿಯನ್ ಸೇರಿದರು.

ಈ ವೇಳೆ ಏಕಾಂಗಿಯಾಗಿ ನಿಂತು ಬ್ಯಾಟ್ ಬೀಸಿದ ಕಾರ್ತಿಕ್ ಶರ್ಮಾ 42 ಎಸೆತಗಳಲ್ಲಿ 6 ಬೌಂಡರಿ, 5 ಸಿಕ್ಸರ್ ಸಹಿತ 71 ರನ್ ಕಲೆಹಾಕಿದರು. ಕೊನೆಯಲ್ಲಿ ಅಬ್ಬರಿಸಿದ ಬೀಸಿದ ಶಿವಂ ದುಬೆ 16 ಎಸೆತಗಳಲ್ಲಿ ಅಜೇಯ 32 ರನ್ ಗಳಿಸಿದರೆ, ಪ್ರಶಾಂತ್ ವೀರ್ ಅಜೇಯ 13(10) ರನ್ ಪೇರಿಸಿ ಸ್ಕ್ರೀಜ್‌ನಲ್ಲಿದ್ದರು. ಲಕ್ನೋ ಪರ ಆಕಾಶ್ ಮಹಾರಾಜ್ ಸಿಂಗ್ ಪ್ರಮುಖ 3 ವಿಕೆಟ್ ಕಿತ್ತರು. ಮೊಹಮ್ಮದ್ ಶಮಿ, ಅಹ್ಮದ್ ಶಹಬಾಜ್ ತಲಾ ಒಂದೊಂದು ವಿಕೆಟ್ ಪಡೆದರು.



ಚೆನ್ನೈ ನೀಡಿದ್ದ ಗುರಿ ಬೆನ್ನತ್ತಿದ ಲಕ್ನೋಗೆ ಮಿಚೆಲ್ ಮಾರ್ಷ್ ಹಾಗೂ ಜೋಶ್ ಇಂಗ್ಲಿಸ್ ಜೋಡಿ ಮೊದಲ ವಿಕೆಟ್‌ಗೆ 135ರನ್‌ಗಳ ಜೊತೆಯಾಟ ಒದಗಿಸಿಕೊಟ್ಟಿತು. ಮಾರ್ಷ್ 38 ಎಸೆತಗಳಲ್ಲಿ 9ಬೌಂಡರಿ, 7 ಸಿಕ್ಸರ್ ಸಹಿತ 90 ರನ್ ಚಚ್ಚಿದರೆ, ಇಂಗ್ಲಿಸ್ 36(32) ರನ್ ಕಲೆಹಾಕಿದರು. ಬಳಿಕ ಬಂದ ಅಬ್ದುಲ್ ಸಮದ್ 7(3) ಬಂದಷ್ಟೆ ವೇಗವಾಗಿ ಹಿಂತಿರುಗಿದರು.

ಈ ವೇಳೆ ಒಂದಾದ ಪೂರನ್–ಚೌಧರಿ ಜೋಡಿ ತಂಡಕ್ಕೆ ಗೆಲುವು ತಂದಕೊಟ್ಟರು. ನಿಕೋಲಸ್ ಪೂರನ್ 17 ಎಸೆತಗಳಲ್ಲಿ ಔಟಾಗದೇ 32 ರನ್ ಹಾಗೂ ಮುಕುಲ್ ಚೌಧರಿ ಅಜೇಯ 13(10) ರನ್ ಬಾರಿಸಿದರು. ಸಿಎಸ್‌ಕೆ ಪರ ಮುಕೇಶ್ ಚೌಧರಿ ಹಾಗೂ ಸ್ಪೆನ್ಸರ್ ಜಾನ್ಸನ್ ತಲಾ ಒಂದೊಂದು ವಿಕೆಟ್ ಪಡೆದರು.

ಅಲಯನ್ಸ್ ಸ್ಕ್ವೇರ್‌ನ ನೂತನ ಬಡಾವಣೆ 'ಯುಕೆ ಸ್ಕ್ವೇರ್' ಲೋಕಾರ್ಪಣೆ



ಮೈಸೂರಿನ ಇಲವಾಲ ಸಮೀಪದ ಯಲಚನಹಳ್ಳಿಯಲ್ಲಿ ಅಲಯನ್ಸ್ ಸ್ಕ್ವೇರ್ ಸಂಸ್ಥೆ ವತಿಯಿಂದ ನಿರ್ಮಿಸಿರುವ 'ಯುಕೆ ಸ್ಕ್ವೇರ್' ನೂತನ ಬಡಾವಣೆಯನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಲೋಕಾರ್ಪಣೆಗೊಳಿಸಿದರು.

ಮೈಸೂರು, ಮೇ 15– ಉದ್ಯಮಿಗಳು ಹೂಡಿಕೆ ಮೂಲಕ ಮೈಸೂರಿನ ಬೆಳವಣಿಗೆಗೆ ಕೈಜೋಡಿಸಬೇಕು ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಮನವಿ ಮಾಡಿದರು.

ಮೈಸೂರಿನ ಇಲವಾಲ ಸಮೀಪದ ಯಲಚನಹಳ್ಳಿಯಲ್ಲಿ ಅಲಯನ್ಸ್ ಸ್ಕ್ವೇರ್ ಸಂಸ್ಥೆಯ 'ಯುಕೆ ಸ್ಕ್ವೇರ್' ನೂತನ ಬಡಾವಣೆಯನ್ನು ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಮೈಸೂರು ಹಿಂದೆಂದಿಗಿಂತಲೂ ವೇಗವಾಗಿ ಬೆಳೆಯುತ್ತಿದೆ. ಹಾಗೆಯೇ ಮೈಸೂರು–ಕುಶಾಲನಗರ ಹೆದ್ದಾರಿ ಬಳಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗುತ್ತಿವೆ. ಹೆದ್ದಾರಿ ಬಳಿಯೇ 'ಯುಕೆ ಸ್ಕ್ವೇರ್' ನಂತಹ ಅಭಿವೃದ್ಧಿ ಹೊಂದಿದ ಅತ್ಯುತ್ತಮ ಲೇಔಟ್ ಲೋಕಾರ್ಪಣೆಯಾಗಿರುವುದು ಒಳ್ಳೆಯ ಸಂಗತಿ. ಹೀಗೆ ಹೂಡಿಕೆ ಮಾಡುವ ಮೂಲಕ ಮೈಸೂರು ಬೆಳವಣಿಗೆಗೆ ಕೈಜೋಡಿಸಬೇಕು ಎಂದರು.

ವಿಮಾನ ನಿಲ್ದಾಣ ವಿಸ್ತರಣೆ ಯೋಜನೆ, ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ಸೇರಿದಂತೆ ಕಳೆದೊಂದು ದಶಕದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ. ಮೈಸೂರು–ಕುಶಾಲನಗರ ಹೆದ್ದಾರಿ ಸಹ ನಿರ್ಮಾಣವಾಗಲಿದೆ. ನಾನು ಸಂಸದನಾಗಿದ್ದ ಸಂದರ್ಭದಲ್ಲಿ ಈ ಯೋಜನೆಗಳಿಗಾಗಿ ಬಹಳಷ್ಟು ಓಡಾಡಿದ್ದೇನೆ ಇನ್ನೂ ಮುಂದೆಯೂ ಮೈಸೂರಿನ ಅಭಿವೃದ್ಧಿಗೆ ನಾನು ಸದಾ ಶ್ರಮಿಸುತ್ತೇನೆ ಎಂದು ಹೇಳಿದರು.

ಅಲಯನ್ಸ್ ಸ್ಕ್ವೇರ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಬಿ.ಎಸ್.ಪ್ರಶಾಂತ್ ಮಾತನಾಡಿ, ಪ್ರಶಾಂತ ವಾತಾವರಣ ಹೊಂದಿರುವ ಮೈಸೂರಿನಲ್ಲಿ ಒಂದು ನಿವೇಶನ ಖರೀದಿಸಿ, ಮನೆ ನಿರ್ಮಿಸಿಕೊಂಡು ಜೀವನ ನಡೆಸಬೇಕು ಎಂಬುದು ಎಷ್ಟೋ ಜನರ ಕನಸಾಗಿದೆ. ಸಾಮಾನ್ಯ ಜನರ ಕನಸನ್ನು ನನಸು ಮಾಡಿಸಲು ಅಲಯನ್ಸ್ ಸ್ಕ್ವೇರ್ ಸದಾ ಶ್ರಮಿಸುತ್ತದೆ. ಯುಕೆ ಸ್ಕ್ವೇರ್ ಬಡಾವಣೆಯಲ್ಲಿ ಅತ್ಯುನ್ನತ ಗುಣಮಟ್ಟದ ಸೌಕರ್ಯಗಳಿರುವ 300 ನಿವೇಶನಗಳಿವೆ. ನಮ್ಮ ಬಳಿ ನಿವೇಶನ ಬುಕ್ ಮಾಡಿದರೆ ಸಾಕು ದಸ್ತಾವೇಜು, ನೋಂದಣಿ ಸೇರಿದಂತೆ ಎಲ್ಲಾ ಪ್ರಕ್ರಿಯೆಗಳನ್ನೂ ಸಂಸ್ಥೆಯೇ ನೋಡಿಕೊಳ್ಳಲಿದೆ. ವಿಶ್ವಾಸಾರ್ಹ ಅಲಯನ್ಸ್ ಸ್ಕ್ವೇರ್ ಸಂಸ್ಥೆಯ 19 ವರ್ಷಗಳ ಪಯಣದಲ್ಲಿ ಯುಕೆ ಸ್ಕ್ವೇರ್ ಬಡಾವಣೆ ಹೊಸ ಮೈಲಿಗಲ್ಲಾಗಿದೆ ಎಂದರು.

ಈ ವೇಳೆ ಉಷಾ ಕಿರಣ ಸಂಸ್ಥೆಯ ಡೆವೆಲಪರ್, ಯುಕೆ ಸ್ಕ್ವೇರ್‌ನ ಮಾಲೀಕ ಶ್ರೀಕಾಂತ, ಅಲಯನ್ಸ್ ಸ್ಕ್ವೇರ್ ತಂಡದ ಸದಸ್ಯರು ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶನಿವಾರ 16 ಮೇ 2026

ಪ್ರಧಾನಿ ನರೇಂದ್ರ ಮೋದಿಯವರ ಮಿತವ್ಯಯ ಕರೆ ಹಿನ್ನೆಲೆ

ಡಿಸೇಲ್ ಕಾರು ಬಿಟ್ಟು ಎಲೆಕ್ಟ್ರಿಕ್ ಸ್ಕೂಟರ್ ಏರಿದ ಶಾಸಕ ಶ್ರೀವತ್ಸ



ಪ್ರಧಾನಿ ನರೇಂದ್ರ ಮೋದಿ ಅವರ ಕರೆಯ ಮೇರೆಗೆ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಕಾರು ಬಿಟ್ಟು ಎಲೆಕ್ಟ್ರಿಕ್ ಸ್ಕೂಟರ್ ಬಳಕೆ ಆರಂಭಿಸಿದರು.

ಮೈಸೂರು, ಮೇ15(ಬಿಎಲ್‌ಯು)– ಪೆಟ್ರೋಲ್, ಡೀಸೆಲ್ ಮಿತವಾಗಿ ಬಳಸುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಕರೆಯ ಮೇರೆಗೆ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ಇಂದಿನಿಂದ ಡೀಸೆಲ್ ಕಾರು ಬಳಕೆ ಕೈಬಿಟ್ಟು ಎಲೆಕ್ಟ್ರಿಕ್ ಸ್ಕೂಟರ್, ಕಾರನ್ನು ಬಳಸಲು ಆರಂಭಿಸಿದ್ದಾರೆ.

ನಗರದ ಅಗ್ರಹಾರದ ತಮ್ಮ ಕಚೇರಿಯಿಂದ ತಮ್ಮ ದಿನ ನಿತ್ಯ ಕ್ಷೇತ್ರದಲ್ಲಿನ ಕೆಲಸ ಕಾರ್ಯಕ್ಕೆ ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಸಂಚರಿಸಲಿದ್ದಾರೆ.

ಕ್ಷೇತ್ರ ಬಿಟ್ಟು ರಾಜಧಾನಿ, ಇನ್ನಿತರೆ ಸ್ಥಳಗಳಿಗೆ ಸ್ನೇಹಿತನ ಎಲೆಕ್ಟ್ರಿಕ್ ಕಾರು ಬಳಕೆ ಮಾಡುತ್ತೇನೆ. ಈ ಮೂಲಕ ನರೇಂದ್ರ ಮೋದಿ ಅವರ ಸಲಹೆಯನ್ನು ಚಾಚೂ ತಪ್ಪದೆ ಪಾಲಿಸುವುದಾಗಿ ಶ್ರೀವತ್ಸ ತಿಳಿಸಿದ್ದಾರೆ.

ಕೇವಲ ಒಬ್ಬ ವ್ಯಕ್ತಿಯ ಬಳಕೆಗೆ ಯಾರೂ ಕೂಡ ಕಾರು ಬಳಸಬಾರದು. ಸಾಧ್ಯವಾದಷ್ಟು ಸಾರ್ವಜನಿಕ ಸಾರಿಗೆಯನ್ನು ಬಳಕೆ ಮಾಡಬೇಕು. ಇದರಿಂದ ದೇಶ ಎದುರಿಸುತ್ತಿರುವ ಇಂಧನ ಬಿಕ್ಕಟ್ಟಿನಿಂದ ಪಾರಾಗಬಹುದು ಎಂದು ಶ್ರೀವತ್ಸ ಅಭಿಪ್ರಾಯಪಟ್ಟರು.

ಹಾವು ಕಡಿದು ಗೋವಾ ಕಾಂಗ್ರೆಸ್ ಮುಖಂಡ ಕೇತನ್ ಸಾವು



ಪಣಜಿ: ಗೋವಾ ಕಾಂಗ್ರೆಸ್ ನಾಯಕ ಕೇತನ್ ಭಾಟಿಕರ್(38) ಕರ್ನಾಟಕ ಪ್ರವಾಸದ ಮಾರ್ಗಮಧ್ಯೆ ಹಾವಿನ ಕಡಿತದಿಂದ ಮೃತಪಟ್ಟಿದ್ದಾರೆ.

ಗುರುವಾರ ರಾತ್ರಿ ಕೇತನ್ ಭಾಟಿಕರ್, ಕರ್ನಾಟಕದ ದಾಂಡೇಲಿ ಗ್ರಾಮಕ್ಕೆ ತೆರಳುತ್ತಿದ್ದರು. ಮಾರ್ಗಮಧ್ಯೆ ಗೋವಾ–ಕರ್ನಾಟಕ ಗಡಿಯಲ್ಲಿರುವ ಕರ್ಮಲ್ ಘಾಟ್ ಬಳಿ ಯಾವುದೋ ಕಾರಣಕ್ಕಾಗಿ ವಾಹನದಿಂದ ಕೆಳಗಿಳಿದಾಗ ಹಾವು ಕಡಿದಿದೆ. ತಕ್ಷಣ ಅವರನ್ನು ಗೋವಾದ ಧಾರವಾಡೋರಾದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯಲಾಯಿತು. ಆದರೆ, ದುರದೃಷ್ಟವಶಾತ್ ಅವರು ಆಸ್ಪತ್ರೆಗೆ ತಲುಪುವ ಮೊದಲೇ ಮೃತಪಟ್ಟಿದ್ದಾರೆ. ಕೇತನ್ ಭಾಟಿಕರ್ ಅವರು ಗೋವಾ ಕಾಂಗ್ರೆಸ್‌ನ ಭರವಸೆಯ ನಾಯಕರಾಗಿದ್ದರು. ಫೋಂಡಾ ಉಪಚುನಾವಣೆಗೆ ಇವರು ಕಾಂಗ್ರೆಸ್ ಅಭ್ಯರ್ಥಿಯಾಗಿದ್ದರು. ಆದರೆ, ಹೈಕೋರ್ಟ್ ತೀರ್ಪಿನಿಂದಾಗಿ ಉಪಚುನಾವಣೆ ರದ್ದಾಗಿತ್ತು. ಹೈಕೋರ್ಟ್ ಆದೇಶದ ವಿರುದ್ಧ ಅವರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಸದ್ಯ ಪ್ರಕರಣ ವಿಚಾರಣೆಯ ಹಂತದಲ್ಲಿದೆ.

ಮೈಸೂರು ಅರಮನೆ ಆವರಣದ ವರಹಸ್ವಾಮಿ, ಅಂಬುಜವಲ್ಲಿ ಮಹಾಲಕ್ಷ್ಮಿ ದೇವಾಲಯಗಳ ಚಿತ್ರಗಳ ಸಂರಕ್ಷಣೆ

12 ಲಕ್ಷ ರೂ. ವೆಚ್ಚದಲ್ಲಿ ಪುರಾತತ್ವ ಸಂಗ್ರಹಾಲಯ, ಪರಂಪರೆ ಇಲಾಖೆಯಿಂದ ಕ್ರಮ

ಮೈಸೂರು, ಮೇ 15(ಜಿಎ)–ಮೈಸೂರಿನ ಅಂಬಾವಿಲಾಸ ಅರಮನೆ ಆವರಣದ ವರಹಾ ಸ್ವಾಮಿ ಮತ್ತು ಅಂಬುಜವಲ್ಲಿ ಮಹಾಲಕ್ಷ್ಮೀ ದೇವಾಲಯದಲ್ಲಿ ಸತ್ವ ಕಳೆದುಕೊಂಡಿದ್ದ ದೇವರ ಭಿತ್ತಿ ಚಿತ್ರಗಳ ಸಂರಕ್ಷಣೆಗೆ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಮುಂದಾಗಿದೆ.

ಈ ಹಿಂದೆ 2021ರಲ್ಲಿ ಭಿತ್ತಿ ಚಿತ್ರಗಳ ಸಂರಕ್ಷಣೆ ಆರಂಭವಾಗಿ ಏಕಾಏಕಿ ಅರ್ಧಕ್ಕೆ ನಿಂತಿತ್ತು. ಆದರೆ, ಈಗ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ವತಿಯಿಂದ 12 ಲಕ್ಷ ರೂ. ವೆಚ್ಚದಲ್ಲಿ ಸಂರಕ್ಷಣೆ ಮಾಡಲು ಮುಂದಾಗಿದ್ದು, ಸದ್ಯದಲ್ಲಿಯೇ ಸಂರಕ್ಷಣಾ ಕಾರ್ಯ ಆರಂಭವಾಗುವ ನಿರೀಕ್ಷೆ ಇದೆ.

ಹೊಯ್ಸಳರ ಕಾಲದಲ್ಲಿ ಶ್ರೀರಂಗಪಟ್ಟಣದಲ್ಲಿ ನಿರ್ಮಿಸಿದ್ದ ವರಹಾಸ್ವಾಮಿ ಹಾಗೂ ಅಂಬುಜವಲ್ಲಿ ದೇವರ ಮೂಲ ವಿಗ್ರಹಗಳನ್ನು ಚಿಕ್ಕದೇವರಾಜ ಒಡೆಯರ್ 1811ರಲ್ಲಿ ಅರಮನೆ ಆವರಣದ ದೇವಾಲಯದಲ್ಲಿ ಪ್ರತಿಷ್ಠಾಪಿಸಿದರು. ನಂತರ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ದಿವಾನರಾಗಿದ್ದ ಪೂರ್ಣಯ್ಯನವರು ಈ ದೇವಾಲಯಗಳ ಒಳಾಂಗಣ ಗೋಡೆಗಳಲ್ಲಿ ರಾಮಯಾಣ, ಮಹಾಭಾರತದ ಮಹತ್ವ ಸಾರುವ ಭಿತ್ತಿ ಚಿತ್ರಗಳನ್ನು ರಚಿಸಿದರು. ಆದರೆ ಅತ್ಯಾಕರ್ಷಕವಾದ ಸುಮಾರು 200 ವರ್ಷಗಳ ಐತಿಹಾಸಿಕ ಚಿತ್ರಗಳನ್ನು ಸೂಕ್ತ ರೀತಿ ನಿರ್ವಹಣೆ ಇಲ್ಲದ ಕಾರಣ ಅವುಗಳು ಮೂಲ ಸ್ವರೂಪವನ್ನು ಕಳೆದುಕೊಂಡಿತ್ತು. ನವೀಕರಣ ಸಂದರ್ಭದಲ್ಲಿ ರಾಸಾಯನಿಕಯುಕ್ತ ಬಣ್ಣಗಳ ಬಳಕೆ ಮಾಡಿದ್ದು, ಸೇರಿದಂತೆ ನಾನಾ ಕಾರಣಗಳಿಂದ ಚಿತ್ರಗಳು ಹಾಳಾಗಿತ್ತು.

ಅರ್ಧಕ್ಕೆ ಮೊಟಕು : ಇದನ್ನು ಗಮನಿಸಿದ ಕರ್ನಾಟಕ ಪುರಾತತ್ವ ಇಲಾಖೆ, ಈ ವಿಶೇಷ ಚಿತ್ರಪಟಗಳ ಸಂರಕ್ಷಣೆ ಮಾಡಲು 2022ರಲ್ಲಿ ಈ ರೀತಿ ಚಿತ್ರಗಳ ಸಂರಕ್ಷಣೆಗಾಗಿ ಇರುವ ಲಕ್ನೋದ ರಾಷ್ಟ್ರೀಯ ಸಂರಕ್ಷಣಾ ಸಂಶೋಧನಾ ಪ್ರಯೋಗಾಲಯಕ್ಕೆ (ಎನ್‌ಆರ್‌ಎಲ್‌ಸಿ)ಈ ಚಿತ್ರಪಟಗಳ ಸಂರಕ್ಷಣಾ ಹೊಣೆ ನೀಡಲಾಗಿತ್ತು. ಅದರಂತೆ ಎನ್‌ಆರ್‌ಎಲ್‌ಸಿನ ಮೈಸೂರು ಶಾಖೆಯಾದ ಪ್ರಾದೇಶಿಕ ಸಂರಕ್ಷಣಾ ಪ್ರಯೋಗಾಲಯದ ತಂಡ ಕೆಲ ತಿಂಗಳು ಸಂರಕ್ಷಣಾ ಕಾರ್ಯದಲ್ಲಿ ತೊಡಗಿತ್ತು.

ಸಂರಕ್ಷಣಾ ಕಾರ್ಯ ಮಾಡುವ ಬದಲು ಅಲ್ಲಿರುವ ಚಿತ್ರಗಳನ್ನು ವಿರೂಪಗೊಳಿಸಿ ಸಂಸ್ಥೆಯ ಸದಸ್ಯರು ಇದ್ದಕ್ಕಿಂದತೆ ಸಂರಕ್ಷಣಾ ಕಾರ್ಯವನ್ನು ಅರ್ಧಕ್ಕೆ ಮೊಟಕುಗೊಳಿಸಿದರು. ಈ ಸಂಬಂಧ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯೂ ಎನ್‌ಆರ್‌ಎಲ್‌ಸಿಗೆ ಅನೇಕ ಬಾರಿ ಪತ್ರ ಬರೆದರೂ ಯಾವುದೇ ಪ್ರತಿಕ್ರಿಯೆ ಬರಲಿಲ್ಲ.

ಈ ನಡುವೇ ಎನ್‌ಆರ್‌ಎಲ್‌ಸಿನ ಮೈಸೂರು ಶಾಖೆಯಾದ ಪ್ರಾದೇಶಿಕ ಸಂರಕ್ಷಣಾ ಪ್ರಯೋಗಾಲಯದ ತಂಡದೊಂದಿಗೆ ಎಸ್.ವಿ.ಸಹನಾ ಎಂಬ ಮೈಸೂರಿನ ಯುವತಿ ಕಾರ್ಯನಿರ್ವಹಿಸುತ್ತಿದ್ದರು. ಅವರು 2024ರ ಫೆಬ್ರವರಿಯಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ, ಸಂಸ್ಥೆಯಲ್ಲಿ ನಾನು ಪ್ರಶಿಕ್ಷಾರ್ಥಿಯಾಗಿ ಕಾರ್ಯನಿರ್ವಹಿಸುತ್ತಿದ್ದೆ. ಆದರೆ, ಸಂಸ್ಥೆ ವತಿಯಿಂದ ನನಗೆ ಶಿಷ್ಯವೇತನ ನೀಡಿಲ್ಲ ಎಂದು ಆರೋಪಿಸಿದರು.

ಮುಖ್ಯಮಂತ್ರಿಗಳಿಗೆ ಪತ್ರ : ಇಲ್ಲಿನ ಚಿತ್ರಗಳ ದುಸ್ಥಿತಿಯನ್ನು ಗಮನಿಸಿದ್ದ ಕೆಲವು ಭಕ್ತಾದಿಗಳು ಮುಖ್ಯಮಂತ್ರಿಗಳ ಕುಂದುಕೊರತೆ ವಿಭಾಗಕ್ಕೆ ಪತ್ರ ಬರೆದು ಇಲ್ಲಿನ ಅಪರೂಪದ ಚಿತ್ರಗಳನ್ನು ರಕ್ಷಿಸುವಂತೆ ಕೋರಿದರು. ನಂತರ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ ಡಾ.ವೈಷ್ಣವಿ, ಚಾಮುಂಡೇಶ್ವರಿ ಕ್ಷೇತ್ರ ಪ್ರಾಧಿಕಾರ, ರಾಜ್ಯ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯುಕ್ತರಿಗೆ ಮೈಸೂರು ಪರಂಪರೆ ಬಿಂಬಿಸುವ ಚಿತ್ರಗಳನ್ನು ಸಂರಕ್ಷಿಸಲು ಅಗತ್ಯಕ್ರಮ ವಹಿಸುವಂತೆ ಪತ್ರ ಬರೆದಿದ್ದಾರೆ. ಪತ್ರಕ್ಕೆ ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜು, ಅಂಬುಜವಲ್ಲಿ ದೇವಾಲಯದ ಒಳಗೋಡೆಗಲ್ಲಿರುವ ಭಿತ್ತಿಚಿತ್ರಗಳನ್ನು ಸಂರಕ್ಷಣೆ ಮಾಡಲು 2025–26ನೇ ಸಾಲಿನಲ್ಲಿ 12 ಲಕ್ಷರೂ. ವೆಚ್ಚದ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ್ದು, ಆಯ್ಕೆಗೊಂಡ ಏಜೆನ್ಸಿಗೆ ನೀಡಲಾಗಿದೆ ಶೀಘ್ರದಲ್ಲಿಯೇ ಸಂರಕ್ಷಣಾ ಕಾರ್ಯಾದೇಶವನ್ನು ನೀಡಿ ಚಿತ್ರಗಳನ್ನು ಸಂರಕ್ಷಿಸಲಾಗುವುದು ಎಂದು ಪತ್ರ ರವಾನಿಸಿದ್ದಾರೆ.



2022ರಲ್ಲಿ ಅರಮನೆ ಆವರಣದ ಅಂಬುಜವಲ್ಲಿ ಮಹಾಲಕ್ಷ್ಮೀ ದೇವಾಲಯದ ಭಿತ್ತಿ ಚಿತ್ರಗಳ ಸಂರಕ್ಷಣೆಯಲ್ಲಿ ಎನ್‌ಆರ್‌ಎಲ್‌ಸಿನ ಮೈಸೂರು ಶಾಖೆಯಾದ ಪ್ರಾದೇಶಿಕ ಸಂರಕ್ಷಣಾ ಪ್ರಯೋಗಾಲಯದ ತಂಡವು ತೊಡಗಿದ್ದ ಚಿತ್ರ.

ಎರಡು ತಿಂಗಳಲ್ಲಿ ಸಂರಕ್ಷಣೆ ಪೂರ್ಣ

“ಭಿತ್ತಿಚಿತ್ರಗಳ ಸಂರಕ್ಷಣೆಗಾಗಿ ಡೆಕನ್ ಹೆರಿಟೇಜ್ ಫೌಂಡೇಷನ್ ಸಂಸ್ಥೆಗೆ ಈಗಾಗಲೇ ಟೆಂಡರ್ ಪ್ರಕ್ರಿಯೆ ಆಗಿದೆ. ಕಾರ್ಯಾದೇಶವನ್ನು ನೀಡಲಾಗಿದೆ. ಅವರ ತಂಡದಲ್ಲಿ ನುರಿತ ತಜ್ಞರಿದ್ದಾರೆ. ಈ ದೇವಾಲಯವು ಚಾಮುಂಡೇಶ್ವರಿ ಕ್ಷೇತ್ರ ಪ್ರಾಧಿಕಾರಕ್ಕೆ ಸೇರುವುದರಿಂದ ಅವರ ಅನುಮತಿಗಾಗಿ ಪತ್ರ ಬರೆಯಲಾಗಿದೆ. ಅಲ್ಲಿಂದ ಅನುಮತಿ ದೊರೆತ ತಕ್ಷಣ ಸಂರಕ್ಷಣೆ ಕಾರ್ಯ ಆರಂಭವಾಗಿ ಎರಡು ತಿಂಗಳಿನಲ್ಲಿ ಪೂರ್ಣಗೊಳಿಸಲಿದ್ದಾರೆ. ನಂತರ ಈ ವರ್ಷವೇ ವರಹಾ ಸ್ವಾಮಿ ದೇವಾಲಯದ ಒಳಗೋಡೆಯಲ್ಲಿರುವ ಭಿತ್ತಿ ಚಿತ್ರಗಳನ್ನು ಸಂರಕ್ಷಣೆ ಮಾಡುತ್ತೇವೆ.

ಇಲ್ಲಿರುವ ಚಿತ್ರಗಳಲ್ಲಿ ಆಭರಣ, ಮುಖ ಸೇರಿದಂತೆ ಕೆಲವು ಭಾಗಗಳು ಮಾತ್ರ ಹಾಳಾಗಿದೆ. ಅದನ್ನು ತಾಳೆ ಮಾಡಿಕೊಂಡು ಅವರು ಸಂರಕ್ಷಣೆ ಮಾಡುತ್ತಾರೆ. ಜೊತೆಗೆ ಅರಮನೆ ಗ್ರಂಥಾಲಯದಲ್ಲಿರುವ ಪುಸ್ತಕಗಳಲ್ಲಿರುವ ಚಿತ್ರಗಳನ್ನು ಆಧರಿಸಿ ಮರು ಚಿತ್ರ ಬಿಡಿಸುತ್ತಾರೆ.

– ಎ. ದೇವರಾಜು, ಆಯುಕ್ತರು, ಪುರಾತತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ

ನೀಲಗಂಗಾ ಮಹಿಳಾ ಬಳಗದ 30ನೇ ವಾರ್ಷಿಕೋತ್ಸವ

- ಕೌಟುಂಬಿಕ, ವೃತ್ತಿ ಜೀವನದಲ್ಲಿ ಜವಬ್ದಾರಿ ನಿರ್ವಹಣೆಯಲ್ಲಿ ಮಹಿಳೆಯರೇ ಸೈ
- ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಪ್ರಶಂಸೆ
- ಮಹಿಳೆ ಸಶಕ್ತಳಾದರೆ ಸಮಾಜದ ಅಭಿವೃದ್ಧಿಯೂ ಸಾಧ್ಯ



ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನ ಸಭಾಂಗಣದಲ್ಲಿ ನಡೆದ ನೀಲಗಂಗಾ ಮಹಿಳಾ ಬಳಗದ 30ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಮಹಿಳಾ ಸಾಧಕಿಯರನ್ನು ಗೌರವಿಸಲಾಯಿತು.

ಮೈಸೂರು, ಮೇ.15(ಎಂಟಿವೈ)– ಮಹಿಳೆಯರು ಕೌಟುಂಬಿಕ ಜೀವನ ಮತ್ತು ವೃತ್ತಿ ಜೀವನದಲ್ಲಿ ತನ್ನ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುವುದರೊಂದಿಗೆ ಸಮಾಜಮುಖಿಯಾಗಿ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನ ಸಭಾಂಗಣದಲ್ಲಿ ನೀಲಗಂಗಾ ಮಹಿಳಾ ಬಳಗದ 30ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರಲ್ಲಿ ಸೇವಾ ಮನೋಭಾವ ಹೆಚ್ಚಾಗಿದೆ. ಸಮಾಜಮುಖಿ ಚಿಂತನೆಗಳು ವ್ಯಕ್ತಿಯನ್ನು ಸಂಘಜೀವಿಯಾಗಿ ಮಾಡುತ್ತವೆ. ಸಮಾಜ ಸೇವಾ ಕಾರ್ಯಗಳಲ್ಲೂ ತೊಡಗಲು ಸಂಘಟನೆಗಳ ಅಗತ್ಯವಿದೆ. ನೀಲಗಂಗಾ ಮಹಿಳಾ ಬಳಗ ಹಲವು ಸಮಾಜಮುಖಿ ಕೆಲಸವನ್ನು ನಿರಂತರವಾಗಿ ನಡೆಸಿಕೊಂಡು ಬರುತ್ತಿರುವುದು ಪ್ರಶಂಸನೀಯ ಎಂದರು.


ಮಹಿಳೆ ಅನೇಕ ರೀತಿಯ ಹೋರಾಟಗಳ ಮೂಲಕ ಸಮಾಜದಲ್ಲಿ ಅವರು ಛಾಪು ಮೂಡಿಸಿದ್ದಾಳೆ. ಸಮಾನತೆ ಪಡೆಯಲು ಸತತ ಪ್ರಯತ್ನದ ಫಲವಾಗಿ ಈಗ ಒಂದು ಹಂತ ತಲುಪಿದ್ದೇವೆ. ಕುಟುಂಬದಲ್ಲಿ ಮಹಿಳೆ ಸೊಸೆ, ತಾಯಿ, ಅತ್ತೆಯಾಗಿ ವಿವಿಧ ಪಾತ್ರಗಳನ್ನು ನಿರ್ವಹಿಸುವುದರಿಂದ ಸಂಘಟನೆ ಹುಟ್ಟಿನಿಂದಲೇ ಬಂದಿರುತ್ತದೆ. ಪೋಷಕರು ಮಕ್ಕಳಿಗಾಗಿ ಸಮಯ ಮೀಸಲಿಟ್ಟು ಉತ್ತಮ ನೈತಿಕ ಮೌಲ್ಯಗಳನ್ನು ಬೆಳೆಸಿ ಸಂಬಂಧಗಳ ಅರಿವು ಮೂಡಿಸಿದರೆ ಮಹಿಳಾ ದೌರ್ಜನ್ಯ ತಡೆಯಬಹುದು ಎಂದು ಸಲಹೆ ನೀಡಿದರು

ದಾವಣಗೆರೆ ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಡಾ ಇಂದುಮತಿ ಮಾದಯ್ಯ ಮಾತನಾಡಿ, ಪ್ರಸ್ತುತ ಕಾಲದಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲೂ ಸಾಧನೆ ಮಾಡುವುದರೊಂದಿಗೆ ಯಶಸ್ಸು ಸಾಧಿಸುತ್ತಿದ್ದಾರೆ. ಮನಸಿದ್ದರೆ ಯಾವ ಕೆಲಸವೂ ಅಸಾಧ್ಯವಿಲ್ಲ ಎಂಬುದಕ್ಕೆ ಈ ನೀಲಗಿರಿ ಮಹಿಳಾ ಬಳಗವೇ ಸಾಕ್ಷಿ ಯಾಗಿದೆ. 30 ವರ್ಷಗಳ ಸುದೀರ್ಘ ಸೇವೆಯನ್ನು ಈ ಬಳಗ ಮಡಿಕೊಂಡು ಬಂದಿರುವುದು ಹೆಮ್ಮೆ ಪಡುವ ಸಂಗತಿ ಎಂದರು.

ಸನ್ಮಾನ: ಇದೇ ವೇಳೆ ಮಾಜಿ ಶಾಸಕರಾದ ಗೀತಾ ಮಹದೇವಪ್ರಸಾದ್, ಸೆಸ್ಕ್ ಜಾಗೃತ ದಳದ ಪೊಲೀಸ್ ಅಧೀಕ್ಷಕರಾದ ಸವಿತಾ ಹೂಗಾರ್, ವಿಭೂತಿ ಕೆರೆ ಗ್ರಾಮದ ಶಶಿಕಲಾ ಶಿವಲಿಂಗಯ್ಯ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿ ಸಾನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ನೀಲಗಂಗಾ ಮಹಿಳಾ ಬಳಗ ಅಧ್ಯಕ್ಷರಾದ ಗೀತಾ ರಾಜಶೇಖರ್, ಉಪಾಧ್ಯಕ್ಷರಾದ ಗೀತಾ ಈಶ್ವರ್, ಕಾರ್ಯದರ್ಶಿ ಬಿ.ರಾಜೇಶ್ವರಿ ಮಹೇಶ್, ಭ್ರಮರಾಂಭ ಸ್ವಾಮಿ, ಉಷಾ ಪಂಡಿತ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬ ಆಚರಣೆ; ಕಂಗೊಳಿಸಿದ ರಂಗೋಲಿ ಭಾವಚಿತ್ರ!



ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಮೂಡಿ ಬಂದ ಬೃಹತ್ ರಂಗೋಲಿ ಚಿತ್ರ ಡ್ರೋನ್ ಕ್ಯಾಮರಾದಲ್ಲಿ ಕಂಡುಬಂದಿದ್ದು..

ಮೈಸೂರು, ಮೇ 15(ಎಂಕೆ)– ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಗದ್ದಲದ ನಡುವೆಯೂ ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ 64ನೇ ವರ್ಷದ ಹುಟ್ಟುಹಬ್ಬವನ್ನು ಮೈಸೂರಿನಲ್ಲಿ ವಿವಿಧ ಸೇವಾ ಕಾರ್ಯ ಹಾಗೂ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸುವ ಮೂಲಕ ಆಚರಿಸಲಾಯಿತು.

ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಜಿಲ್ಲಾ ಮತ್ತು ನಗರ ಕಾಂಗ್ರೆಸ್‌ನ ಸೇವಾದಳದ ವತಿಯಿಂದ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ 60X135 ಅಡಿ ಅಳತೆಯ ಬೃಹತ್ ರಂಗೋಲಿ ಭಾವ ಚಿತ್ರವನ್ನು ಬಿಡುವ ಮೂಲಕ ಗೌರವ ಸಲ್ಲಿಸಲಾಯಿತು.

ಕಲಾವಿದರಾದ ಪುನೀತ್, ಸಿ.ಲಕ್ಷ್ಮಿ, ಹರ್ಷಿತ್ ಮತ್ತು ರವಿ ಮೇ 14 ರಾತ್ರಿ 12 ಗಂಟೆಯಿಂದ ಆರಂಭಿಸಿ, ಮೇ 15ರ ಬೆಳಗ್ಗೆ 9 ಗಂಟೆ ಸುಮಾರಿಗೆ ಬೃಹತ್ ರಂಗೋಲಿ ಭಾವಚಿತ್ರವನ್ನು ಪೂರ್ಣಗೊಳಿಸುವ ಮೂಲಕ ದಾಖಲೆ ಬರೆದರು. ನಂತರ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಿಹಿ ಹಂಚಿ ಹುಟ್ಟುಹಬ್ಬ ಆಚರಿಸಲಾಯಿತು.

ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಮೇಯರ್‌ಗಳಾದ ಟಿ.ಬಿ.ಚಿಕ್ಕಣ್ಣ, ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಮಾಜಿ ಉಪ ಮೇಯರ್ ಪುಷ್ಪವಲ್ಲಿ, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಡಿ.ನಾಗಭೂಷಣ್, ಯುವ ಮುಖಂಡ ಚೇತನ್ ವಿಷಕಂಠೇಗೌಡ, ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಸೇವಾದಳದ ನಗರ ಮತ್ತು ಜಿಲ್ಲಾಧ್ಯಕ್ಷ ಎಂ.ಕೆ. ಅಶೋಕ್, ಹಿಂದುಳಿದ ವರ್ಗಗಳ ವಿಭಾಗದ ನಗರಾಧ್ಯಕ್ಷ ಎನ್.ಆರ್. ನಾಗೇಶ್, ಮುಖಂಡರಾದ ಈಶ್ವರ್ ಚಕ್ಕಡಿ, ವೆಂಕಟೇಶ್, ನಂಜುಂಡಿ, ಸುಮ, ಆಶಾ, ಶುಭ, ಚಂದ್ರಕಲಾ ಮತ್ತಿತರರಿದ್ದರು.

ಯೋಗನರಸಿಂಹಸ್ವಾಮಿ ದೇವಸ್ಥಾನ: ಚಾಮರಾಜ ವಿಧಾನಸಭಾ ಕ್ಷೇತ್ರದ ದೇವರಾಜ ಮತ್ತು ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ವಿಜಯನಗರದಲ್ಲಿರುವ ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ಡಿಸಿಎಂ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು. ಈ ಕ್ಷೇತ್ರದ ಎರಡೂ ಬ್ಲಾಕ್ ಅಧ್ಯಕ್ಷರು, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಸುಶೀಲಾ ಮರೀಗೌಡ, ನಗರ ಪಾಲಿಕೆ ಮಾಜಿ ಸದಸ್ಯ ಪೈ.ಶ್ರೀನಿವಾಸ್, ಕೇಬಲ್ ನಾಗಣ್ಣ, ರಾಮಚಂದ್ರ, ವಕೀಲೆ ತನುಜಾ ಮಹೇಶ್ ಮತ್ತಿತರರಿದ್ದರು.

ನೂರೊಂದು ಗಣಪತಿ ದೇವಸ್ಥಾನ: ಹಾಗೆಯೇ ಅಗ್ರಹಾರದಲ್ಲಿರುವ ನೂರೊಂದು ಗಣಪತಿ ದೇವಸ್ಥಾನದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಈಡುಗಾಯಿ ಒಡೆದು ವಿಶೇಷ ಪೂಜೆ ಸಲ್ಲಿಸುವ ಮೂಲಕ ನೆಚ್ಚಿನ ನಾಯಕನ ಹುಟ್ಟುಹಬ್ಬ ಆಚರಿಸಿದರು.

ಕುರುಡ ಮತ್ತು ಮೂಗರ ಆಶ್ರಮ: ಜಿಲ್ಲಾ ಕಾಂಗ್ರೆಸ್‌ನ ಮಾಜಿ ಮಾಧ್ಯಮ ಕಾರ್ಯದರ್ಶಿ ಕೆ.ಪಿ.ಭಾಗ್ಯರಾಜ್ ನೇತೃತ್ವದಲ್ಲಿ ತಿಲಕ್‌ನಗರದಲ್ಲಿರುವ ಶ್ರೀ ರಾಜಕುಮಾರಿ ದೊಡ್ಡಮ್ಮಣ್ಣಿಯವರ ಕುರುಡ ಮತ್ತು ಮೂಗರ ಆಶ್ರಮದಲ್ಲಿ ವಿಶೇಷಚೇತನ ಮಕ್ಕಳಿಂದ ಕೇಕ್ ಕತ್ತರಿಸುವ ಮೂಲಕ ಡಿಕೆಶಿಯವರ ಹುಟ್ಟುಹಬ್ಬ ಆಚರಿಸಲಾಯಿತು. ಬಳಿಕ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟದ ವ್ಯವಸ್ಥೆ ಮಾಡಲಾಗಿತ್ತು.







ಮೈಸೂರಿನ ವಿವಿಧೆಡೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬ ಆಚರಿಸಲಾಯಿತು.

ಮೈಸೂರು ಜಿಲ್ಲೆಯಲ್ಲಿ ಮನೆ ಮನೆ ಗಣತಿ ಯಶಸ್ವಿ

6013 ಬ್ಲಾಕ್‌ನಲ್ಲಿ 7748 ಸಿಬ್ಬಂದಿಯಿಂದ 9,33,820 ಮನೆ ಗಣತಿ





“ಮೈಸೂರು ಜಿಲ್ಲೆಯಲ್ಲಿ ಮನೆ ಗಣತಿ ಯಶಸ್ವಿಯಾಗಿದ್ದು, ಕೊನೆ ದಿನಕ್ಕೂ ಎರಡು ದಿನ ಮೊದಲೇ ಗಣತಿದಾರರು ಮನೆ ಗಣತಿಯನ್ನು ಪೂರ್ಣಗೊಳಿಸಿದ್ದಾರೆ. ಕಾಲ ಕಾಲಕ್ಕೆ ಜಿಲ್ಲಾಧಿಕಾರಿಗಳು ಗಣತಿದಾರರ ಮೇಲ್ವಿಚಾರಕರೊಂದಿಗೆ ಪ್ರಗತಿ ಕುರಿತು ಚರ್ಚಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ಗಣತಿ ಪ್ರಕ್ರಿಯೆ ಯಾವುದೇ ಸಮಸ್ಯೆ ಉಂಟಾಗದೆ ಯಶಸ್ವಿಯಾಗಿ ನಡೆದಿದೆ. ಶೇ.100ರಷ್ಟು ಗಣತಿ ಪ್ರಗತಿ ಸಾಧಿಸಿದೆ.

– ಆರ್.ಐಶ್ವರ್ಯ, ಅಪರ ಜಿಲ್ಲಾಧಿಕಾರಿ, ಮೈಸೂರು.

ಮೈಸೂರು, ಮೇ.15(ಎಂಟಿವೈ)– ಮುಂದಿನ ವರ್ಷ ನಡೆಯುವ ಜನಗಣತಿಗಾಗಿ ಕಳೆದ ಒಂದು ತಿಂಗಳಿಂದ ನಡೆಸಿದ ಮನೆಗಣತಿ ಮೈಸೂರು ಜಿಲ್ಲೆಯಲ್ಲಿ ಯಾವುದೇ ಗೊಂದಲವಿಲ್ಲದೆ ಪೂರ್ಣಗೊಂಡಿದ್ದು, ಜಿಲ್ಲೆಯಲ್ಲಿ 6013 ಬ್ಲಾಕ್‌ಗಳಲ್ಲಿ 7748 ಸಿಬ್ಬಂದಿ 9,33,820 ಮನೆಗಳ ಗಣತಿ ನಡೆಸಿ ಅಗತ್ಯ ಮಾಹಿತಿ ಕ್ರೋಢೀಕರಿಸಿದ್ದಾರೆ.

10 ವರ್ಷಕ್ಕೊಮ್ಮೆ ನಡೆಯುವ ಜನಗಣತಿ ಪ್ರಕ್ರಿಯೆ ಕೊರೊನಾ ಹಿನ್ನೆಲೆಯಲ್ಲಿ 2021ರಲ್ಲಿ ನಡೆದಿರಲಿಲ್ಲ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಬಂದ ಬಳಿಕ ನಡೆಯುತ್ತಿರುವ 16ನೇ ಆವೃತ್ತಿಯ ಜನಗಣತಿ ಪ್ರಕ್ರಿಯೆ 2027ರಲ್ಲಿ ನಡೆಯಲಿದ್ದು, ಅದಕ್ಕೆ ಪೂರಕವಾಗಿ ಎರಡು ಹಂತದಲ್ಲಿ ಏ.1ರಿಂದ ಮೇ.15ರವರೆಗೆ ದೇಶದಾದ್ಯಂತ ಏಕಕಾಲದಲ್ಲಿ ಮನೆ ಗಣತಿ ಪ್ರಕ್ರಿಯೆ ನಡೆಸಲಾಯಿತು. ಮೈಸೂರು ಜಿಲ್ಲೆಯಲ್ಲಿ ನಿಗದಿತ ದಿನಕ್ಕಿಂತ ಎರಡು ದಿನ ಮುನ್ನವೇ ಶೇ.100ರಷ್ಟು ಗಣತಿ ಪ್ರಕ್ರಿಯೆ ಯಶಸ್ವಿಯಾಗಿ ನಡೆಸಿರುವ ಗಣತಿದಾರರು ಸಂಗ್ರಹಿಸಿದ ಮಾಹಿತಿಯನ್ನು ಡಿಜಿಟಲೀಕರಣಗೊಳಿಸಿ, ಜಿಲ್ಲಾಡಳಿತಕ್ಕೆ ಸಲ್ಲಿಸಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಮನೆಗಣತಿ ಪ್ರಕ್ರಿಯೆಗೆ 6540 ಗಣತಿದಾರರು, 1208 ಮೇಲ್ವಿಚಾರಕರು ಸೇರಿದಂತೆ 7748 ಸಿಬ್ಬಂದಿಯನ್ನು ನಿಯೋಜಿಸಿ ತರಬೇತಿ ನೀಡಲಾಗಿತ್ತು. ಅಲ್ಲದೆ, ಗಣತಿ ಪ್ರಕ್ರಿಯೆ ಸುಲಲಿತವಾಗಿ ನೆರವೇರಲೆಂಬ ಉದ್ದೇಶದಿಂದ ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ 1832 ಬ್ಲಾಕ್, ಗ್ರಾಮಾಂತರ ಪ್ರದೇಶದಲ್ಲಿ 4181 ಬ್ಲಾಕ್ ನಿರ್ಮಿಸಲಾಗಿತ್ತು. ಒಟ್ಟು 6013 ಬ್ಲಾಕ್‌ಗಳಲ್ಲಿ ಗಣತಿದಾರರು ತೆರಳಿ ಮೊದಲು ಮನೆಗಳ ಮ್ಯಾಪಿಂಗ್ ಮಾಡಿದ ಬಳಿಕ ಗಣತಿ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಪ್ರತಿಯೊಂದು ಮನೆಗೆ ತೆರಳಿ ಕುಟುಂಬದ ಯಾರಾದರೊಬ್ಬರಲ್ಲಿ ಕುಟುಂಬಕ್ಕೆ ಸಂಬಂಧಿಸಿದಂತೆ 33 ಪ್ರಶ್ನೆಯನ್ನು ಕೇಳಿ ಅದಕ್ಕೆ ಸಮರ್ಪಕ ಉತ್ತರ ಪಡೆದು ಡಿಜಿಟಲೀಕರಣಗೊಳಿಸಿ ಮಾಹಿತಿಯನ್ನು ಜಿಲ್ಲಾಡಳಿತಕ್ಕೆ ನೀಡಿದ್ದಾರೆ.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿ: ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 1832 ಬ್ಲಾಕ್ ರಚಿಸಿಕೊಂಡು 2023 ಗಣತಿದಾರರು ಹಾಗೂ 341 ಮೇಲ್ವಿಚಾರಕರು ಸೇರಿದಂತೆ 2364 ಸಿಬ್ಬಂದಿಯನ್ನು ಬಳಸಿಕೊಂಡು ಮನೆ ಗಣತಿ ನಡೆಸಲಾಗಿದೆ. 3,75,360 ಮನೆಗಳ ಗಣತಿ ಮಾಡಲಾಗಿದೆ. ಈ ವೇಳೆ ವಸತಿ ಮನೆ, ಭಾಗಶಃ ವಸತಿ ಮನೆ, ಖಾಲಿಯಿರುವ ಮನೆ, ಬೀಗ ಹಾಕಿರುವ ಮನೆಗಳ ಸಂಖ್ಯೆಯನ್ನು ನಮೂದಿಸಲಾಗಿದೆ. ಅಲ್ಲದೆ, ಮೈಸೂರು ನಗರದ ಜನಸಂಖ್ಯೆ 10,65,360ಕ್ಕೆ ಏರಿಕೆಯಾಗಿರುವುದು ಮನೆಗಣತಿ ವೇಳೆ ಕಂಡು ಬಂದಿದೆ.

ಗ್ರಾಮಾಂತರ ಪ್ರದೇಶ: ಮನೆಗಣತಿ ವೇಳೆ ಮೈಸೂರು ತಾಲೂಕು ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕು, ಹೋಬಳಿ, ನಗರ ಸಭೆ, ಪುರಸಭೆ, ಪಟ್ಟಣ ಪಂಚಾಯ್ತಿ ವ್ಯಾಪ್ತಿಯಲ್ಲೂ ಜಿಲ್ಲಾಡಳಿತದ ನೇತೃತ್ವದಲ್ಲಿ ಮನೆ ಗಣತಿ ನಡೆಸಲಾಗಿದೆ. ಗ್ರಾಮಾಂತರ ವ್ಯಾಪ್ತಿಯಲ್ಲಿ 4181 ಬ್ಲಾಕ್‌ನಲ್ಲಿ 4517 ಗಣತಿದಾರರು, 867 ಮೇಲ್ವಿಚಾರಕರು ಸೇರಿದಂತೆ 5384 ಸಿಬ್ಬಂದಿಗಳು 5,58,460 ಮನೆಗಳನ್ನು ಗಣತಿ ಮಾಡಿದ್ದಾರೆ. ಗ್ರಾಮಾಂತರ ಪ್ರದೇಶ ವ್ಯಾಪ್ತಿಯಲ್ಲೂ ವಾಸವಿರುವ ಮನೆ, ಖಾಲಿಯಿರುವ ಮನೆ, ಬೀಗ ಹಾಕಿರುವ ಮನೆ, ನಿರ್ಮಾಣ ಹಂತದ ಮನೆ ಸೇರಿದಂತೆ ವಿವಿಧ ಮಾಹಿತಿಯನ್ನು ಗಣತಿ ಪ್ರಕ್ರಿಯೆಯಲ್ಲಿ ನಮೂದಿಸಿದ್ದಾರೆ.

ಶೇ.100ರಷ್ಟು ಸಾಧನೆ: ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ 7748 ಸಿಬ್ಬಂದಿ ಮನೆ ಮನೆಗೆ ತೆರಳಿ 9,33,820 ಮನೆಗಳನ್ನು ಗಣತಿ ಮಾಡಿ, ಮ್ಯಾಪಿಂಗ್ ಮಾಡಿದ್ದಾರೆ. ಜಿಲ್ಲೆಯಲ್ಲಿ ಗಣತಿ ಕಾರ್ಯ ಶೇ.100ರಷ್ಟು ನಡೆದಿದ್ದು, ನಿಗದಿ ಮಾಡಿದ್ದ ಕೊನೆ ದಿನಕ್ಕೆ ಎರಡು ದಿನ ಮುಂಚಿತವಾಗಿಯೇ ಗಣತಿ ಪ್ರಕ್ರಿಯೆ ನಡೆಸಿ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸಿದ್ದಾರೆ.

ಸ್ವಯಂ ಮತ್ತು ಮನೆ ಮನೆ ಗಣತಿ: ಈ ಬಾರಿ ಮನೆ ಗಣತಿ ಪ್ರಕ್ರಿಯೆಯಲ್ಲಿ ಏ.1ರಿಂದ 15ರವರೆಗೆ ಸ್ವಯಂ ಗಣತಿಗೆ ಕ್ರಮ ಕೈಗೊಳ್ಳಲಾಗಿತ್ತು. ಜನ ಆನ್‌ಲೈನ್ ಪೋರ್ಟಲ್‌ನಲ್ಲಿ ಅಂಕಿ ಅಂಶವನ್ನು ನಮೂದಿಸುವ ಮೂಲಕ ಸ್ವಯಂ ಗಣತಿಯಲ್ಲಿ ಪಾಲ್ಗೊಂಡಿದ್ದರು. ಕೆಲವರಿಗೆ ಸರ್ವರ್ ಸಮಸ್ಯೆ, ಲೊಕೇಷನ್ ಸಮಸ್ಯೆ ಉಂಟಾಗಿದ್ದರಿಂದ ನಿರೀಕ್ಷೆಯಷ್ಟು ಸ್ವಯಂ ಗಣತಿ ನಡೆದಿರಲಿಲ್ಲ. ಎರಡನೇ ಹಂತದಲ್ಲಿ ಏ.16ರಿಂದ ಮೇ.15ರವರೆಗೆ ಮನೆ ಮನೆ ಬಾಗಿಲಿಗೆ ತೆರಳಿ ಗಣತಿದಾರರು ಮಾಹಿತಿ ಕಲೆ ಹಾಕಿದ್ದರು.

ಒಂದೊಂದು ಮನೆಗೆ 3 ಬಾರಿ ಭೇಟಿ: ಮನೆ ಗಣತಿಗೆ ನಿಯೋಜಿಸಿದ್ದ ಸಿಬ್ಬಂದಿ ದಿನಕ್ಕೆ 30 ಮನೆ ಗಣತಿ ಪ್ರಕ್ರಿಯೆ ನಡೆಸಿದ್ದಾರೆ. ಬಿರು ಬಿಸಿಲಿನ ಆಘಾತದ ನಡುವೆಯೂ ಗಣತಿದಾರರು ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ನಿಗಧಿತ ಬ್ಲಾಕ್‌ನಲ್ಲಿ ತೆರಳಿ ಮನೆ ಗಣತಿ ನಡೆಸಿದ್ದರು. ಪ್ರತಿ ಮನೆಗೆ 3 ಬಾರಿ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದರು. ಮನೆ ಮ್ಯಾಪಿಂಗ್ ಮಾಡಲು ಒಂದು ಬಾರಿ, ಗಣತಿಯ ಸಂಖ್ಯೆ ನಮೂದಿಸಲು ಹಾಗೂ ಮಾಹಿತಿ ಪಡೆಯಲು ಮತ್ತೊಂದು ಬಾರಿ ಹಾಗೂ ಅಂತಿಮವಾಗಿ ಐಡಿ ಸಂಖ್ಯೆ ದಾಖಲಿಸಲು ಮೂರನೆ ಬಾರಿ ಹೋಗಿ ಗಣತಿ ನಡೆಸಿದ್ದರು.

ಮಾಹಿತಿ ನೀಡಲು ನಕಾರ: ಗಣತಿ ಪ್ರಕ್ರಿಯೆಯಲ್ಲಿ 33 ಪ್ರಶ್ನೆ ಕೇಳುತ್ತಿದ್ದ ಹಿನ್ನೆಲೆಯಲ್ಲಿ ಕೆಲವರು ಗಣತಿದಾರರಿಗೆ ಮಾಹಿತಿ ನೀಡಲು ನಿರಾಕರಿಸುತ್ತಿದ್ದರು. ಈ ವೇಳೆ ಗಣತಿದಾರರು ಮನವೊಲಿಸಲು ಪರದಾಡುವಂತಾಗಿತ್ತು. ಪಾಲಿಕೆ ಕಸ ಸಂಗ್ರಹ ವಾಹನದಲ್ಲಿ ಗಣತಿದಾರರಿಗೆ ಮಾಹಿತಿ ನೀಡುವಂತೆ ಸಂದೇಶ ಬಿತ್ತರಿಸುವ ಮೂಲಕ ಜಾಗೃತಿ ಮೂಡಿಸಲಾಗುತ್ತಿತ್ತು.

ಕೌಶಲ್ಯಯುತ ಚಿಕಿತ್ಸಾ ವಿಧಾನ ಅಳವಡಿಸಿಕೊಳ್ಳಿ

ವಿರಾಜಪೇಟೆ, ಮೇ 15–ವೈದ್ಯರು ಕೌಶಲ್ಯಯುತವಾದ ಚಿಕಿತ್ಸಾ ವಿಧಾನಗಳನ್ನು ಅಳವಡಿಸಿಕೊಂಡು ಸಮಾಜದ ಒಳಿತಿಗಾಗಿ ಉತ್ತಮ ಕೊಡುಗೆ ನೀಡುವಂತೆ ಅಕಾಡೆಮಿ ಆಫ್ ಇಂಪ್ಲಾಂಟ್ ಟೋಲಾಜಿ ಸ್ಥಾಪಕ ಅಧ್ಯಕ್ಷ ಡಾ. ಆಶೀಶ್ ಕಕ್ಕಾರ್ ತಿಳಿಸಿದ್ದಾರೆ.

ವಿರಾಜಪೇಟೆ ಬಳಿಯ ಕೊಡಗು ದಂತ ವೈದ್ಯಕೀಯ ಮಹಾವಿದ್ಯಾಲಯ ಆಯೋಜಿಸಿದ್ದ ಕಾಲೇಜಿನ ವಾರ್ಷಿಕೋತ್ಸವ ಹಾಗೂ ರಾಣಿ ಅಯ್ಯಪ್ಪ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ವೈದ್ಯರು ಸಮಾಜದ ಒಳಿತಿಗಾಗಿ ವಿಶೇಷವಾದ ಪ್ರಯೋಗಗಳನ್ನು ಮಾಡುವುದಲ್ಲದೆ, ರೋಗಿಗಳಿಗೆ ಅಗತ್ಯ ವೈದ್ಯಕೀಯ ಚಿಕಿತ್ಸೆ ಮಾಡು ವಾಗ ತಾತ್ಸಾರ ಮಾಡದೆ, ಅವರ ಜೀವವನ್ನು ಕಾಪಾಡಬೇಕು ಎಂದರು.

ಕೊಡಗು ದಂತ ವೈದ್ಯಕೀಯ ಕಾಲೇಜಿನ ಮಹಾವಿದ್ಯಾಲಯದ ಮುಖ್ಯಸ್ಥ ಡಾ. ಸುನೀಲ್ ಮುದ್ದಯ್ಯ ಅಧ್ಯಕ್ಷತೆ ವಹಿಸಿದ್ದು, ದಂತ ಕಾಲೇಜು ಅಂತರರಾಷ್ಟ್ರೀಯ ಮಟ್ಟದ ವಿದ್ಯಾನಿಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಂಡು, ವಿದ್ಯಾರ್ಥಿಗಳಿಗೆ ಸ್ಪಂದಿಸುವ ಮೂಲಕ ವಿದ್ಯಾರ್ಜನೆಗೆ ಮಾತ್ರ ಸೀಮಿತವಾಗದೆ, ಇತರ ಚಟುವಟಿಕೆಗಳು ಹಾಗೂ ಉನ್ನತ ವ್ಯಾಸಂಗಕ್ಕಾಗಿ ವಿದ್ಯಾರ್ಥಿವೇತನವನ್ನು ವಿಶೇಷವಾಗಿ ನೀಡಲಾಗುತ್ತದೆ ಎಂದು ಹೇಳಿದರು.



ನಡಿಕೇರಿಯಂಡ ಸುಬ್ಬಯ್ಯ ಅವರಿಗೆ ರಾಣಿ ಅಯ್ಯಪ್ಪ ಪ್ರಶಸ್ತಿ ಪ್ರದಾನ ಮಾಡಲಾಯಿತು.

ದಂತ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಕೆ.ಸಿ.ಪೊನ್ನಪ್ಪ ವಾರ್ಷಿಕ ವರದಿಯನ್ನು ಮಂಡಿಸಿದರು. ವಿವಿಧ ಕ್ರೀಡಾ ಕ್ಷೇತ್ರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾಧನೆ ಮಾಡಿದ ವಿಜೇತರಿಗೆ ರಾಣಿ ಅಯ್ಯಪ್ಪ ಪ್ರಶಸ್ತಿಯನ್ನು ಜೇನು ಕೃಷಿಯಲ್ಲಿ ಸಾಧನೆಗೈದ ನಡಿಕೇರಿಯಂಡ ಸುಬ್ಬಯ್ಯ ಅವರಿಗೆ ಪ್ರದಾನ ಮಾಡಲಾಯಿತು. ಇದೇ ಸಂದರ್ಭದಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ವಿತರಣೆ ಮಾಡಲಾಯಿತು. ವಿದ್ಯಾರ್ಥಿ ಸಂಘದ ಅಲ್ಬಾ ಮರೀಯಾ ಸ್ವಾಗತಿಸಿದರು. ಕಾರ್ಯದರ್ಶಿ ಕಲ್ಯಾಟಂಡ ಶಿಯಾನ ವಂದಿಸಿದರು. ಮಹಾವಿದ್ಯಾಲಯದ ಆಡಳಿತ ಮಂಡಳಿ ಸದಸ್ಯರು, ಉಪನ್ಯಾಸಕರುಗಳು, ವಿದ್ಯಾರ್ಥಿಗಳ ಪೋಷಕರು ಭಾಗವಹಿಸಿದ್ದರು.

ಶ್ರದ್ಧಾಭಕ್ತಿಯಿಂದ ನಡೆದ ಬ್ರಹ್ಮಕಲಶೋತ್ಸವ

ನಾಪೋಕ್ಲು, ಮೇ 15–(ದುಗ್ಗಳ) ಸಮೀಪದ ಕಕ್ಕಬೆಯ ಪಾಡಿ ಶ್ರೀ ಇಗ್ಗುತ್ತಪ್ಪ ದೇವಸ್ಥಾನದ ಅಷ್ಟ ಬಂಧ ಬ್ರಹ್ಮಕಲಶೋತ್ಸವದ ಮೂರನೇ ದಿನವಾದ ಶುಕ್ರವಾರ ವಿವಿಧ ಹೋಮ, ಹವನ ಪೂಜಾ ವಿಧಿ ವಿಧಾನಗಳು ಸಾಂಪ್ರದಾಯಿಕ ಹಾಗೂ ಶ್ರದ್ಧಾ ಭಕ್ತಿಯಿಂದ ಜರುಗಿದವು.

ನೀಲೇಶ್ವರ ಉಚ್ಚಿಲತಾಯ ಪದ್ಮನಾಭ ತಂತ್ರಿಗಳ ನೇತೃತ್ವದಲ್ಲಿ ಪುರೋಹಿತ ವರ್ಗ ಬೆಳಗ್ಗೆ ಗಣಪತಿ ಹೋಮ ಅಂಕುರ ಪೂಜೆ, ಶಾಂತಿ ಹೋಮಗಳು, ಹೋಮ ಕಲಶಾಭಿಷೇಕ, ಮಧ್ಯಾಹ್ನ ಪೂಜೆ ಹಾಗೂ ಭಕ್ತಾದಿಗಳಿಗೆ ತೀರ್ಥ ಪ್ರಸಾದ, ಅನ್ನ ಸಂತರ್ಪಣೆ ಜರುಗಿತು. ಆನಂತರ ರಾತ್ರಿ ಅಂಕುರ ಪೂಜೆ, ದುರ್ಗಾ ನಮಸ್ಕಾರ ಪೂಜೆಗಳು ನೆರವೇರಿತು.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಬಾಚಮಂಡ ರಾಜ ಪೂವಣ್ಣ, ಭಕ್ತಜನ ಸಂಘದ ಅಧ್ಯಕ್ಷ ಸುಮನ್ ಸುಬ್ರಮಣಿ ಹಾಲಿ ಹಾಗೂ ಮಾಜಿ ಪದಾಧಿಕಾರಿಗಳು ಹಾಗೂ ಸದಸ್ಯರು, ಭಕ್ತಾದಿಗಳು ಉಪಸ್ಥಿತರಿದ್ದರು.

ಆನೆ ಹಾವಳಿ ತಡೆ: ಫೆನ್ಸಿಂಗ್ ಕಾಮಗಾರಿಗೆ ಚಾಲನೆ

ಮಡಿಕೇರಿ, ಮೇ 15–ವಿರಾಜಪೇಟೆ ತಾಲೂಕು ಪಾಲಂಗಾಲ ಭಾಗದಲ್ಲಿ ಅರಣ್ಯ ಇಲಾಖೆ ವತಿಯಿಂದ ಆನೆ ಹಾವಳಿ ತಡೆಗಟ್ಟಲು 28 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಆಗುತ್ತಿರುವ ಹ್ಯಾಂಗಿಂಗ್ ಸೋಲಾರ್ ಫೆನ್ಸಿಂಗ್ ಕಾಮಗಾರಿಗೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು.

ಈಗಾಗಲೇ ನಡೆಯುತ್ತಿರುವ ಕಾಮಗಾರಿಯ ವೀಕ್ಷಣೆ ನಡೆಸಿದ ಅವರು, ಅರಣ್ಯ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು. ಅರಣ್ಯ ಇಲಾಖೆ ವತಿಯಿಂದ ಅರಣ್ಯ ದಂಚಿನಲ್ಲಿ ವಾಸಿಸುತ್ತಿರುವ ಮಹಿಳೆಯರ ಸ್ವಾವಲಂಬಿ ಬದುಕಿಗಾಗಿ ಹೊಲಿಗೆ ಯಂತ್ರ ಹಾಗೂ ಇತರೆ ಸವಲತ್ತುಗಳನ್ನು ವಿತರಿಸಿದರು.

ಮಾನವ–ಪ್ರಾಣಿ ಸಂಘರ್ಷ ತಡೆಗಟ್ಟುವ ಸಲುವಾಗಿ ಸೋಲಾರ್ ಫೆನ್ಸಿಂಗ್, ಸೋಲಾರ್ ಹ್ಯಾಂಗಿಂಗ್ ಫೆನ್ಸಿಂಗ್, ರೈಲ್ವೆ ಬ್ಯಾರಿಕೇಡ್ ಅಳವಡಿಕೆ, ಆನೆ ಕಂದಕ ನಿರ್ಮಾಣ, ಅರಣ್ಯ ಇಲಾಖೆಗೆ ನೂತನ ಹಾಗೂ ಆಧುನಿಕ ಗಸ್ತು ವಾಹನಗಳು, ಹೆಚ್ಚಿನ ಅನುಭವಿ ಹಾಗೂ ತರಬೇತಿ ಪಡೆದಿರುವ ಸಿಬ್ಬಂದಿಗಳು ಮಾತ್ರವಲ್ಲದೆ ಇನ್ನೂ ಹಲವು ಸೌಲಭ್ಯಗಳನ್ನು ಕಲ್ಪಿಸಿದೆ ಎಂದರು.


ಹ್ಯಾಂಗಿಂಗ್ ಸೋಲಾರ್ ಫೆನ್ಸಿಂಗ್ ಕಾಮಗಾರಿಗೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು.


ಅರಣ್ಯ ಇಲಾಖೆಯೊಂದಿಗೆ ಸಾರ್ವಜನಿಕರು ಸಹಕಾರ ನೀಡಿ ಅರಣ್ಯದಂಚಿನಲ್ಲಿರುವ ನಿವಾಸಿಗಳು ಎಚ್ಚರಿಕೆಯಿಂದ ಕೃಷಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕೆಂದು ಸಲಹೆ ನೀಡಿದರು. ಅರಣ್ಯ ಅಧಿಕಾರಿಗಳು ಸಹ ಜನಸ್ನೇಹಿಯಾಗಿ ವರ್ತಿಸಿ, ಜನರೊಂದಿಗೆ ಉತ್ತಮ ಒಡನಾಟ ಇಟ್ಟುಕೊಂಡಲ್ಲಿ ಇಂತಹ ಸಂಘರ್ಷಗಳನ್ನು ತಡೆಯಲು ಮತ್ತಷ್ಟು ಸುಲಭವಾಗಲಿದೆ ಎಂದು ಕಿವಿಮಾತು ಹೇಳಿದರು.

ವಲಯ ಅಧ್ಯಕ್ಷ ನಡಿಕೇರಿಯಂಡ ಮಹೇಶ್, ಕೆಡಿಪಿ ಸದಸ್ಯ ಪ್ರಶಾಂತ್, ರಫೀಕ್, ಬೂತ್ ಅಧ್ಯಕ್ಷ ವಿಜಯ್ ಕುಮಾರ್, ಮಾಜಿ ಅಧ್ಯಕ್ಷ ಜೆಫ್ರಿ ಉತ್ತಪ್ಪ, ಇಸ್ಮಾಯಿಲ್, ಆಲಿ, ಮಾಳೇಟಿರ ಶುಭ ಸುಬ್ಬಯ್ಯ, ಪಕ್ಷದ ಮುಖಂಡ ಬಾಚಮಾಂಡ ಲವ ಚಿಣ್ಣಪ್ಪ, ಕಲಿಯಂಡ ಸಂಪನ್ ಅಯ್ಯಪ್ಪ, ಸೂರಜ್ ಹೊಸೂರು, ಕುಂಡ್ಯೋಳಂಡ ಮಂಜು ದೇವಯ್ಯ, ಜಿತನ್, ಧ್ಯಾನಿ, ಪಾಲಂಗಾಲ ಬೂತ್ ಅಧ್ಯಕ್ಷ ಜಾಲು ಚೆಂಗಪ್ಪ, ಮಿಟ್ಟು ಅಯ್ಯಪ್ಪ, ಹರಿದಾಸ್, ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಬೆಂಗಾವಲು ಪಡೆ ಹಿಂಪಡೆಯಲು ಎಸ್‌ಪಿಗೆ ಶಾಸಕ ಪೊನ್ನಣ್ಣ ಪತ್ರ

ಮಡಿಕೇರಿ, ಮೇ 15–ಮಧ್ಯಪ್ರಾಚ್ಯ ಯುದ್ಧದ ಹಿನ್ನಲೆಯಲ್ಲಿ ಇಂಧನ ಮಿತವ್ಯಯಕ್ಕೆ ಪ್ರಧಾನಿ ನೀಡಿರುವ ಕರೆಗೆ ಮುಖ್ಯಮಂತ್ರಿಗಳ ಕಾನೂನು ಸಲಹೆಗಾರರಾಗಿರುವ ಶಾಸಕ ಎ.ಎಸ್ ಪೊನ್ನಣ್ಣ ಸ್ಪಂದಿಸಿದ್ದಾರೆ.

ಜಿಲ್ಲಾ ಪೊಲೀಸ್ ಇಲಾಖೆ ನೀಡಿರುವ ತಮಗೆ ನೀಡಿರುವ ಭದ್ರತಾ ಬೆಂಗಾವಲು ಪಡೆಯನ್ನು ಹಿಂಪಡೆ ಯುವಂತೆ ಜಿಲ್ಲಾ ಎಸ್ಪಿಗೆ ಪತ್ರ ಬರೆಯುವ ಮೂಲಕ ತಮ್ಮ ಸಹೃದಯತೆಯನ್ನು ಮೆರೆದಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ತೈಲ ಬಿಕ್ಕಟ್ಟು ಸೃಷ್ಟಿಯಾಗುವ ಆತಂಕ, ಪರಿಸರ ಮಾಲಿನ್ಯ ತಡೆಗಟ್ಟುವ ಹಾಗೂ ದೇಶದಲ್ಲಿ ನಿರ್ಮಾಣವಾಗಿರುವ ಆತಂಕದ ಪರಿಸ್ಥಿತಿಯನ್ನು ನಿರ್ವಹಣೆ ಮಾಡಲು ಬೆಂಗಾವಲು ವಾಹನವನ್ನು ಕಡಿತಗೊಳಿಸುವಂತೆ ಪತ್ರದಲ್ಲಿ ಉಲ್ಲೇಖಿಸಿ, ಶಾಸಕ ಪೊನ್ನಣ್ಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಆರ್ ಬಿಂದುಮಣಿ ಅವರನ್ನು ಕೋರಿದ್ದಾರೆ.


A. S. PONNANNA
Legal Advisor to Chief Minister
MLA, Virajpet Assembly Constituency

ಮೈಸೂರಿನಲ್ಲಿ ಸಿಎಂ 30 ವಾಹನಗಳನ್ನು ಬಳಸಿಕೊಂಡಿರುವಾಗಲೇ ಅವರ ಕಾನೂನು ಸಲಹೆಗಾರರು ಬೆಂಗಾವಲು ಪಡೆಯನ್ನು ಬಳಸಿಕೊಳ್ಳದಿರಲು ತೀರ್ಮಾನಿಸಿರುವುದಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇಂದಿನಿಂದ ಕುಲಾಲ ಕುಂಬಾರ ಸಮಾಜದ ಕ್ರೀಡೋತ್ಸವ

ಮಡಿಕೇರಿ, ಮೇ 15–ಜಿಲ್ಲಾ ಕುಲಾಲ ಕುಂಬಾರ ಸಮಾಜದ ಯುವ ಘಟಕದ ವತಿಯಿಂದ ಮೇ 16, 17ರಂದು ನಗರದ ಜಿಲ್ಲಾ ಕ್ರೀಡಾಂಗಣದ ಮೈದಾನದಲ್ಲಿ ಸಮುದಾಯದ ಕ್ರೀಡೋತ್ಸವ ನಡೆಯಲಿದೆ.

ಸಮಾಜದ ಯುವ ಘಟಕ ಹಾಗೂ ಜಿಲ್ಲಾ ಮಹಿಳಾ ಘಟಕದ ಸಂಯುಕ್ತಾಶ್ರಯದಲ್ಲಿ 2 ದಿನಗಳ ಕಾಲ ಕ್ರೀಡೋತ್ಸವ ನಡೆಯಲಿದ್ದು, ಇದರಲ್ಲಿ ಸಣ್ಣ ಮಕ್ಕಳಿಂದ ಹಿಡಿದು ಹಿರಿಯರವರೆಗೆ ವಿವಿಧ ವಯೋಮಾನದ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಯುವ ಘಟಕದ ಜಿಲ್ಲಾ ಕಾರ್ಯದರ್ಶಿ ಕೆ.ಎ.ರೋಷನ್ ಹೊದ್ದೂರು ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಕ್ರೀಡೋತ್ಸವದಲ್ಲಿ ಪ್ರಮುಖವಾಗಿ ಪುರುಷರಿಗಾಗಿ ಕ್ರಿಕೆಟ್ ಪಂದ್ಯಾವಳಿ ನಡೆಯಲಿದ್ದು, ಇದರಲ್ಲಿ ಜಿಲ್ಲಾ ವ್ಯಾಪ್ತಿಯ 14 ತಂಡಗಳು ಪಾಲ್ಗೊಳ್ಳಲಿವೆ. ಪುರುಷರು ಮತ್ತು ಮಹಿಳೆಯರಿಗಾಗಿ ಹಗ್ಗಜಗ್ಗಾಟ ಸೇರಿದಂತೆ ವಿವಿಧ ಸ್ಪರ್ಧೆಗಳು, ಸಮಾಜದ ಜಿಲ್ಲಾ ಕ್ರೀಡಾಧ್ಯಕ್ಷ ಶಾಂತಕುಮಾರ್ ಕುಲಾಲ್ ಮತ್ತು ಯುವ ಘಟಕದ ಕ್ರೀಡಾಧ್ಯಕ್ಷ ನಿತೀಶ್ ಕುಲಾಲ್ ನೀರುಕೊಲ್ಲಿರ ನೇತೃತ್ವದಲ್ಲಿ ನಡೆಯಲಿದೆ ಎಂದು ತಿಳಿಸಿದರು. ಕ್ರೀಡೋತ್ಸವ ಸಂದರ್ಭದಲ್ಲಿ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಸಾಧನೆ ಮಾಡಿದ ಕವಿತಾ ಅವರನ್ನು ಗೌರವಿಸಲಾಗುತ್ತದೆ ಎಂದು ಹೇಳಿದರು.

ಯುವ ಘಟಕದ ಅಧ್ಯಕ್ಷ ಜಯ ಪ್ರಕಾಶ್ ಕುಲಾಲ್, ಕ್ರೀಡಾಧ್ಯಕ್ಷ ಕೆ.ಎ.ನಿತೀಶ್ ನಿರುಕೊಲ್ಲಿ, ಸಂಘಟನಾ ಕಾರ್ಯದರ್ಶಿ ತೇಜು ಕುಲಾಲ್, ಕೆ.ಜಿ.ಕುಶಾಧರ ಇದ್ದರು.

ಸಬ್ ಇನ್ಸ್‌ಪೆಕ್ಟರ್‌ಗೆ ಪತಿ ವಿಯೋಗ



ಕುಶಾಲನಗರ, ಮೇ 15– ಪಟ್ಟಣದ ಕರಿಯಪ್ಪ ಬಡಾವಣೆ ನಿವಾಸಿ ಮೂಲತಃ ಹೆಬ್ಬಾಲೆ ಗ್ರಾಮದ ಆರೋಗ್ಯ ಇಲಾಖೆಯ ನಿವೃತ್ತ ನೌಕರ ಎ.ಸಿ.ಚಂದ್ರಯ್ಯ (61) ಅನಾರೋಗ್ಯದಿಂದ ಗುರುವಾರ ರಾತ್ರಿ ನಿಧನರಾದರು.

ಮೃತರು ಪತ್ನಿ ಟೌನ್ ಪೊಲೀಸ್ ಠಾಣೆ ಅಪರಾಧ ವಿಭಾಗದ ಸಬ್‌ಇನ್ಸ್‌ಪೆಕ್ಟರ್ ಎಚ್.ಟಿ. ಗೀತಾ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯ ಸಂಸ್ಕಾರ ಶುಕ್ರವಾರ ಮಧ್ಯಾಹ್ನ ಮಾರುಕಟ್ಟೆ ರಸ್ತೆಯಲ್ಲಿರುವ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು.

ಮೀಸಲಾತಿಯನ್ನು 9ನೇ ಶೆಡ್ಯೂಲ್‌ಗೆ ಸೇರಿಸಿ

ಸರ್ವಪಕ್ಷಗಳು ಒತ್ತಡವೇರಬೇಕು ಎಂದ ಉಗ್ರಪ್ಪ

ಮಂಡ್ಯ,ಮೇ 15– ರಾಜ್ಯದ ಎಸ್ಸಿ, ಎಸ್ಟಿ ಮತ್ತು ಓಬಿಸಿ ಮೀಸಲಾತಿಯನ್ನು ಶೇ.56ಕ್ಕೆ ಉರ್ಜಿತ ಮಾಡಲು ಕೇಂದ್ರ ಸರ್ಕಾರ 9ನೇ ಶೆಡ್ಯೂಲ್‌ಗೆ ಸೇರಿಸುವಂತೆ ರಾಜ್ಯದ ಎಲ್ಲಾ ಪಕ್ಷಗಳ ನಾಯಕರು ಒತ್ತಡ ಹೇರುವಂತೆ ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೆರೆಯ ತಮಿಳುನಾಡು ರಾಜ್ಯದಲ್ಲಿ ಇದೇ ರೀತಿ ಕೇಂದ್ರದ ಮೇಲೆ ಒತ್ತಡ ಹಾಕಿ ಎಸ್ಸಿ, ಎಸ್ಟಿ ಮೀಸಲಾತಿಯನ್ನು ಹೆಚ್ಚಳ ಮಾಡಿಕೊಳ್ಳಲಾಗಿದೆ. ರಾಜ್ಯ ಸರಕಾರ ಈ ಕೂಡಲೇ ಸರ್ವ ಪಕ್ಷಗಳ ನಿಯೋಗವನ್ನು ಕರೆದೊಯ್ದು, ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿ ಶೇ.56ರ ಮೀಸಲಾತಿ ಕಾಯ್ದೆಯನ್ನು ಸಂವಿಧಾನದ 9ನೇ ಶೆಡ್ಯೂಲ್‌ಗೆ ಸೇರಿಸುವಂತೆ ಮತ್ತು ಸಂವಿಧಾನದ ಅನುಚ್ಛೇದ 15 ಮತ್ತು 16ಕ್ಕೆ ತಿದ್ದುಪಡಿ ತಂದು ಜನಸಂಖ್ಯೆಗೆ ಅನುಗುಣವಾಗಿ ಸಂವಿಧಾನ ದತ್ತವಾದ ಮೀಸಲಾತಿ ನೀಡಲು ಒತ್ತಾಯಿಸುವಂತೆ ಆಗ್ರಹಿಸಿದರು.


ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಸಂಸದ ವಿ.ಎಸ್.ಉಗ್ರಪ್ಪ.

ಮೀಸಲಾತಿಯಲ್ಲಿ ಎಸ್ಸಿಗೆ ಶೇ.17ರಷ್ಟು, ಎಸ್ಟಿಗೆ ಶೇ.7ರಷ್ಟು ಓಬಿಸಿಗೆ ಶೇ.32ರಷ್ಟು ಮೀಸಲಾತಿ ನೀಡುವ ನಿರ್ಧಾರವನ್ನು ಬಸವರಾಜ ಬೊಮ್ಮಾಯಿ ಸರಕಾರ 2023ರ ಮಾರ್ಚ್ 22ರಂದು ಸರ್ವ ಪಕ್ಷಗಳ ಅನುಮೋದನೆ ಪಡೆದಿತ್ತು. ಇದನ್ನು ಜಾರಿ ಮಾಡಲು ಮುಂದಾದಾಗ ಹೈಕೋರ್ಟ್ ತಡೆ ನೀಡಿದೆ. ರಾಜ್ಯ ಸರಕಾರ ಸರಿಯಾದ ವಾದ ಮಂಡಿಸಿ ತಡೆಯಾಜ್ಞೆಯನ್ನು ತೆರವುಗೊಳಿಸಬೇಕೆಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೀಸಲಾತಿ ಕಾಯ್ದೆಯನ್ನು 9ನೇ ಶೆಡ್ಯೂಲ್‌ಗೆ ಸೇರಿಸುವಂತೆ 2026ರ ಏಪ್ರಿಲ್ 16ರಂದು ಪ್ರಧಾನ ಮಂತ್ರಿಗೆ ಪತ್ರ ಬರೆದಿದ್ದಾರೆ. ರಾಜ್ಯದ ಎಲ್ಲ ಪಕ್ಷಗಳು ನಮ್ಮ ಬದುಕಿನ ಜತೆ ಚಲ್ಲಾಟವಾಡದೆ ಅವರ ಅನುಮೋದನೆ ತಂದು ಮೀಸಲಾತಿ ಜಾರಿ ಮಾಡಬೇಕು ಎಂದು ಹೇಳಿದರು.

ಮುಖ್ಯಮಂತ್ರಿಗಳು ಓಬಿಸಿಯ ಕೆಲವು ಜಾತಿಗಳನ್ನು ಎಸ್ಸಿಗೆ ಸೇರಿಸುವ ಪ್ರಸ್ತಾಪ ಮಾಡಿದ್ದಾರೆ. ಹಾಗೆ ಮಾಡುವುದಾದರೆ ಆ ಜಾತಿಗಳ ಕುಲಶಾಸ್ತ್ರ ಅಧ್ಯಯನ ಮಾಡಬೇಕು. ಸದರಿ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ವರ್ಗಾವಣೆ ಮಾಡಬೇಕೆಂದು ಒತ್ತಾಯಿಸಿದರು.

ಗೋಷ್ಠಿಯಲ್ಲಿ ಮೈಶುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್, ವಾಲ್ಮೀಕಿ ನಾಯಕ ಮಹಾಸಭಾ ಯುವ ಘಟಕದ ರಾಜ್ಯಾಧ್ಯಕ್ಷ ಟಿ.ಆರ್.ತುಳಸೀರಾಮ್, ದೇವರಾಜು, ಮಂಜುನಾಥ್ ಇದ್ದರು.

ಮೆದುಳು, ಹೃದಯ ಸಂಬಂಧಿತ ತುರ್ತು ಪರಿಸ್ಥಿತಿಗೆ ಒಂದು ಗಂಟೆಯೊಳಗೆ ಚಿಕಿತ್ಸೆ ಅವಶ್ಯಕ

ಮೈಸೂರಿನ ಮಣಿಪಾಲ್ ಆಸ್ಪತ್ರೆಯ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ಸಲಹೆ

ಮಂಡ್ಯ, ಮೇ 15– ಮೆದುಳು ಹಾಗೂ ಹೃದಯ ಸಂಬಂಧಿತ ತುರ್ತು ಪರಿಸ್ಥಿತಿಯ ಮೊದಲ ಒಂದು ಗಂಟೆಯೊಳಗೆ (ಗೋಲ್ಡನ್ ಅವರ್) ಚಿಕಿತ್ಸೆ ಒದಗಿಸುವುದು ಅನಿವಾರ್ಯವಾಗಿರುತ್ತದೆ ಎಂದು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ನಿರ್ದೇಶಕ ಬಿ.ಜೆ.ಸಂದೀಪ್ ಪಟೇಲ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಮಣಿಪಾಲ್ ಆಸ್ಪತ್ರೆ ಯನ್ನು ಅರಸಿ ಮಂಡ್ಯದಿಂದ ಹೆಚ್ಚು ರೋಗಿ ಗಳು ಭೇಟಿ ನೀಡುತ್ತಾರೆ. ಆದ ಕಾರಣ ಮೆದುಳಿನ ತುರ್ತು ಪರಿಸ್ಥಿತಿ ಹಾಗೂ ಹಠಾತ್ ಹೃದಯ ಸಂಬಂಧಿತ ಸಮಸ್ಯೆಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅನಿವಾರ್ಯವಾಗಿದೆ ಎಂದರು.

ಬದಲಾದ ಜೀವನ ಶೈಲಿ, ಬಿಪಿ, ಮಧುಮೇಹದಂತಹ ಸಮಸ್ಯೆಗಳಿಂದಾಗಿ ಹೃದಯಾಘಾತಕ್ಕೆ ಹೆಚ್ಚು ಮಂದಿ ಒಳಗಾಗುತ್ತಿದ್ದಾರೆ. ಮಂಡ್ಯ ಮತ್ತು ಮೈಸೂರಿನಲ್ಲಿ ಪ್ರತಿ 5 ಮಂದಿಯಲ್ಲಿ ಒಬ್ಬರು ಮಧುಮೇಹಕ್ಕೆ ಒಳಗಾಗಿರುತ್ತಾರೆ. ಹೃದಯ ಸಂಬಂಧ ಯಾವುದೇ ಲಕ್ಷಣಗಳನ್ನು ನಿರ್ಲಕ್ಷಿಸದೇ ಹತ್ತಿರದ ಆಸ್ಪತ್ರೆಯಲ್ಲಿ ತಪಾಸಣೆಗೆ ಒಳಪಡಿಸಬೇಕು. ಮಣಿಪಾಲ್ ಆಸ್ಪತ್ರೆಯಲ್ಲಿ ನುರಿತ ಚಿಕಿತ್ಸೆ ಒದಗಿಸಲಾಗುತ್ತಿದ್ದು, ಸಮಸ್ಯೆ ಪತ್ತೆಯಾದ ಕೂಡಲೇ ದಾಖಲಾದಲ್ಲಿ ರೋಗಿಗಳನ್ನು ಉಳಿಸಿಕೊಳ್ಳಬಹುದು ಎಂದು ಹೇಳಿದರು.


ನಡಿಕೇರಿಯಂಡ ಸುಬ್ಬಯ್ಯ ಅವರಿಗೆ ರಾಣಿ ಅಯ್ಯಪ್ಪ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನ್ಯೂರೋ ಸರ್ಜನ್ ಡಾ.ಎ.ಆರ್. ಮಕ್ಸೂದ್ ಅಹ್ಮದ್ ಮಾತನಾಡಿ, ಮೆದುಳು ಮತ್ತು ಹೃದಯ ಸಂಬಂಧಿತ ಅಟ್ಯಾಕ್‌ಗಳು ಒಂದೇ ಮಾದರಿಯವಾಗಿವೆ. ಎರಡಕ್ಕೂ ರಕ್ತನಾಳಗಳಲ್ಲಿ ರಕ್ತ ಸಂಚಲನಕ್ಕೆ ಅಡ್ಡಿ ಉಂಟಾದಾಗ ಸಮಸ್ಯೆ ಎದುರಾಗುತ್ತದೆ. ಹೃದಯಕ್ಕೆ ಈ ರೀತಿ ಆದಾಗ ಹೃದಯ ಸ್ತಂಭನವಾಗುತ್ತದೆ. ಆದರೆ ಮೆದುಳಿನಲ್ಲಿ ಆಯಾ ಭಾಗಕ್ಕೆ ರಕ್ತ ಸಂಚಲನ ನಿಂತಾಗ ದೇಹದ ಸಂಬಂಧಿತ ಅಂಗಗಳು ಕೆಲಸ ಮಾಡುವುದನ್ನು ನಿಲ್ಲಿಸುತ್ತವೆ ಎಂದು ಮಾಹಿತಿ ನೀಡಿದರು.

ತಲೆಗೆ ಪೆಟ್ಟಾದಾಗ ಅಗತ್ಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳುವುದು ಅಗತ್ಯ. ಮೊದಲ ಎರಡು ಗಂಟೆಯಲ್ಲಿ ರೋಗಿಗೆ ಏನಾಗಿದೆ ಎಂಬುದನ್ನು ಪತ್ತೆಹಚ್ಚಲು ಕೂಡಲೇ ಆಸ್ಪತ್ರೆಗೆ ದಾಖಲಿಸಬೇಕು. ಇಲ್ಲವಾದಲ್ಲಿ ಎರಡನೇ ಹಂತದ ಬ್ರೈನ್ ಡ್ಯಾಮೇಜ್ ಆಗುವ ಸಾಧ್ಯತೆಗಳಿರುತ್ತವೆ. ಮೆದುಳಿಗೆ ಸಂಬಂಧಿಸದಂತೆ ಬಿ ಫಾಸ್ಟ್ (BE FAST) ವಿಧಾನದ ಮೂಲಕ ತರ್ತು ಚಿಕಿತ್ಸೆಯ ಅವಶ್ಯಕತೆ ತಿಳಿಯಬಹುದು. ಸ್ಥಿರತೆ, ಕಣ್ಣೋಟ, ಮುಖದಲ್ಲಿ ಸೆಳೆತ, ಅಂಗಗಳ ಅಲುಗಾಡಿಸುವಿಕೆ, ತೊದಲುವಿಕೆ, ಪರೀಕ್ಷೆ ಮೂಲಕ ಬ್ರೈನ್ ಸ್ಟ್ರೋಕ್‌ಗೆ ಚಿಕಿತ್ಸೆ ನೀಡಿ ಜೀವ ಉಳಿಸಬಹುದು ಎಂದು ಹೇಳಿದರು.

ಮಣಿಪಾಲ್ ಆಸ್ಪತ್ರೆಯಲ್ಲಿ ಬಿಪಿಎಲ್ ಕಾರ್ಡುದಾರರಿಗೆ ಅಥವಾ ಬಡತನ ರೇಖೆಗಿಂತ ಕೆಳಗಿರುವವರಿಗೆ ಮಣಿಪಾಲ್ ಫೌಂಡೇಷನ್‌ನಿಂದ ಸಂಸ್ಥೆ ಸಿಆರ್‌ಎಸ್ ನಿಧಿಯಿಂದ 1.5 ಲಕ್ಷ ರೂ.ವರೆಗೆ ಚಿಕಿತ್ಸಾ ವೆಚ್ಚಕ್ಕೆ ನೆರವು ಮಾಡಲಾಗುವುದು. ಪ್ರತಿ ತಿಂಗಳು ಈ ರೀತಿ 45ರಿಂದ 50 ಲಕ್ಷ ರೂ.ಗಳ ವರೆಗೆ ಚಿಕಿತ್ಸೆ ವೆಚ್ಚ ಭರಿಸಲಾಗುತ್ತಿದೆ ಎಂದು ಪ್ರಶ್ನೆಗೆ ಉತ್ತರಿಸಿದರು.

ಗೋಷ್ಠಿಯಲ್ಲಿ ವೈದ್ಯರಾದ ಡಾ.ಸಿ.ಬಿ.ಕೇಶವ ಮೂರ್ತಿ, ಡಾ.ಕುಪೇಂದ್ರ ಶಣೈ ಇದ್ದರು.

ಇಂದು ಮೂಡಲಪಾಯ ಯಕ್ಷಗಾನ ಪ್ರಸಂಗ ನಾಟಕ

ಮಂಡ್ಯ: ಕರ್ನಾಟಕ ಮೂಡಲಪಾಯ ಯಕ್ಷಗಾನ ಪರಿಷತ್ತು, ಆದಿಚುಂಚನಗಿರಿ ಮೂಡಲಪಾಯ ಯಕ್ಷಗಾನ ಕೇಂದ್ರ ಹಾಗೂ ಕರ್ನಾಟಕ ಸಂಘದಿಂದ ಯಕ್ಷಗಾನ ಪ್ರಸಂಗ, ನಾಟಕ ಪ್ರದರ್ಶನ ಹಾಗೂ ವಿದ್ಯಾರ್ಥಿ ವೇತನ ಪ್ರದಾನ ಕಾರ್ಯಕ್ರಮವು ಮೇ 16ರಂದು ಸಂಜೆ 4 ಗಂಟೆಗೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಉದ್ಘಾಟನೆಯಾಗಲಿದೆ ಎಂದು ಕರ್ನಾಟಕ ಸಂಘದ ಕಾರ್ಯದರ್ಶಿ ಚಂದಗಾಲು ಪಿ.ಲೋಕೇಶ್ ತಿಳಿಸಿದರು.

ಸಂಜೆ 'ದೇವಿಮಹಾತ್ಮೆ' ಮತ್ತು 'ಅತ್ತಲಾ ಕಿಷ್ಕಿಂದೆಯೊಳ್' ಶ್ರೀರಾಮಾಯಣದರ್ಶನಂ ಪ್ರದರ್ಶನ ಮಾಡಲಾಗುವುದು.

ವೃದ್ಧಾಶ್ರಮದಲ್ಲಿ ಡಿಸಿಎಂ ಡಿಕೆಶಿ ಹುಟ್ಟುಹಬ್ಬ ಆಚರಣೆ

ಮಂಡ್ಯ, ಮೇ 15– ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ರಾಜ್ಯದ ಜನರ ಸೇವೆ ಮಾಡುವ ಇನ್ನು ಹೆಚ್ಚಿನ ಉನ್ನತ ರಾಜಕೀಯ ಅಧಿಕಾರ ಸಿಗಲಿ ಎಂದು ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಆಶಿಸಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ 64 ನೇ ವರ್ಷದ ಹುಟ್ಟು ಹಬ್ಬದ ಅಂಗವಾಗಿ ನಗರದ ಸೇವಾ ಕಿರಣ ವೃದ್ಧಾಶ್ರಮದಲ್ಲಿರುವ ವೃದ್ಧರಿಗೆ ಉಪಹಾರ ಹಾಗೂ ಹಣ್ಣುಹಂಪಲು ವಿತರಿಸಿ ಅವರು ಮಾತನಾಡಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಮುಖ್ಯವಾಗಿ ದೈವಭಕ್ತರು ಆ ಭಗವಂತನ ಹಾಗೂ ಹಿರಿಯರ ಆಶೀರ್ವಾದ ಸದಾ ಅವರ ಮೇಲೆ ಇರಲಿ, ಅವರಿಗೆ ಆಯಸ್ಸು ಆರೋಗ್ಯ ಭಗವಂತ ಕರುಣಿಸಲಿ ಎಂದು ಶುಭ ಕೋರಿದರು. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಜಲ ಸಂಪನ್ಮೂಲ ಸಚಿವರಾಗಿ ಮಂಡ್ಯ ಜಿಲ್ಲೆಯ ನಾಲೆಗಳ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಕೊಟ್ಟು ಜಿಲ್ಲೆಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದರು.



ಈ ಸಂದರ್ಭದಲ್ಲಿ ಮುಡಾ ನಿರ್ದೇಶಕ ಕಾರ್ತಿಕ್, ಯುವ ಕಾಂಗ್ರೆಸ್ ಮುಖಂಡ ಸಚಿನ್, ಜಿಲ್ಲಾ ಕಾಂಗ್ರೆಸ್ ಕಾರ್ಮಿಕ ವಿಭಾಗದ ಅಧ್ಯಕ್ಷ ಕಾಗೆಹಳ್ಳದ ದೊಡ್ಡಿ ರಾಮಕೃಷ್ಣ, ನವೀನ್,ಉಮ್ಮಡಹಳ್ಳಿ ನಾಗೇಶ್, ಶಿವಲಿಂಗಯ್ಯ, ಶ್ರೀನಿವಾಸ್ ಮೂರ್ತಿ, ಕೃಷ್ಣ, ಸತೀಶ್, ಯೋಗ, ಇತರರು ಹಾಜರಿದ್ದರು.

ವಿನೋದ್‌ಗೆ ಪಿಹೆಚ್.ಡಿ



ಮೈಸೂರು: ವಿನೋದ್ ಪಟೇಲ್ ಅವರು ಡಾ. ಜ್ಯೋತಿ ಹೆಚ್.ಪಿ ಅವರ ಮಾರ್ಗದರ್ಶನದಲ್ಲಿ ಸಮಾಜಕಾರ್ಯ ವಿಷಯದಲ್ಲಿ ಸಂಶೋಧನೆ ನಡೆಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾಲಯ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.


ಕೊಳ್ಳೇಗಾಲ ಹೊರವಲಯದಲ್ಲಿ ಭಾರೀ ಜೂಜು ಅಡ್ಡೆ ಮೇಲೆ ಪೊಲೀಸರ ದಾಳಿ

7ಮಂದಿ ಬಂಧನ, ನಾಲ್ವರು ಪರಾರಿ

ಕೊಳ್ಳೇಗಾಲ, ಮೇ 15– ಕೊಳ್ಳೇಗಾಲ ಹೊರವಲಯದಲ್ಲಿ ಅಕ್ರಮವಾಗಿ ತಲೆ ಎತ್ತಿದ್ದ ಹೈಟೆಕ್ ಜೂಜಿನ ಅಡ್ಡೆ ಮೇಲೆ ದಾಳಿ ನಡೆಸಿರುವ ಪೊಲೀಸರು 5ಲಕ್ಷ ಹಣ ಜಪ್ತಿ ಮಾಡಿದ್ದು ಈ ವೇಳೆ 4 ಮಂದಿ ಪರಾರಿಯಾಗಿದ್ದು, ಏಳು ಮಂದಿಯನ್ನು ವಶಕ್ಕೆ ಪಡೆಯುವಲ್ಲಿ ಯಶಸ್ವಿಯಾಗಿದ್ದಾರೆ.

ಕೊಳ್ಳೇಗಾಲದಲ್ಲಿ ಹೈಟೆಕ್ ಜೂಜಾಟ ನಡೆಯುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಉನ್ನತ ಮೂಲಗಳ ಮೂಲಕ ಮಾಹಿತಿ ದೊರೆಯುತ್ತಿದ್ದಂತೆ ಖುದ್ದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳೇ ಸಂತೇಮರಳ್ಳಿ ವೃತ್ತ ನಿರೀಕ್ಷಕ ಸಾಗರ್ ಮತ್ತು ಸಿಬ್ಬಂದಿಗಳನ್ನು ಕಳುಹಿಸಿ ದಾಳಿ ನಡೆಸಿದ ಬಳಿಕ ಪಟ್ಟಣ ಪೊಲೀಸ್ ಠಾಣೆಯ ಪಿಎಸ್ಐ ವರ್ಷ ಮತ್ತು ಸಿಬ್ಬಂದಿಗಳ ಗಮನಕ್ಕೆ ತಂದ ಹಿನ್ನೆಲೆ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎನ್ನಲಾಗಿದೆ.

ಪಟ್ಟಣದ ಜಿ.ಪಿ.ಮಲ್ಲಪ್ಪಪುರಂ ಬಡಾವಣೆಯ ವಾಸಿ ಕಿರಣ್, ಭೀಮನಗರ ಹೊಸ ಬೀದಿ ನಿಶಾಂತ್ ಪ್ರಭು, ಸಿದ್ದಯ್ಯನಪುರ ರಾಜೇಂದ್ರ ಪ್ರಸಾದ್, ಮೈಸೂರಿನ ಹಿನ್‌ಕಲ್ ಹೆಚ್.ಎನ್.ಮಂಜು, ನರಸೀಪುರ ಉಮೇಶ್, ಕುಣಗಳ್ಳಿ ಗ್ರಾಮದ ಮಹದೇವ ಬಂಧಿತರು. ಕೊಳ್ಳೇಗಾಲ ಪಟ್ಟಣದ ಪ್ರಜ್ವಲ್, ರಮೇಶ್, ಮೈಸೂರಿನ ಜಯರಾಮ್, ಕಲಿಯೂರು ಷಣ್ಮುಖ ಎಂಬುವರು ಪರಾರಿಯಾದವರು ಎಂದು ಹೇಳಲಾಗಿದೆ.



ಮುಡಿಗುಂಡ ಸಮೀಪದ ಕುಣಗಳ್ಳಿ ರಸ್ತೆಯ ಹೊನ್ನಹೊಳೆ ಸಮೀಪ ಅಕ್ರಮವಾಗಿ ಇಸ್ಪೀಟು ಜೂಜಾಟ ಆಡುತ್ತಿರುವ ಖಚಿತ ಮಾಹಿತಿ ಮೇರೆಗೆ ಪಟ್ಟಣ ಪೊಲೀಸರು ದಾಳಿ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಈ ಅಡ್ಡೆಗೆ ಹಿರಿಯ ಅಧಿಕಾರಿ ಕುಮ್ಮಕ್ಕು ನೀಡಿದ್ದರು. ಅವರು ವರ್ಗವಾಗುತ್ತಿದ್ದಂತೆ ಇಲಾಖೆಯ ಹಲವು ಪೊಲೀಸರೇ ಖುದ್ದು ಎಸ್ಪಿಯವರ ಗಮನಕ್ಕೆ ಈ ಹೈಟೆಕ್ ಜೂಜು ಅಡ್ಡೆ ಬಗ್ಗೆ ಮಾಹಿತಿ ನೀಡಿದ ಹಿನ್ನೆಲೆ ಈ ದಾಳಿ ನಡೆದಿದೆ ಎನ್ನಲಾಗಿದೆ

ಬಂಡೀಪುರ ಉದ್ಯಾನವನದಲ್ಲಿ ಪ್ಲಾಸ್ಟಿಕ್ ಹಾವಳಿ

ಪ್ಲಾಸ್ಟಿಕ್ ಕವರ್‌ನಲ್ಲಿ ಕೋತಿ ಸಿಲುಕಿಕೊಂಡು ಪರದಾಟ

ಗುಂಡ್ಲುಪೇಟೆ, ಮೇ 15– ಪ್ರವಾಸಿಗರ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿಯಿಂದ ಬಂಡೀಪುರ ರಾಷ್ಟ್ರೀಯ ಉದ್ಯಾನವನದಲ್ಲಿ ಪ್ಲಾಸ್ಟಿಕ್ ಹಾವಳಿ ಹೆಚ್ಚಾಗಿದ್ದು, ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಕವರ್‌ಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ ಈ ಬಗ್ಗೆ ಪರಿಸರ ಪ್ರೇಮಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಇದಕ್ಕೆ ಉದಾಹರಣೆ ಎಂಬಂತೆ ಬಂಡಿಪುರ ಸಮೀಪ ಬಿಸಾಡಿದ ಪ್ಲಾಸ್ಟಿಕ್ ಕವರ್‌ನಲ್ಲಿ ಕೋತಿಯೊಂದು ಸಿಕ್ಕಿ ಹಾಕಿಕೊಂಡು ಅದನ್ನು ಬಿಡಿಸಿಕೊಳ್ಳಲು ಆಗದೆ ಹಲವು ಗಂಟೆ ಪರದಾಡಿರುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ವೈರಲಾಗಿದೆ.



ಬಂಡೀಪುರಕ್ಕೆ ಸಫಾರಿಗೆ ಬರುವ ಪ್ರವಾಸಿಗರು ಕಂಡ ಕಂಡಲ್ಲಿ ಪ್ಲಾಸ್ಟಿಕ್ ನೀರಿನ ಬಾಟಲ್ ಮತ್ತು ಕವರ್‌ಗಳನ್ನು, ಹಾಗೂ ತಿಂಡಿ ತಿನಿಸು ಸುತ್ತಿಟ್ಟಿದ್ದ ತ್ಯಾಜ್ಯಗಳನ್ನು ಎಲ್ಲೆಂದರಲ್ಲಿ ಎಸೆಯುವುದರಿಂದ ಕಾಡುಪ್ರಾಣಿಗಳಿಗೆ ಪ್ಲಾಸ್ಟಿಕ್‌ನಿಂದ ಕಂಟಕ ಎದುರಾಗುತ್ತಿದೆ.

ಇನ್ನಾದರೂ ಚೆಕ್ ಪೋಸ್ಟ್‌ಗಳಲ್ಲಿ ಮತ್ತಷ್ಟು ಬಿಗಿ ಕ್ರಮಗಳನ್ನು ಕೈಗೊಂಡು ಪ್ಲಾಸ್ಟಿಕ್ ತ್ಯಾಜ್ಯವನ್ನು ಕಂಡ ಕಂಡಲ್ಲಿ ಎಸೆಯದಂತೆ ಪ್ರವಾಸಿಗರಿಗೆ ಎಚ್ಚರಿಕೆ ನೀಡಬೇಕು ಹಾಗೂ ಇಂತಹ ಪ್ರಕರಣಗಳು ಕಂಡು ಬಂದಲ್ಲಿ ಹೆಚ್ಚಿನ ಮೊತ್ತದ ದಂಡವನ್ನು ವಿಧಿಸಬೇಕೆಂದು ಪ್ರಾಣಿ ಪ್ರಿಯರು ಆಗ್ರಹಿಸಿದ್ದಾರೆ.

ಚಿಕ್ಕಲ್ಲೂರು ಹುಂಡಿಯಲ್ಲಿ 74ಲಕ್ಷ ರೂ. ಸಂಗ್ರಹ

ಕೊಳ್ಳೇಗಾಲ, ಮೇ 15– ಕೊಳ್ಳೇಗಾಲ ತಾಲೂಕಿನ ಇತಿಹಾಸ ಪ್ರಸಿದ್ಧ ಚಿಕ್ಕಲ್ಲೂರು ದೇವಸ್ಥಾನದ ಹುಂಡಿಯಲ್ಲಿ 74ಲಕ್ಷಕ್ಕೂ ಅಧಿಕ ಮೊತ್ತದ ಹಣ ಸಂಗ್ರಹವಾಗಿದೆ.

ಹುಂಡಿ ಎಣಿಕೆಗೆ ಹುಂಡಿ ಹಳೇ ಮಠಕ್ಕೆ ಸಾಗಣೆ ವೇಳೆ ಗುರುವಾರ ಮದ್ಯಾಹ್ನ ಸಾಕಷ್ಟು ವಿವಾದ ಉಂಟಾಗಿತ್ತು.

ಜಿಲ್ಲಾಡಳಿತ ಸೂಚನೆ ಮೇರೆಗೆ ತಾಲೂಕು ಆಡಳಿತ ಪೊಲೀಸರ ಸಹಕಾರದೊಂದಿಗೆ 8 ಹುಂಡಿಗಳನ್ನು ಸಾಗಿಸಿ ಗುರುವಾರ ಸಂಜೆಯಿಂದಲೇ ಬಿಗಿ ಭದ್ರತೆಯಲ್ಲಿ ಎಣಿಕೆ ಕಾರ್ಯ ಪ್ರಾರಂಭಿಸಲಾಗಿತ್ತು. ಶುಕ್ರವಾರ ಬೆಳಗ್ಗೆ 4ಗಂಟೆಗೆ ಹುಂಡಿ ಎಣಿಕೆ ಕಾರ್ಯ ಮುಕ್ತಾಯಗೊಂಡಿದ್ದು ಹುಂಡಿಯಲ್ಲಿ ಎಪ್ಪತ್ತನಾಲ್ಕು ಲಕ್ಷದ ಎರಡು ಸಾವಿರದ ಮುನ್ನೂರು ತೊಂಬತ್ತು ರೂಗಳು ಸಂಗ್ರಹವಾಗಿದೆ. ತಹಸಿಲ್ದಾರ್ ಬಸವರಾಜು, ಪಿಎಸ್ಐ ಸುಪ್ರೀತ್, ಉಪ ತಹಸಿಲ್ದಾರ್ ರೂಪ, ಆರ್‌ಐ ರಂಗಸ್ವಾಮಿ, ನಿರಂಜನ್, ಪಿಡಿಓ ಶೋಭಾರಾಣಿ ಇದ್ದರು.


ಚಿಕ್ಕಲ್ಲೂರು ಸಿದ್ದಪ್ಪಾಜಿ ದೇಗುಲದ ಹುಂಡಿಗಳ ಎಣಿಕೆ ನಡೆಸುತ್ತಿರುವುದು.

ನಿನ್ನೆ ಎಣಿಕೆ ಕಾರ್ಯದ ವೇಳೆ ಗೊಂದಲ ಗದ್ದಲ ಉಂಟಾಗಿದ್ದನ್ನು ಇಲ್ಲಿ ಸ್ಮರಿಸಬಹುದು.

ಡಿ.ಕೆ.ಶಿವಕುಮಾರ್ ಜನ್ಮದಿನ: ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ

ಚಾಮರಾಜನಗರ: ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹುಟ್ಟುಹಬ್ಬದ ಅಂಗವಾಗಿ ಅಖಿಲ ಕರ್ನಾಟಕ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ದಿಲೀಪ್ ಕುದರ್, ತಾಲೂಕು ಅಧ್ಯಕ್ಷ ಸಿದ್ಧರಾಜು ದೊಡ್ಡರಾಯಪೇಟೆ ಅವರ ನೇತೃತ್ವದಲ್ಲಿ ಡಿ.ಕೆ.ಶಿವಕುಮಾರ್ ಅವರ ಹೆಸರಿನಲ್ಲಿ ಶ್ರೀಚಾಮರಾಜೇಶ್ವರಸ್ವಾಮಿಗೆ ಅರ್ಚನೆ ಮಾಡಿಸಿ ವಿಶೇಷಪೂಜೆ ಸಲ್ಲಿಸಲಾಯಿತು.



ಟಿಪ್ಪರ್ ಡಿಕ್ಕಿ; ರಸ್ತೆ ದಾಟುತ್ತಿದ್ದ ಮಹಿಳೆ ಸಾವು

ಚಾಮರಾಜನಗರ: ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಪಾದಚಾರಿ ಮಹಿಳೆ ಸ್ಥಳದಲ್ಲಿಯೇ ಮೃತಪಟ್ಟಿರುವ ಘಟನೆ ನಗರದ ರಾಮಸಮುದ್ರದಲ್ಲಿ ನಡೆದಿದೆ.

ಬಡಾವಣೆಯ ನಿವಾಸಿ ರಾಜಮ್ಮ(40) ಮೃತ ಮಹಿಳೆ. ಈಕೆ ರಾಮಸಮುದ್ರದ ಹಾಲಿನ ಡೇರಿ ಬಳಿ ರಸ್ತೆ ದಾಟುತ್ತಿದ್ದ ವೇಳೆ ಚಂದಕವಾಡಿ ಕಡೆಯಿಂದ ಬಂದ ಟಿಪ್ಪರ್ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ. ತೀವ್ರ ರಕ್ತಸ್ರಾವದಿಂದ ಮಹಿಳೆ ಸ್ಥಳದಲ್ಲಿಯೇ ಮೃತಪಟ್ಟಿದ್ದಾಳೆ. ಮೃತಳ ಪೋಷಕರ ಆಕ್ರಂದನ ಮುಗಿಲುಮುಟ್ಟಿತು. ವಿಷಯ ತಿಳಿದು ಸ್ಥಳಕ್ಕೆ ಚಾಮರಾಜನಗರ ಸಂಚಾರ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು.



ಬಳಿಕ ಮಹಿಳೆ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಸಿಮ್ಸ್ ಶವಾಗಾರಕ್ಕೆ ರವಾನಿಸಿದರು. ಟಿಪ್ಪರ್ ಅನ್ನು ವಶಪಡಿಸಿಕೊಂಡಿರುವ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಹಳ್ಳಕ್ಕೆ ಕಾರು ಪಲ್ಟಿ; ಪ್ರಯಾಣಿಕರು ಪಾರು

ಚಾಮರಾಜನಗರ: ಮಾದಪ್ಪನ ಬೆಟ್ಟದಲ್ಲಿ ಪೂಜೆ ಮಾಡಿಸಿಕೊಂಡು ಬರುತ್ತಿದ್ದ ಹೊಸ ಕಾರು ಚಾಲಕನ ನಿಯಂತ್ರಣ ಕಳೆದುಗೊಂಡು ಪಲ್ಟಿಯಾಗಿ ಹಳ್ಳಕ್ಕೆ ಬಿದ್ದ ಘಟನೆ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಮಧುವನಹಳ್ಳಿ ಹೊರಭಾಗದಲ್ಲಿ ಸಂಭವಿಸಿದ್ದು, ಕಾರಿನಲ್ಲಿದ್ದವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಕಾರಿನಲ್ಲಿದ್ದ ಮಂಡ್ಯ ಮೂಲದ ಮೂವರಿಗೆ ಸಣ್ಣಪುಟ್ಟ ಗಾಯವಾಗಿದ್ದು, ಅದೃಷ್ಟವಶಾತ್ ಅಪಾಯದಿಂದ ಪಾರಾಗಿದ್ದಾರೆ. ಈ ಸಂಬಂಧ ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಡಾ.ಪರಮೇಶ್ವರಪ್ಪ ನಿಧನ



ಚಾಮರಾಜನಗರ: ನಗರದ ಸಿದ್ಧಾರ್ಥ ನಗರದ ನಿವಾಸಿ ಹಾಗೂ ನಿವೃತ್ತ ಕೆಪಿಟಿಸಿಎಲ್ ನೌಕರರಾದ ಡಾ.ಪರಮೇಶ್ವರಪ್ಪ (65) ಶುಕ್ರವಾರ ಸಂಜೆ ನಿಧನರಾದರು.

ಮೃತರು ಜಿಲ್ಲಾ ವೀರಶೈವ ಲಿಂಗಾಯಿತ ನೌಕರರ ಸಂಘದ ನಿಕಟ ಪೂರ್ವ ಅಧ್ಯಕ್ಷರು, ಬಸವೇಶ್ವರ ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರಾಗಿದ್ದರು. ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಶನಿವಾರ ಮಧ್ಯಾಹ್ನ 12 ಗಂಟೆಗೆ ಸ್ವ–ಗ್ರಾಮ ವಿ.ಸಿ.ಹೊಸೂರಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳಿಂದ ತಿಳಿದು ಬಂದಿದೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

ಮೆಡಿಕಲ್ ಸ್ಟೋರ್ ಮಾರಾಟಕ್ಕಿದೆ
Running Medical Store with Clinic Setup available for Sale near Ring road, Srirampura, Mysuru, For more information contact:
8147803665

ಬೇಕಾಗಿದ್ದಾರೆ
ಕ್ಯಾಂಟೀನ್‌ಗೆ ಅನುಭವವುಳ್ಳ ಅಡುಗೆ ಮಾಡಲು ಒಬ್ಬರು ಲೇಡಿಸ್ ತಕ್ಷಣ ಬೇಕಾಗಿದ್ದಾರೆ ಸ್ಥಳ: ಗೋಕುಲಂ
9482377261

ಡ್ರೈವರ್ ಬೇಕಾಗಿದ್ದಾರೆ
ಮಾಸಿಕ 15000–20000/– ಊಟ ವಸತಿ ಉಚಿತ
8884179981

REQUIRED
Female Office Assistants required for a small scale industry situated at Bannimantap, Mysore. Qualification: SSLC Pass. Contact: Mrs. Anita
Mob: 9880776419

STAFF WANTED
Premium Ice Cream Parlour – Mysore
- Store Manager
- Asst. Manager
- Senior Guest Service Staff
- Guest Service Staff

Age limit: Up to 40 years
Good Salary | Immediate Joining
8792464700

ಸೈಟು ಮಾರಾಟಕ್ಕಿದೆ
ಶಿವಶಕ್ತಿ ಲೇಔಟ್ ದಕ್ಷಿಣ & ಉತ್ತರ – 50 ಅಡಿ ಪೂರ್ವ & ಪಶ್ಚಿಮ – 30 ಅಡಿ ಶ್ರೀನಗರ ರೈಲ್ವೇ ಗೇಟ್ ಎದುರು
9242383936

ಬ್ರಾಹ್ಮಣ ವಿವಾಹ ವೇದಿಕೆ
ಎಲ್ಲಾ ಬ್ರಾಹ್ಮಣ ವಧುವರರು ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
6361740552
9449408551

ಬೇಕಾಗಿದ್ದಾರೆ
ನಮ್ಮ ಸಂಸ್ಥೆಗೆ ತಕ್ಷಣವೇ ಕೆಳಗಿನ ಹುದ್ದೆಗಳಿಗೆ ಸಿಬ್ಬಂದಿ ಅಗತ್ಯವಿದೆ
- FIELD ENGINEERS
- TECHNICIANS

ಸಂಬಳ 25000/–
9880151303

MUDA APPROVED SITE
(E-khatha ready) 20x30, 20x40, 30x40 Ready for Registration, Bogadi Road & Uttanahalli
Call: 9945-0202-12

ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ Security Field Officer ಬೇಕಾಗಿದ್ದಾರೆ.
Whatsapp resume to
7795104543
9538886328

WANTED
An Experienced Pre-School Teacher
Qualification: PUC/Degree along with Pre-School Training.
Interview Date: 17.05.2026 Sunday, Time: 10 AM.
Cell No. 9945987977

SITE FOR SALE
KBL SILICON CITY Behind Infosys
30x50 E/F 1st Phase.
Well Developed Area. Premium Plot | Owner's plot
Call : 88672 68919
Brokers Excuse

ಸುವರ್ಣ ಯಾತ್ರಾ
13 ದಿನಗಳ ಚಾರ್ ಧಾಮ್ ಪ್ರವಾಸ 26/5/26
9 ದಿನಗಳ ನೇಪಾಳ ಪ್ರವಾಸ 04/06/26
9 ದಿನಗಳ ಕಾಮಾಕ್ಯ, ಮೇಘಾಲಯ ಅರುಣಾಚಾಲ ಪ್ರದೇಶ ಪ್ರವಾಸ 10/6/26
6360146483
9008381022

ಜಮೀನು ಮಾರಾಟಕ್ಕಿದೆ
ಮೈಸೂರಿನ ಕುವೆಂಪುನಗರದಿಂದ ಕೇವಲ ಆರು ಕಿಲೋಮೀಟರ್ ದೂರದಲ್ಲಿರುವ ಪೆರಿಫೆರಲ್ ರಿಂಗ್ ರೋಡ್‌ಗೆ ಹೊಂದಿಕೊಂಡಿರುವ ಲೇಔಟ್‌ಗೆ ಸೂಕ್ತವಾದ 8.5 ಎಕರೆ ಜಮೀನು ಮಾರಾಟಕ್ಕಿದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. ಸಂಪರ್ಕಿಸಿ : ಡಾ. ಗುರುಪ್ರಸಾದ್
9036284426

ಸಂಪು ಹಾಗೂ ಟ್ಯಾಂಕ್ ಕ್ಲೀನಿಂಗ್ ಮತ್ತು ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ:
9964733988

CHANGE OF NAME
I, VANISHREE S, W/O JAGADISH S, Residing at 392, 5th Cross, Roopanagar, Boagdi, Mysore-570026, have changed my name from Dr. Vanishree S to Vanishree S out of my own free will sworn in bofore Notary Venkatesha Patwardhan, Mysore. vide Affidavit dated 13/5/2026
Sd/- Vanishree S

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್
ರೂ. 900. ಸಂಪರ್ಕಿಸಿ:
Mob: 9108048064



SUNZONE SOLAR SYSTEM
VM Double Road, Kuvempunagar, Mysuru
9845175443

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

WANTED
UNIQUE DELTA FORCE PVT LTD
SECURITY JOB INFOSYS
8 hrs 3 Shift / SSLC Pass
Age below 50 years
Call: 97314 44493 77956 85309

SITE FOR SALE
26 x 40, South West Corner
E-Katha Available & Ready to Register
JUST ₹15 LACKS
1.5 Kms from Hunsur Main Road, Devarahalli, Bilikere Mysore.
Call: 7337786007

SITE FOR SALE
20x30 EAST FACE MUDA ALLOTTED VIJAYNAGAR 4TH STAGE, CONTACT
9148316776

ಮನೆಯಿಂದಲೇ ಕೆಲಸ
ಗೃಹಿಣಿಯರು, ವಿದ್ಯಾರ್ಥಿಗಳು, ನಿವೃತ್ತಿ ಹೊಂದಿರುವವರು, ವಯಸ್ಸಿನ ಮಿತಿ ಇಲ್ಲಾ, ನಿಮ್ಮ ಬಿಡುವಿನ ವೇಳೆಯಲ್ಲಿ ಕುಳಿತು ಬುಕ್, ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ, ಮೊಬೈಲ್ ವಾಟ್ಸಾಪ್ ಟೈಪಿಂಗ್, ಪೆನ್ಸಿಲ್ ಪ್ಯಾಕಿಂಗ್, ಫ್ಲವರ್‌ಪ್ಯಾಕಿಂಗ್, ಫಿಶ್‌ಫುಡ್ ಪ್ಯಾಕಿಂಗ್ ಹಾಗೂ ಮನೆಯಿಂದಲೇ ಕರಕುಶಲ ಪ್ಯಾಕಿಂಗ್ ಹುದ್ದೆಗಳನ್ನು ಮಾಡಲು ಎಲ್ಲರಿಗೂ ಮುಕ್ತ ಅವಕಾಶ. ಗಳಿಸಿ ಸಂಬಳ ತಿಂಗಳಿಗೆ 30,000/– ರಿಂದ 40,000/– ದವರೆಗೆ
9606983268

ಕುವೆಂಪು ನಗರದ ಸೀರೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿ ಬೇಕಾಗಿದ್ದಾರೆ.
8296695765 / 7348843351

ಗ್ರಾವೆಲ್, ಕೆಮ್ಮಣ್ಣು ದೊರೆಯುತ್ತದೆ
ಜಮೀನು 10 ಗುಂಟೆ, 5 ಗುಂಟೆ, 20 ಗುಂಟೆ, ಬೇಕಾದವರು ಸಂಪರ್ಕಿಸಿ:
Mob: 7259407518

SITE FOR SALE
20x40 West face, Dattagalli Near Triveni Super Market, Opp. Sharada Public School. Rs. 63 Lakhs
Mob: 8073799013

ಬೇಕಾಗಿದ್ದಾರೆ
Ladies PGಯಲ್ಲಿ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. (ಅಡುಗೆ ಹೆಲ್ಪರ್) ಕಡ್ಡಾಯವಾಗಿ PG ಯಲ್ಲಿಯೇ ಉಳಿದುಕೊಳ್ಳಬೇಕು. ಊಟ, ವಸತಿ ದೊರೆಯುತ್ತದೆ. ಸಂಬಳ: 10,000.
9972567537, 9035004605

ತಕ್ಷಣ ಬೇಕಾಗಿದ್ದಾರೆ
1) ಹೋಟೆಲ್ ಕೆಲಸಕ್ಕೆ ಮಹಿಳೆಯರು – ಎಲೆತೋಟ, ಹಿನಕಲ್, ಒಂಟಿಕೊಪ್ಪಲ್.
2) ತೋಟದ ಕೆಲಸಕ್ಕೆ ಮಹಿಳೆಯರು – ವೇಟಗಳ್ಳಿ.
3) ಸೆಕ್ಯೂರಿಟಿ ಗಾರ್ಡ್ – ಸಿಟಿ ಸುತ್ತಮುತ್ತ
9739166772, 9731663856

ಸಂಪು ಹಾಗೂ ಟ್ಯಾಂಕ್ ಸೋಲಾರ್ ಸರ್ವೀಸ್
8197383645
9008711654

ಬೇಕಾಗಿದ್ದಾರೆ
ಕಾಫಿ, ಟೀ ಮತ್ತು ಫ್ರೆಶ್ ಜ್ಯೂಸ್ ಹಾಗೂ ಚಾಟ್ಸ್, ಚೈನೀಸ್ ಮಾಡುವ ಅನುಭವವುಳ್ಳ ಕೆಲಸಗಾರರು ಬೇಕಾಗಿದ್ದಾರೆ. ಉತ್ತಮ ಸಂಬಳ ಪಡೆಯಲು. ಸಂಪರ್ಕಿಸಿ
8660904544
8151005517

MUDA ALLOTED LAYOUT
GREATER MYSURU LIMITS
30x40 Site @ Rs. 54 Lac
E KHATA Ready
2.3 kms from Ring Road
4.5 kms from DC Office
8.5 kms from KR Circle
Off. Bannur Road, Mysuru.
Call: 99649 23399

ಪ್ರಾಣಾಯಾಮ ಧ್ಯಾನ ತರಬೇತಿ
ಕ್ರಮ ಬದ್ಧ ಪ್ರಾಣಾಯಾಮ ಮತ್ತು ಧ್ಯಾನ ತರಬೇತಿಯನ್ನು ನುರಿತ ಯೋಗ ತರಬೇತುದಾರರು ನಿಮ್ಮ ಮನೆಗೆ ಬಂದು ಐದು ದಿನಗಳಲ್ಲಿ ನೀಡುತ್ತಾರೆ. ಆರೋಗ್ಯ ಜೀವನಕ್ಕಾಗಿ ಸಂಪರ್ಕಿಸಿ:
Mob: 9449886322

SITES FOR SALE
30x40 East facing MUDA Approved, Disha Layout attached. Gaddige Main Road, Vijayanagar 4th Stage, Mysore.
9964401836, 8073389870

ಮನೆ ಮಾರಾಟಕ್ಕಿದೆ
15x30 ಪೂರ್ವಕ್ಕೆ, 2 BHK Duplex ಸುಬ್ರಮಣ್ಯನಗರ, ಹೆಬ್ಬಾಳು 3ನೇ ಹಂತ, ಮೈಸೂರು
9035663537, 9916763537

SITE FOR SALE
30x40 E/F Dattagalli
Mob: 9343380911

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ (SSLC Pass) 12 ಘಂಟೆ ಪಾಳಿ 16,000 ರೂ. ESI & PF ಸೌಲಭ್ಯ, ಮೇಟಗಳ್ಳಿ ಸುತ್ತ ಮುತ್ತ ಪ್ರದೇಶ
9035367083
6361548626

ಮನೆ ಮಾರಾಟಕ್ಕಿದೆ
20x30 ಅಳತೆಯ, ಹೊಸದಾಗಿ ನಿರ್ಮಿಸಿರುವ, ಉತ್ತರ ದಿಕ್ಕಿನ, 3 BHK ಸುಸಜ್ಜಿತ ಡ್ಯೂಪ್ಲೆಕ್ಸ್ ಮನೆ ಮಾರಾಟಕ್ಕಿದೆ , ಪ್ರಕೃತಿ ಬಡಾವಣೆ, ಟಿ ನರಸೀಪುರ ರಸ್ತೆ, ಮೈಸೂರು, ಸಂಪರ್ಕಿಸಿ :
7259596829

WANTED SITE
30x40 or 30x50 site in SKYTOP IT CITY or nearby layouts Huyilalu, Mysore.
Contact:
8073300783, 8884616461

ಸೈಟು ಬೇಕಾಗಿದೆ
ದೇವನೂರು 1st, 2nd, 3rd ಸಾತಗಳ್ಳಿ 'B' Zone ಮತ್ತು ಅಕ್ಕಪಕ್ಕ ಬಡಾವಣೆಗಳಲ್ಲಿ.
Mob: 9187593627

JNANAJYOTHI VIDYALAYA
HIGH-SCHOOL
WANTED teachers for English-1, Social Science-1 for High-School. Maths & Hindi teachers for primary. Immediately contact:
9845390377, 8197057626

WANTED SITE
We need 40x60 or 50x80 sites in Vijayanagar, Bogadi, Roopanagar and nearby areas.
Only owners can contact.
Brokers are not entertained.
8073300783 / 8884616461

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535175624

ಎಸಿ ಸೇಲ್ ಅಂಡ್ ಸರ್ವೀಸ್
8748060420

ಬೇಕಾಗಿದ್ದಾರೆ
ಮೈಸೂರು ನಗರದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್, helpers, ಸ್ಕೂಲ್ ಅಟೆಂಡರ್, ಹೋಟೆಲ್ ಸಪ್ಲೇಯರ್‌ಗಳು ತಕ್ಷಣ ಕೆಲಸಕ್ಕೆ ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ ESI & PF ಸೌಲಭ್ಯವಿರುತ್ತದೆ. ಕೋ–ಅಪರೇಟಿವ್ ಸೊಸೈಟಿ ಹಿನಕಲ್ ಇಲ್ಲಿ ಪಿಗ್ಮಿ ಕಲೆಕ್ಟರ್, ಫೀಲ್ಡ್ ಎಕ್ಸಿಕ್ಯೂಟಿವ್ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ. (Full time & Part Time Job Available). ಸಂಪರ್ಕಿಸಿ:
Mob: 7795367205, 9611208553, 9036461347

ಬೇಕಾಗಿದ್ದಾರೆ
45 ವರ್ಷದೊಳಗಿನ ಸೆಕ್ಯೂರಿಟಿ ಗಾರ್ಡ್ಸ್ ಓದಲು ಬರೆಯಲು ಗೊತ್ತಿರುವ ಪುರುಷರು –ಜಯಲಕ್ಷ್ಮಿ ಪುರಂ ವಿವಿಮೊಹಲ್ಲಾ, ಬನ್ನಿಮಂಟಪ, ರೇಸ್ ಕೋರ್ಸ್ ಪಕ್ಕ, ಹೆಬ್ಬಾಳ ಹಾಗೂ ದೇವೇಗೌಡ ಸರ್ಕಲ್. ವೇತನ ತಿಂಗಳಿಗೆ 14000/– ರೂ. ಇಎಸ್‌ಐ, ಪಿಎಫ್ ಕಡಿತದ ನಂತರ
9900481819
9972945905

SITE FOR SALE
50X80 N/F
50 FEET ROAD VIMANA NAGARA DADADA HALLI, BEHIND AIRPORT
9731148579

SRI JNANA BHARATHI SCHOOL
P. HOSAHALLI, KRS ROAD
TEACHER REQUIRED
QUALIFICATION : MSc, BSc, MA, B Ed, D Ed, NST, SUBJECT : ENGLISH, SOCIAL FOR LOWER AND HIGHER PRIMARY, : PHYSICAL EDUCATION/PT TEACHER, BUS/CAR DRIVER, TRANSPORTATION AVAILABLE
8884311333
9620124567

ಬೆಲೆ 27 ಲಕ್ಷ ಹಳೆ ಮನೆ ಮಾರಾಟಕ್ಕಿದೆ
11x30 ದಕ್ಷಿಣ(South) ಕುವೆಂಪುನಗರ M Block, ಜಯಮ್ಮ ಗೋವಿಂದೇಗೌಡ ಹಿಂಭಾಗ,
8073951557
9538695419

HOUSE FOR SALE
1ST FLOOR, 2 BHK HOUSE SOLAR AND GEYSER KRISHNAMURTHY LAYOUT, MYSORE. ONLY VEGETARIAN
9741201142

For sale ರಿಂಗ್ ರಸ್ತೆ ಸಮೀಪ
ವಿಜಯನಗರ 30x40 - 1.2 Cr.
ವಸಂತನಗರ 40x75 - 1.24 Cr.
ಜೆ.ಪಿ. ನಗರ 50x80 - 2.5 Cr. / 40x60 - 1.12 Cr.
ದಟ್ಟಗಳ್ಳಿ–ರಾಯಲ್ ಓಕ್ ಸಿಗ್ನಲ್ 1.15 Cr.
10–20 ಗುಂಟೆ ಲ್ಯಾಂಡ್ 6–8 ಲಕ್ಷ ಗುಂಟೆಗೆ (ಸಿಟಿಗೆ ಕೇವಲ 12 ರಿಂದ 15 ಕಿ.ಮೀ).
ವಿಜಯನಗರ, ಬಸವನಳ್ಳಿ 30x40 - 64 ಲಕ್ಷ.
Call: 8123075038
BROKERS EXCUSE

MUDA / DTCP SITES
ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ
ಜೆ.ಪಿ ನಗರ ರಿಂಗ್ ರಸ್ತೆ ಹತ್ತಿರ 24 ಲಕ್ಷ
ಬೊಗಾದಿ ಟ್ರೆಂಡ್ಸ್ ಫ್ಲಾಟ್ ಹತ್ತಿರ 36 ಲಕ್ಷ
ವಿದ್ಯಾವಿಕಾಸ್, MPRO ಹಿಂಬಾಗ 34.75 ಲಕ್ಷ
ವಸಂತನಗರ/ಪೊಲೀಸ್ ಲೇಔಟ್ ಪಕ್ಕ 32 ಲಕ್ಷ
ಹುಣಸೂರು ರಸ್ತೆ, ಇಲಾವಾಲ 27–36 ಲಕ್ಷ
Call : 81230 75038
Broker Excuse 0% Commission

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ, ಗಂಗೋತ್ರಿ ಮತ್ತು ಒಂಟಿಕೊಪ್ಪಲು ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ಸಂಬಳ: 21000+ W/o(8 hrs)
9880727819
9620667819

ಸೈಟುಗಳು ಮಾರಾಟಕ್ಕಿವೆ
ಟಿ.ನರಸೀಪುರ ರಸ್ತೆ 20x30, 22x36 30x40, 30x50 ಕಾರ್ನರ್, 20x40 E/F
9686071750
9187593627

ವಧು–ವರಾನ್ವೇಷಣೆ
ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ (II Marriages Also)
9343175000

COMMERCIAL PROPERTY
For Sale # 1536, 15ft x 25ft Vanivilas Main road, Agrahara. 1.4 Crore(Negotiable)
M.S. KIRAN: 9731517698
UMA: 8496923877
1 KM to MYSORE PALACE

ತಕ್ಷಣ ಬೇಕಾಗಿದ್ದಾರೆ
ಸರಸ್ವತಿಪುರಂ ಕುವೆಂಪುನಗರ ಏರಿಯಾದಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 48 ವರ್ಷದೊಳಗೆ ಸಂಬಳ : 23,000/-, 26 ದಿನಗಳು ಊಟ, ತಿಂಡಿ ಸೌಲಭ್ಯವಿರುತ್ತದೆ.
9620777819

ತಕ್ಷಣ ಬೇಕಾಗಿದ್ದಾರೆ
ಯಾದವಗಿರಿ, ಮಂಜುನಾಥಪುರಂ, ಸಂಕಲ್ಪ ಅಪಾರ್ಟ್‌ಮೆಂಟ್ ಹತ್ತಿರ, ಹೌಸ್ ಕೀಪಿಂಗ್ ಕೆಲಸ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಮತ್ತು ಹಿನಕಲ್, ಸಿಟಿ ಸುತ್ತಮುತ್ತ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
9380990535

ತಕ್ಷಣ ಬೇಕಾಗಿದ್ದಾರೆ
ಕೆಂಪಮ್ಮ ಚೌಡೇಗೌಡ ಪೆಟ್ರೋಲ್ ಬಂಕ್
ಬಂಡಿಪಾಳ್ಯ ಯಾರ್ಡ್, ಎಪಿಎಂಸಿ ಹಿಂಭಾಗ, ಹೊಸಹುಂಡಿ ಗೇಟ್, ಮೈಸೂರು
6 AM TO 2 PM, SALARY : 13,000
2 PM TO 10 PM, SALARY : 13,000
9900339977

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ: 18500 (8 ಗಂಟೆ, 26 ದಿನಗಳು) ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ.
9620777819

ಬೇಕಾಗಿದ್ದಾರೆ
ಮೈಸೂರು ಜಿಲ್ಲೆಯಲ್ಲಿ ಇರುವ ಕಾರ್ ಷೋರೂಮ್ ಹಾಗೂ ಬೈಕ್ ಷೋರೂಮ್‌ಗಳಿಗೆ, ತಕ್ಷಣ ಯುವಕ ಮತ್ತು ಯುವತಿಯರು ಬೇಕಾಗಿದ್ದಾರೆ. EDUCATION SSLC, PUC, ITI, DIPLOMA, DEGREE ಖಾಲಿ ಇರುವ ಹುದ್ದೆಗಳು, CASHIER, BILLING, RECEPTIONIST, HR, ADMIN, ACCOUNTANT ETC, SALARY (18k -38k), ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ
9632659609
7899627704

SITE FOR SALE
30x40 J.J. ENCLAVE, BOGADI ROAD.
Mob: 97400 88990

SITE FOR SALE
30x40 W/F KNS CALLISTO (Near Dattagalli)
Call: 98802 73834

40x60 COMMERCIAL SITE SALE
Judicial Layout, Near Christ Public School
Call: 98802 73834

ಕೆಲಸಕ್ಕೆ ಬೇಕಾಗಿದ್ದಾರೆ
ಚೆನ್ನಮ್ಮ ಅಜ್ಜಿ ಗಾಣದ ಎಣ್ಣೆ
ವಿಜಯನಗರ 1ನೇ ಹಂತ, ಅಭಿಷೇಕ್ ಸರ್ಕಲ್ ಹತ್ತ, ಮೈಸೂರು
8AM - 3PM | ಸಂಬಳ - 10,000/-
3PM -10PM | ಸಂಬಳ - 10,000/-
9900993370

URGENT SITE FOR SALE
Nityanand sagara Muda approved 40X60 East facing
8951144240

FOR SALE
40x60 North facing Near rotary school Dattagalli
MUDA APPROVED
9480606154
9448324232

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

Teakwood Doors & Windows
@COMPANY DEPOT RATES
9901291267 / 9148991267

ಅನುಬಂಧ ವೃದ್ಧಾಶ್ರಮ
ಆರೋಗ್ಯ, ಆರೈಕೆ ಬೇಕಾದ ಹಿರಿಯ ನಾಗರೀಕರಿಗೆ ಹಾಗೂ ಹಾಸಿಗೆ ಹಿಡಿದವರಿಗೆ, ಪಾರ್ಶ್ವವಾಯು ಪೀಡಿತ ವಯೋವೃದ್ಧರನ್ನು ಸುಸಜ್ಜಿತವಾದ ಸಸ್ಯಹಾರಿ ಊಟ, ವಸತಿ, ವೈದ್ಯಕೀಯ ತಪಾಸಣೆ ಹಾಗೂ ನರ್ಸಿಂಗ್ ಸೌಲಭ್ಯಗಳೊಂದಿಗೆ ಮನೆಯಂತೆಯೇ ನೋಡಿಕೊಳ್ಳಲಾಗುವುದು. ಸಂಪರ್ಕಿಸಿ
9880793910

QUALITY Plywood
15 YEARS WARRANTY
₹63/Sft. Onwards
Neem BOND PLATINUM
Neem AKSHAYAGOLD
9901291267 / 9148991267

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸಲ್ ಹೋಟೆಲ್‌ಗೆ ಪಾತ್ರೆ ತೊಳೆಯುವವರು (House Keeping) ಬೇಕಾಗಿದ್ದಾರೆ. ಸಮಯ : ಬೆಳಗ್ಗೆ 9.30 ರಿಂದ ಮಧ್ಯಾಹ್ನ 1 ಗಂಟೆಯವರೆಗೆ, 8000/– ಸಂಬಳ
7204404170

FOR SALE
40x60 E/F Muda auction site @ Vijayanagar 4th stage, 40x70, N/ E corner site @ Srirampura, 40x65 House Yadavgiri 10 acers agriculture land and Form House @ Talakadu
7411363509
9945019509

ಮನೆ ಮಾರಾಟಕ್ಕಿದೆ
ವಿವೇಕಾನಂದ ಸರ್ಕಲ್ 30x40, 60x40 ಮನೆ ಮಾರಾಟಕ್ಕಿದೆ, 20x30 ಮನೆ ಮಾರಾಟಕ್ಕಿದೆ
9008711654

WANTED
1. GROCERY MARKETING - LADIES OR GENTS
2. ACCOUNTS - LADIES or GENTS
3. LOADERS & UNLOADERS - GENTS
ASHIRWADH GROCERY
YADAVAGIRI, MYSORE.
9845700612
7829668666

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸ ಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮುಂದುವರೆದ ವರ್ಗೀಕೃತ ಜಾಹೀರಾತಿಗಾಗಿ 10ನೇ ಪುಟ ನೋಡಿ

ಮೈಸೂರು ಮಿತ್ರ

7.61 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ನಂಜನಗೂಡು, ಮೇ 15– ಮಾನವ ಮತ್ತು ಪ್ರಾಣಿ ಸಂಘರ್ಷ ತಪ್ಪಿಸುವ ಸಲುವಾಗಿ ಓಂಕಾರ್ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ 5.44 ಕೋಟಿ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ಓಂಕಾರ್ ಅರಣ್ಯ ಪ್ರದೇಶದಲ್ಲಿ 5.44 ಕೋಟಿ ವೆಚ್ಚದ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದ ಅವರು, ಹೆಡಿಯಾಲ ಭಾಗದ ಕಾಡಂಚಿನ ಪ್ರದೇಶಗಳಲ್ಲಿ ಮಾನವ ಮತ್ತು ಪ್ರಾಣಿ ಸಂಘರ್ಷದಿಂದಾಗಿ ಬೆಳೆ ಹಾನಿ ಮತ್ತು ಪ್ರಾಣ ಹಾನಿ ಸಂಭವಿಸಿತ್ತು. ಹೀಗಾಗಿ ಅರಣ್ಯ ಇಲಾಖೆ ಸಚಿವ ಈಶ್ವರ್ ಖಂಡ್ರೆ ಅವರನ್ನು ಕರೆಸಿ, ಪರಿಶೀಲನೆ ನಡೆಸಿ ಇಲ್ಲಿನ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲಾಗಿತ್ತು. ಅಲ್ಲದೇ 14 ಕೋಟಿ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ಮತ್ತು ಮೆಸ್ ನಿರ್ಮಿಸಿದ್ದರಿಂದ ಹೆಡಿಯಾಲ ಭಾಗದ ಕಾಡಂಚಿನ ಪ್ರದೇಶಗಳಲ್ಲಿ ಪ್ರಾಣಿಗಳು ನಾಡಿನತ್ತ ಬರುವುದು ತಪ್ಪಿದೆ. ಓಂಕಾರ್ ಅರಣ್ಯ ಪ್ರದೇಶ ವ್ಯಾಪ್ತಿ 8 ಕಿಮೀವರೆಗೆ ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ಬಾಕಿ ಇದ್ದು, ತಾಲೂಕಿನ ಕಾಡಂಚಿನಲ್ಲಿರುವ ದೇಪೇಗೌಡನಪುರ, ಮಲ್ಲಹಳ್ಳಿ ಸೇರಿದಂತೆ ಮತ್ತಿತರ ಪ್ರದೇಶಗಳಲ್ಲಿ ಹೆಚ್ಚಾಗಿರುವ ಕಾಡು ಪ್ರಾಣಿಗಳ ಹಾವಳಿ ತಪ್ಪಿಸುವ ಸಲುವಾಗಿ 8 ಕಿಮೀವರೆಗೂ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಅನುಮೋದನೆ ದೊರೆತಿದೆ. ಇದರ ಮೊದಲ ಭಾಗವಾಗಿ ನಂಜನಗೂಡು ತಾಲೂಕು ವ್ಯಾಪ್ತಿಗೆ ಸೇರುವ 4 ಕಿಮೀವರೆಗೆ 5.44 ಕೋಟಿ ವೆಚ್ಚದಲ್ಲಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣವಾಗಲಿದೆ. ಇದರಿಂದ ಮಾನವ ಪ್ರಾಣಿ ಸಂಘರ್ಷಕ್ಕೆ ಶಾಶ್ವತ ಪರಿಹಾರ ದೊರಕಲಿದೆ. ಜೊತೆಗೆ ಅರಣ್ಯ ಇಲಾಖೆ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸದೆ, ವ್ಯವಸಾಯ ಮಾಡುತ್ತಿರುವ ರೈತರಿಗೆ ಅನುಕೂಲ ಮಾಡಿ ಕೊಡುವಂತೆ ಅರಣ್ಯ ಇಲಾಖೆ ಸಚಿವರಿಗೆ ಮನವರಿಕೆ ಮಾಡಿಕೊಡಲಾಗಿದೆ. ಅವರು ಅಧಿಕಾರಿಗಳಿಗೆ ಈ ಬಗ್ಗೆ ಸೂಚನೆ ನೀಡಿದ್ದಾರೆ ಎಂದರು.

ಅರಣ್ಯ ಇಲಾಖೆ ವಸತಿಗೃಹ ನಿರ್ಮಾಣ: ಪ್ರಾಣಿಗಳು ನಾಡಿನತ್ತ ಆಗಮಿಸಿದ ವೇಳೆ ತುರ್ತು ಪರಿಸ್ಥಿತಿ ಸಂದರ್ಭ ಅರಣ್ಯ ಇಲಾಖೆ ಸಿಬ್ಬಂದಿ ಸ್ಥಳದಲ್ಲೇ ವಾಸವಿರುವಂತೆ ಕ್ರಮ ಕೈಗೊಂಡು, ಹೆಡಿಯಾಲ ಅರಣ್ಯ ಇಲಾಖೆ ಆವರಣದಲ್ಲಿ 80 ಲಕ್ಷ ವೆಚ್ಚದಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಗಳಿಗೆ ವಸತಿಗೃಹ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಇದರಿಂದ ಅರಣ್ಯ ಇಲಾಖೆ ಸಿಬ್ಬಂದಿ ಕಾರಣ ಹೇಳದೆ ತಕ್ಷಣ ಸ್ಥಳಕ್ಕೆ ತೆರಳಿ ರೈತರಿಗೆ ನೆರವು ನೀಡಲಿದ್ದಾರೆ ಎಂದರು.

ತಾಲೂಕಿನ ಹಾಡ್ಯದಲ್ಲಿ ಪ.ಪಂಗಡ ಬೀದಿಯಲ್ಲಿ 25 ಲಕ್ಷ, ಕೊತ್ತನಹಳ್ಳಿ ಎಸ್‌ಟಿ ಬೀದಿಯಲ್ಲಿ 25 ಲಕ್ಷ, ವೆಂಕಟಾಚಲಪುರದಲ್ಲಿ ಎಸ್‌ಸಿಪಿ ಅನುದಾನದಲ್ಲಿ 20 ಲಕ್ಷ ವೆಚ್ಚದಲ್ಲಿ ಸಿಸಿ ರಸ್ತೆ ಮತ್ತು ಚರಂಡಿ ನಿರ್ಮಾಣ, ಹೆಡಿಯಾಲದಲ್ಲಿ 5 ಲಕ್ಷ ವೆಚ್ಚದಲ್ಲಿ ಆಟೋ ನಿಲ್ದಾಣ ಕಾಮಗಾರಿಗೆ ಚಾಲನೆ ನೀಡಲಾಗಿದ್ದು, ಇಂದು ಒಂದೇ ದಿನ 7.61 ಕೋಟಿ ರೂ. ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಮುಖಂಡರಾದ ಮಹದೇವಪ್ಪ, ಅಶೋಕ್, ಗೋವಿಂದರಾಜು, ಮಹೇಶ್, ಅಭಿನಂದನ್ ಪಟೇಲ್, ಆಶ್ರಮ ಸಕ್ರಮ ಸಮಿತಿ ಸದಸ್ಯ ಜಯರಾಮ, ಗ್ರಾಪಂ ಮಾಜಿ ಅಧ್ಯಕ್ಷ ಹರೀಶ್, ಲೋಕೋಪಯೋಗಿ ಇಲಾಖೆ ಎಇಇ ರಮೇಶ್, ಎಇ ಬಸವರಾಜು, ನಿರ್ಮಿತಿ ಕೇಂದ್ರದ ಎಇಇ ಮಂಜುನಾಥ್, ಎಇ ಯಶ್ವಂತ್, ಬಂಡೀಪುರ ಅರಣ್ಯ ನಿರ್ದೇಶಕ ಪ್ರಭಾಕರನ್, ಎಸಿಎಫ್ ಸುರೇಶ್, ಪರಮೇಶ್, ವಲಯ ಅರಣ್ಯಾಧಿಕಾರಿ ಹನುಮಂತಪ್ಪ ಸೇರಿದಂತೆ ಹಲವರಿದ್ದರು.



ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಚಾಲನೆ ನೀಡಿದರು.

ವಿವಿಧ ಕಾಮಗಾರಿ ಉದ್ಘಾಟನೆ

ತಾಲೂಕಿನ ಹೊಸವೀಡು ಗ್ರಾಮದಲ್ಲಿ 5 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿರುವ ನೂತನ ಬಸ್ ನಿಲ್ದಾಣ, ತಾಲೂಕಿನ ಕಂದೇಗಾಲ ಗ್ರಾಮದಲ್ಲಿ 25 ಲಕ್ಷ ವೆಚ್ಚದಲ್ಲಿ ನಿರ್ಮಾಣವಾಗಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನ, ವೆಂಕಟಾಚಲಪುರ ಗ್ರಾಮದಲ್ಲಿ 20 ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಾಣವಾಗಿರುವ ಡಾ. ಬಿ.ಆರ್. ಅಂಬೇಡ್ಕರ್ ಭವನ, ಹೆಡಿಯಾಲ ಗ್ರಾಮದಲ್ಲಿ ಅಂಗನವಾಡಿ ಕಟ್ಟಡವನ್ನು ಶಾಸಕ ದರ್ಶನ್ ಧ್ರುವನಾರಾಯಣ್ ಉದ್ಘಾಟಿಸಿದರು.

ನಾಗರಹೊಳೆಯಲ್ಲಿ ಪ್ರವಾಸಿಗರಿಗೆ ಹುಲಿರಾಯನ ದರ್ಶನ



ಹೆಚ್.ಡಿ.ಕೋಟೆ, ಮೇ 15– ತಾಲೂಕಿನ ನಾಗರಹೊಳೆ ರಾಷ್ಟ್ರೀಯ ಉದ್ಯಾನವನ ದಮ್ಮನಕಟ್ಟೆ ಸಫಾರಿ ಕೇಂದ್ರ ವ್ಯಾಪ್ತಿಯಲ್ಲಿ ಪ್ರವಾಸಿಗರಿಗೆ ಹುಲಿರಾಯ ದರ್ಶನ ನೀಡಿದ್ದಾನೆ. ದಮ್ಮನಕಟ್ಟೆ ಸಫಾರಿ ಕೇಂದ್ರ ವ್ಯಾಪ್ತಿಯಲ್ಲಿ ಪ್ರವಾಸಿಗರು ಸಫಾರಿಗೆ ತೆರಳಿದ್ದ ವೇಳೆ ಸುಡು ಬಿಸಿಲಿನಲ್ಲಿ ಭಾರೀ ಗಾತ್ರದ ಹುಲಿ ಪ್ರವಾಸಿಗರಿಗೆ ಕಾಣಿಸಿಕೊಂಡಿದ್ದು, ತಮ್ಮ ಕ್ಯಾಮರಾದಲ್ಲಿ ಫೋಟೋ ಸೆರೆ ಹಿಡಿದು ಫುಲ್ ಖುಷಿಯಾಗಿದ್ದಾರೆ.

ಬಿಸಿಲಿನ ತಾಪ ಹೆಚ್ಚಾದ ಹಿನ್ನೆಲೆಯಲ್ಲಿ ದಮ್ಮನಕಟ್ಟೆ ಸಫಾರಿ ವ್ಯಾಪ್ತಿಯ ಬದಿ ಕೆರೆಯಲ್ಲಿ ನಿಂತಿದ್ದ ನೀರಿನಲ್ಲಿ ಹುಲಿ ಜಲಕ್ರೀಡೆ ಆಡಿ ನಂತರ ದಡದಲ್ಲಿ ಮಲಗಿರುವ ದೃಶ್ಯವನ್ನು ಪ್ರವಾಸಿಗರು ನೋಡಿ ಕಣ್ತುಂಬಿಕೊಂಡಿದ್ದಾರೆ ಎನ್ನಲಾಗಿದೆ.

ಚಿರತೆ ಹೆಜ್ಜೆ ಗುರುತು ಪತ್ತೆ: ಗ್ರಾಮಸ್ಥರಲ್ಲಿ ಆತಂಕ

ಪಿರಿಯಾಪಟ್ಟಣ, ಮೇ 15– ತಾಲೂಕಿನ ಮಾಲಂಗಿ ಗ್ರಾಮದ ಸುತ್ತಮುತ್ತಲ ಗ್ರಾಮಗಳಲ್ಲಿ ಚಿರತೆ ಹೆಜ್ಜೆ ಗುರುತು ಪತ್ತೆಯಾಗಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಕಳೆದ 2 ದಿನಗಳಿಂದ ಗ್ರಾಮದ ಹೊರವಲಯದ ಜಮೀನುಗಳಲ್ಲಿ ಚಿರತೆ ಸಂಚಾರ ದೃಢಪಟ್ಟಿದ್ದು, ರೈತರು ಹೊಲ–ಗದ್ದೆಗಳಿಗೆ ತೆರಳಲು ಭಯಪಡುವಂತಾಗಿದೆ. ಗ್ರಾಮದ ರೈತರೊಬ್ಬರು ತಮ್ಮ ಜಮೀನಿಗೆ ಹೋದ ವೇಳೆ ದೊಡ್ಡ ಗಾತ್ರದ ಹೆಜ್ಜೆ ಗುರುತುಗಳನ್ನು ಗಮನಿಸಿದ್ದಾರೆ. ಈ ವಿಷಯ ಹರಡುತ್ತಿದ್ದಂತೆ ಆತಂಕ ಹೆಚ್ಚಾಗಿದೆ. ಅಲ್ಲದೇ ಗ್ರಾಮದ ಹೊರವಲಯದಲ್ಲಿ ಚಿರತೆ ಓಡಾಡುತ್ತಿರುವುದನ್ನು ಕೆಲವರು ಗಮನಿಸಿದ್ದು, ಜಾನುವಾರುಗಳ ಮೇಲೂ ದಾಳಿ ನಡೆಸುವ ಸಂಭವವಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.



ಗ್ರಾಮಸ್ಥರ ಆಗ್ರಹ: ಸಂಜೆ ವೇಳೆ ಮಕ್ಕಳು ಮತ್ತು ವೃದ್ಧರು ಮನೆಯಿಂದ ಹೊರಬರಲು ಭಯವಾಗುತ್ತಿದೆ. ಅರಣ್ಯ ಇಲಾಖೆಯವರು ಕೂಡಲೇ ಸ್ಥಳಕ್ಕೆ ಆಗಮಿಸಿ ಚಿರತೆ ಸೆರೆ ಹಿಡಿಯಲು ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಆಸ್ತಿಗಾಗಿ ಸಹೋದರರ ಹತ್ಯೆ ಪ್ರಕರಣ

10 ಮಂದಿ ವಿರುದ್ಧ ಪ್ರಕರಣ ದಾಖಲು

ಕೆ.ಆರ್.ನಗರ, ಮೇ 15– ಇತ್ತೀಚೆಗೆ ತಾಲೂಕಿನ ಅರ್ಜುನಹಳ್ಳಿಯಲ್ಲಿ ಆಸ್ತಿಗಾಗಿ ಸಹೋದರರನ್ನು ದಾರುಣವಾಗಿ ಮಾರಕಾಸ್ತ್ರಗಳಿಂದ ಹತ್ಯೆಗೈದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಮಹಿಳೆಯರು ಸೇರಿದಂತೆ 10 ಮಂದಿ ವಿರುದ್ಧ ಕೆ.ಆರ್.ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ರೋಹಿತ್

ಆಸ್ತಿಗಾಗಿ ಅರ್ಜುನಹಳ್ಳಿ ಗ್ರಾಮದ ನಿವಾಸಿ ದಿ.ರಮೇಶ್ ರಾಜು ಅವರ ಕಿರಿಯ ಮತ್ತು ಹಿರಿಯ ಹೆಂಡತಿ ಮಕ್ಕಳ ನಡುವಿನ ವೈಮನಸ್ಸಿನಿಂದಾಗಿ ಹಿರಿಯ ಹೆಂಡತಿ ಮಕ್ಕಳಾದ ಡಿಸ್ಕವರಿ ರಾಘು ಮತ್ತು ಹರ್ಷವರ್ಧನ್ ಎಂಬ ಸಹೋದರರನ್ನು ಕಿರಿಯ ಹೆಂಡತಿ ಮಗ ರೋಹಿತ್ ಹಾಗೂ ಇತರರು ಹತ್ಯೆಗೈದಿದ್ದರು. ಈ ಸಂಬಂಧ ಪ್ರಕರಣದಲ್ಲಿ ಎ1 ಆಗಿ ದಿ.ರಮೇಶ್ ರಾಜು ಅವರ ಕಿರಿಯ ಹೆಂಡತಿಯ ಮಗ ರೋಹಿತ್ ಹಾಗೂ ಎ2 ಆತನ ತಾಯಿ ಸುಧಾ ಹಾಗೂ ಆತನ ಹೆಂಡತಿ ಹರ್ಷಿತ, ತಮ್ಮ ರೂಪೇಶ್ ಸೇರಿದಂತೆ ಆಸ್ತಿ ವಿಚಾರವಾಗಿ ಪಂಚಾಯತಿ ಮಾಡಲು ಬಂದು ಕೊಲೆಗೆ ಸಹಕರಿಸಿದ ಕಾಂತರಾಜೇಗೌಡ, ಆಕಾಶ್ ಗೌಡ, ಅಭಿಷೇಕ್ ಗೌಡ, ಅಚ್ಯುತ್ ಗೌಡ, ಮಂಜುನಾಥ್ ಹಾಗೂ ತಿಪ್ಪೂರು ಗ್ರಾಮದ ಸತ್ಯನಾರಾಯಣ ಎಂಬುವರ ಮೇಲೆ ಹತ್ಯೆಗೊಳಗಾದ ಸಹೋದರರ ತಾಯಿ ಕಾಮಾಕ್ಷಿ ನೀಡಿದ ದೂರಿನ ಮೇರೆಗೆ ಕೆ.ಆರ್.ನಗರ ಪೊಲೀಸರು ಸೆಕ್ಷನ್ 103, 54, 49 ಅಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಎ1 ಆರೋಪಿ ರೋಹಿತ್‌ನನ್ನು ಕೊಲೆ ನಡೆದ ದಿನವೇ ಬಂಧಿಸಲಾಗಿದ್ದು, ಉಳಿದ 9 ಆರೋಪಿಗಳು ತಲೆಮರೆಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಪಟ್ಟಣದ ಪೊಲೀಸರು ಉಳಿದ ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ತ್ಯಾಗದ ಪ್ರತಿರೂಪವಾಗಿರುವ ನರ್ಸ್‌ಗಳ ಸೇವೆ ಸ್ಮರಣೀಯ

ಸರಗೂರು, ಮೇ 15– ಸಮಾಜದ ಆರೋಗ್ಯ ಕಾಪಾಡುವ, ತ್ಯಾಗದ ಪ್ರತಿರೂಪವಾಗಿರುವ ನರ್ಸ್‌ಗಳ ಸೇವೆ ಸ್ಮರಣೀಯ ಎಂದು ಹೆಚ್.ಡಿ.ಕೋಟೆ ಸೇಂಟ್ ಮೇರೀಸ್ ಸಮುದಾಯ ಆರೋಗ್ಯ ಕೇಂದ್ರದ ನರ್ಸಿಂಗ್ ಸೂಪರಿಂಟೆಂಡೆಂಟ್ ಸಿಸ್ಟರ್ ಮೇರಿ ಫರ್ನಾಂಡಿಸ್ ಬಣ್ಣಿಸಿದರು.

ಪಟ್ಟಣದ ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ನಡೆದ ಅಂತಾರಾಷ್ಟ್ರೀಯ ಶುಶ್ರೂಷಕರ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಾನವೀಯತೆ, ಸೇವೆ ಮತ್ತು ತ್ಯಾಗದ ಪ್ರತಿರೂಪವಾಗಿರುವ, ರೋಗಿಗಳ ಆರೈಕೆಗಾಗಿ ಹಗಲಿರುಳು ಶ್ರಮಿಸುವ ನರ್ಸ್‌ಗಳ ಸೇವೆ ಅತ್ಯಮೂಲ್ಯ. ಸಮಾಜದ ಆರೋಗ್ಯ ಕಾಪಾಡುವ ನಿಮ್ಮ ಸಮರ್ಪಣೆ ಸದಾ ಸ್ಮರಣೀಯ ಎಂದರು.

ಮುಖ್ಯ ಅತಿಥಿ ನರ್ಸಿಂಗ್ ಅಧಿಕಾರಿ ಹೆಚ್.ಕೆ.ಸುಗುಣಾಂಬ ಮಾತನಾಡಿ, ಎಲ್ಲೆಡೆ ವಿಶ್ವ ದಾದಿಯರ ದಿನವನ್ನು ಆಚರಿಸಲಾಗುತ್ತದೆ. ಸೇವೆ, ಸಮರ್ಪಣೆ ಮತ್ತು ಕರುಣೆಯನ್ನು ಸ್ಮರಿಸಿ ಗೌರವಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ವಿಶೇಷವಾಗಿ ಗ್ರಾಮೀಣ ಹಾಗೂ ಸೀಮಿತ ಸೌಲಭ್ಯಗಳಿರುವ ಪ್ರದೇಶಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶುಶ್ರೂಷಕರ ಸೇವೆಯನ್ನು ಕೊಂಡಾಡಿದ ಅವರು ಶುಶ್ರೂಷಕರಿಗೆ ದಯೆ, ಮಾನವೀಯತೆ ಮತ್ತು ಜವಾಬ್ದಾರಿಯುತ ಸೇವೆ ಮುಂದುವರಿಸುವಂತೆ ಪ್ರೇರಣೆ ನೀಡಿದರು.

ರೋಗಿಗಳ ಆರೈಕೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಶುಶ್ರೂಷಕರನ್ನು ಗೌರವಿಸಲಾಯಿತು. ನಂತರ ನಡೆದ ಪ್ರತಿಜ್ಞಾ ಸ್ವೀಕಾರ ಕಾರ್ಯಕ್ರಮದಲ್ಲಿ, ಶುಶ್ರೂಷಕರು ನೈತಿಕತೆ, ಕರುಣೆ ಮತ್ತು ಸಮರ್ಪಣೆಯೊಂದಿಗೆ ಸೇವೆ ಸಲ್ಲಿಸುವ ಪ್ರತಿಜ್ಞೆಯನ್ನು ಪುನರುಚ್ಚರಿಸಿದರು.

ಕಾರ್ಯಕ್ರಮದಲ್ಲಿ ಸೂಪರ್ ಮಿನಿಟ್ ಗೇಮ್ ಸೇರಿದಂತೆ ವಿವಿಧ ಮನರಂಜನಾ ಚಟುವಟಿಕೆಗಳನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮಗಳು ಸಿಬ್ಬಂದಿಯಲ್ಲಿ ಉತ್ಸಾಹ ಮತ್ತು ಒಗ್ಗಟ್ಟನ್ನು ಹೆಚ್ಚಿಸಿತು.

ವಿಶೇಷ ಅತಿಥಿ ತುರ್ತು ಚಿಕಿತ್ಸಾ ತಜ್ಞ ಡಾ.ಅರ್ಜುನ್ ಎಸ್. ಪ್ರಕಾಶ್ ಸೇರಿದಂತೆ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ವಿವೇಕಾನಂದ ಸ್ಮಾರಕ ಆಸ್ಪತ್ರೆಯಲ್ಲಿ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ನಡೆಯಿತು.

ಅಭಿನಂದನೆ



ಕೆ.ಆರ್.ನಗರ ತಾಲೂಕಿನ ವೀರಶೈವ ಮಹಾಸಭಾ ನಿರ್ದೇಶಕರಾಗಿ ಅವಿರೋಧವಾಗಿ ಆಯ್ಕೆಯಾದ ಹೊಸ ಅಗ್ರಹಾರ ಗ್ರಾಮದ ಎಲ್‌ಐಸಿ ಮಂಜುನಾಥ್ ಮತ್ತು ಅರ್ಜುನಹಳ್ಳಿ ಜ್ಞಾನಾನಂದ್ ಅವರನ್ನು ಪಟ್ಟಣದ ಹೆಸರಾಂತ ಖಾದಿ ಭಂಡಾರ ಸಮಾನ ಮನಸ್ಕರು ಅಭಿನಂದಿಸಿದರು. ಈ ವೇಳೆ ಮುಖಂಡರಾದ ಹಂಪಾಪುರ ದೇವರಾಜ್, ಪೆರಿಸ್ವಾಮಿ, ತಮ್ಮಯ್ಯಣ್ಣ, ಸುಬ್ಬುಕೃಷ್ಣ, ಖಾದಿ ಭಂಡಾರ್ ಮೋಹನ್, ಅಡಗೂರು ನಟರಾಜ್, ಬಿ.ಎಂ.ನಾಗರಾಜ್, ಹನುಮನಹಳ್ಳಿ ಮಹದೇವಪ್ಪ, ಮರೀಗೌಡ ಇದ್ದಾರೆ.

ಮೂರನೇ ಪುಟದಿಂದ

ಲೀಟರ್‌ಗೆ 3 ರೂ. ಏರಿಕೆ

ಸರಾಸರಿ ಬೆಲೆ ಫೆಬ್ರವರಿಯಲ್ಲಿ ಬ್ಯಾರೆಲ್‌ಗೆ ಸುಮಾರು 69 ಡಾಲರ್ ಇದ್ದರೆ, ಯುದ್ಧ ಆರಂಭವಾದ ಬಳಿಕ ಅದು 113–114 ಡಾಲರ್ ಮಟ್ಟಕ್ಕೇರಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಏರಿಕೆಯಾಗಿದ್ದರೂ ಕಳೆದ 11 ವಾರಗಳಿಂದ ದೇಶೀಯ ಇಂಧನ ದರವನ್ನು ತೈಲ ಕಂಪನಿಗಳು ಸ್ಥಿರವಾಗಿಯೇ ಉಳಿಸಿಕೊಂಡಿದ್ದವು. ಆದರೆ, ನಿರಂತರ ನಷ್ಟ ಮತ್ತು ಹೆಚ್ಚುತ್ತಿರುವ ಕಾರ್ಯಾಚರಣಾ ವೆಚ್ಚದಿಂದ ಇದೀಗ ದರ ಪರಿಷ್ಕರಣೆ ಅನಿವಾರ್ಯವಾಗಿದೆ ಎಂದು ಮೂಲಗಳು ಹೇಳಿವೆ.

2022ರ ಏಪ್ರಿಲ್‌ನಿಂದಲೇ ದಿನನಿತ್ಯದ ಇಂಧನ ದರ ಪರಿಷ್ಕರಣೆ ಕ್ರಮವನ್ನು ಸರ್ಕಾರಿ ತೈಲ ಕಂಪನಿಗಳು ಬಹುತೇಕ ಸ್ಥಗಿತಗೊಳಿಸಿದ್ದವು. ರಷ್ಯಾ–ಉಕ್ರೇನ್ ಯುದ್ಧದ ನಂತರ ಜಾಗತಿಕ ತೈಲ ದರ ಏರಿಕೆಯಿಂದ ಕಂಪನಿಗಳು ಭಾರೀ ನಷ್ಟ ಅನುಭವಿಸಿದ್ದರೂ, ಗ್ರಾಹಕರ ಮೇಲಿನ ಹೊರೆ ಕಡಿಮೆ ಮಾಡಲು ದರವನ್ನು ಹೆಚ್ಚಿಸಿರಲಿಲ್ಲ. ಬಳಿಕ ತೈಲ ದರ ಇಳಿಕೆಯಿಂದ ಆ ನಷ್ಟವನ್ನು ಭಾಗಶಃ ಭರಿಸಲು ಸಾಧ್ಯವಾಗಿತ್ತು. ಇದಾದ ಬಳಿಕ 2024ರ ಲೋಕಸಭೆ ಚುನಾವಣೆಗೆ ಮುನ್ನ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ದರವನ್ನು ಲೀಟರ್‌ಗೆ ರೂ.2ರಷ್ಟು ಇಳಿಕೆ ಮಾಡಿತ್ತು. ಆದರೆ, ಮಧ್ಯಪ್ರಾಚ್ಯ ಯುದ್ಧದಿಂದ ಮತ್ತೆ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಏರಿಕೆಯಾದ್ದರಿಂದ ಇದೀಗ ದರ ಹೆಚ್ಚಳ ಅನಿವಾರ್ಯ ವಾಗಿದೆ.

ಇನ್ನು ಎಲ್ಲವೂ ಏರಿಕೆ: ಇಂಧನ ದರ ಏರಿಕೆಯಿಂದ ಸಾರಿಗೆ ವೆಚ್ಚ ಹೆಚ್ಚುವ ಸಾಧ್ಯತೆ ಇದ್ದು, ತರಕಾರಿ, ಹಣ್ಣು, ಹಾಲು ಸೇರಿದಂತೆ ಅಗತ್ಯ ವಸ್ತುಗಳ ಬೆಲೆಯ ಮೇಲೂ ಪರಿಣಾಮ ಬೀರುವ ಆತಂಕ ವ್ಯಕ್ತವಾಗಿದೆ. ಖಾಸಗಿ ವಾಹನ ಸವಾರರು, ಟ್ಯಾಕ್ಸಿ ಚಾಲಕರು, ಲಾರಿ ಮಾಲೀಕರು ಮತ್ತು ಸಾರ್ವಜನಿಕ ಸಾರಿಗೆ ಕ್ಷೇತ್ರಕ್ಕೂ ಈ ದರ ಏರಿಕೆ ಹೆಚ್ಚುವರಿ ಹೊರೆ ತರಲಿದೆ. ತಜ್ಞರ ಅಭಿಪ್ರಾಯದಂತೆ ಮಧ್ಯಪ್ರಾಚ್ಯ ಸಂಘರ್ಷ ಇನ್ನಷ್ಟು ತೀವ್ರಗೊಂಡರೆ ಜಾಗತಿಕ ಕಚ್ಚಾ ತೈಲ ಬೆಲೆ ಮತ್ತಷ್ಟು ಏರಿಕೆಯಾಗಬಹುದು. ಅದರ ಪರಿಣಾಮವಾಗಿ ಭಾರತದಲ್ಲೂ ಇಂಧನ ದರ ಮತ್ತೆ ಹೆಚ್ಚುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

ಬೆಳ್ಳಂಬೆಳಗ್ಗೆ ಮೈಸೂರಿಗರಿಗೆ ಶಾಕ್: ಪೆಟ್ರೋಲ್ ಮತ್ತು ಡಿಸೇಲ್ ಬೆಲೆ ದಿಢೀರ್ ಏರಿಕೆಯಾಗಿದ್ದರಿಂದ ಶುಕ್ರವಾರ ಬೆಳ್ಳಂಬೆಳಗ್ಗೆ ಮೈಸೂರಿಗರು ಶಾಕ್‌ಗೆ ಒಳಗಾದರು. ಬೆಳಿಗ್ಗೆ 6 ಗಂಟೆಯಿಂದಲೇ ಹೊಸ ದರ ಜಾರಿಗೆ ಬಂದಿದ್ದು, ಬಂಕ್‌ಗೆ ಹೋದವರು ಬೆಲೆ ಏರಿಕೆ ಕಂಡು ಕ್ಷಣಕಾಲ ಅವಕ್ಕಾದರು. ಕೆಲ ವಾಹನ ಸವಾರರು ಅಚ್ಚರಿಗೊಳಗಾದಂತೆ ಕಂಡುಬಂದರೆ ಮತ್ತಷ್ಟು ಮಂದಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಸಂಕಷ್ಟದಲ್ಲಿದ್ದೇವೆ, ಇನ್ನು ಇಂಧನ ದರ ಹೆಚ್ಚಳದಿಂದ ಬದುಕು ಮತ್ತಷ್ಟು ದುಸ್ತರವಾಗಲಿದೆ ಎಂದು ನೊಂದು ನುಡಿದರು. ಮುಂದಿನ ದಿನಗಳಲ್ಲಿ ಸಾಮಾನ್ಯ ಜನರ ಮೇಲೆ ಇನ್ನಷ್ಟು ಹೊರೆ ಬೀಳದಂತೆ ಸರ್ಕಾರ ಇಂಧನ ಭದ್ರತೆ ಖಚಿತಪಡಿಸಬೇಕು ಎಂದು ಒತ್ತಾಯಿಸಿದರು.

ಖಾಸಗಿ ಬಸ್ ಟಿಕೆಟ್ ದರ ಹೆಚ್ಚಳ

ನಮಗೆ ಪ್ರತಿ ಟ್ರಿಪ್‌ಗೆ ಹೆಚ್ಚುವರಿಯಾಗಿ 450 ರೂ. ಅಂದರೆ ಹೊರೆ ಆಗಲಿದೆ. ಹೀಗಾಗಿ ಅನಿವಾರ್ಯ ವಾಗಿ ದರ ಏರಿಕೆ ಮಾಡುತ್ತಿದ್ದೇವೆ. ಇದರ ಪರಿಣಾಮ ಪ್ರಯಾಣಿಕರ ಮೇಲೆ ಬೀಳಲಿದೆ ಎಂದಿದೆ.

ಸ್ಕೂಲ್ ವಾಹನಗಳ ದರವೂ ಹೆಚ್ಚಳ: ಕರ್ನಾಟಕ ರಾಜ್ಯ ಖಾಸಗಿ ಶಾಲಾ ವಾಹನಗಳ ಯುನಿಯನ್ ಅಧ್ಯಕ್ಷ ರವಿಕುಮಾರ್ ಮಾತನಾಡಿ, ಸ್ಕೂಲ್ ವಾಹನಗಳ ದರ 10%ವರೆಗೆ ಏರಿಕೆ ಮಾಡಿದ್ದಾಗಿ ತಿಳಿಸಿದ್ದಾರೆ. ಇದರ ಜೊತೆಗೆ ರಾಜ್ಯ ಟ್ರಾವೆಲ್ ಪಾಸೆಂಜರ್ ವಾಹನಗಳ ದರವೂ 10%–15%ನಷ್ಟು ಏರಿಕೆಯಾಗಲಿದೆ. ಒಲಾ, ಉಬರ್ ದರ ಏರಿಕೆಯ ಬಗ್ಗೆ ಚರ್ಚೆ ನಡೆಯುತ್ತಿದ್ದು, ಸೋಮವಾರ (ಮೇ 18) ಚಾಲಕರ ಸಂಘದಿಂದ ಸಭೆ ನಡೆಯಲಿದೆ. ಸಭೆಯ ಬಗ್ಗೆ ಸರ್ಕಾರಕ್ಕೆ ಮನವಿ ಸಲ್ಲಿಸಲು ಸಿದ್ಧತೆ ನಡೆದಿದ್ದು, ದರ ಏರಿಕೆಗೆ ಪ್ರಸ್ತಾವನೆಗೆ ಒತ್ತಡ ಹೇರಲು ತಯಾರಿ ನಡೆಸಿದೆ.

ಇನ್ನೂ 1 ವರ್ಷ ಜೈಲು ಶಿಕ್ಷೆ!

ವಿಚಾರಣೆ ಆರಂಭವಾಗುತ್ತಿದ್ದಂತೆ ದರ್ಶನ್ ಪರ ವಕೀಲರು, ಜೈಲಿನಲ್ಲಿ ದರ್ಶನ್ ಅವರನ್ನು ಕ್ವಾರಂಟೈನ್ ಸೆಲ್‌ನಲ್ಲಿ ಇರಿಸಲಾಗಿದ್ದು, ಯಾರೊಂದಿಗೂ ಮಾತನಾಡಲು ಅವಕಾಶ ನೀಡುತ್ತಿಲ್ಲ. ಕುಟುಂಬ ಸದಸ್ಯರನ್ನು ಭೇಟಿ ಮಾಡಲು ಕೇವಲ ಗ್ಲಾಸ್ ತಡೆಗೋಡೆ ಮೂಲಕ ಅವಕಾಶ ನೀಡಲಾಗುತ್ತಿದೆ. 9 ತಿಂಗಳಿನಿಂದ ಜೈಲಿನಲ್ಲಿದ್ದಾರೆ ಎಂದು ವಾದ ಮಂಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಕ್ವಾರಂಟೈನ್ ಸೆಲ್ ಕೂಡ ಜೈಲಿನ ಒಂದು ಭಾಗವೇ ಆಗಿದೆ. ಸ್ಪೆಷಲ್ ಟ್ರೀಟ್‌ಮೆಂಟ್ ಸಿಗಬಾರದು ಎಂಬ ಉದ್ದೇಶದಿಂದ ಅಲ್ಲಿ ಇರಿಸಿರಬಹುದು. ಜೈಲು ಮ್ಯಾನ್ಯುಯಲ್ ಪ್ರಕಾರ ಅಗತ್ಯ ಸೌಲಭ್ಯಗಳನ್ನು ನೀಡಲು ಸೂಚಿಸುತ್ತೇವೆ ಎಂದರು.

ಪ್ರಕರಣದಲ್ಲಿ ಒಟ್ಟು 272 ಸಾಕ್ಷಿಗಳಿದ್ದು, ಈವರೆಗೆ ಕೇವಲ 10 ಸಾಕ್ಷಿಗಳ ವಿಚಾರಣೆ ಮಾತ್ರ ನಡೆದಿದೆ ಎಂದು ತಿಳಿದ ನ್ಯಾಯಪೀಠವು ವಿಚಾರಣೆ ವಿಳಂಬವಾಗುತ್ತಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿತು. ಪ್ರಾಸಿಕ್ಯೂಷನ್ ವಾದ ಮಂಡಿಸಿದ ಹಿರಿಯ ವಕೀಲ ಸಿದ್ದಾರ್ಥ ಲೂತ್ರಾ, 17 ಆರೋಪಿಗಳ ಪರ ವಕೀಲರು ಪಾಟಿಸವಾಲು ಮಾಡುವಾಗ ಒಂದೊಂದು ಸಾಕ್ಷಿಗೆ 5–6 ದಿನ ತೆಗೆದುಕೊಳ್ಳುತ್ತಿದ್ದಾರೆ. ಇದರಿಂದ ವಿಳಂಬವಾಗುತ್ತಿದೆ ಎಂದರು. ಇನ್ನೂ 172ಕ್ಕೂ ಹೆಚ್ಚು ಸಾಕ್ಷಿಗಳ ವಿಚಾರಣೆ ಬಾಕಿ ಇರುವಾಗ ಇಷ್ಟು ಬೇಗ ಜಾಮೀನು ತೀರ್ಮಾನಕ್ಕೆ ಬರಲು ಹೇಗೆ ಸಾಧ್ಯ. ಟ್ರಯಲ್ ನಿಧಾನವಾಗಿರುವುದು ಸತ್ಯ ಎಂದು ಅಭಿಪ್ರಾಯಪಟ್ಟರು. ದರ್ಶನ್ ಪರ ವಕೀಲ ಮುಕುಲ್ ರೊಹಟಗಿ ಅವರ ವಾದ ಮತ್ತು ಸರ್ಕಾರದ ಪರ ವಾದಗಳನ್ನು ಆಲಿಸಿದ ನ್ಯಾಯಾಲಯ ಸದ್ಯಕ್ಕೆ ಅರ್ಹತೆ ಆಧಾರದ ಮೇಲೆ ಜಾಮೀನು ನೀಡಲು ಸಾಧ್ಯವಿಲ್ಲ ಎಂದು ಹೇಳಿ ಕೆಲ ಮಹತ್ವದ ಆದೇಶ ನೀಡಿ ಜಾಮೀನು ಅರ್ಜಿಯನ್ನು ಇತ್ಯರ್ಥ ಮಾಡಿತು.

ಜೂ.21ಕ್ಕೆ ಮತ್ತೆ ನೀಟ್

ಪ್ರಶ್ನೆ ಪತ್ರಿಕೆ ಸೋರಿಕೆ ತಡೆಗಟ್ಟುವ ಉದ್ದೇಶದಿಂದ ಕಂಪ್ಯೂಟರ್ ಆಧಾರಿತ ಆನ್‌ಲೈನ್ ಪರೀಕ್ಷೆ ನಡೆಸಲಾಗುವುದು. ಮೇ 3ರಂದು ನಡೆದ ನೀಟ್ ಪರೀಕ್ಷೆ ಬಳಿಕ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಗೆ ದೂರು ಬಂದಿತ್ತು. ಊಹಾತ್ಮಕ ಪ್ರಶ್ನೆಗಳ ಹೆಸರಿನಲ್ಲಿ ಮೂಲ ಪ್ರಶ್ನೆ ಪತ್ರಿಕೆ ಸೋರಿಕೆ ಆಗಿರುವುದು ಖಚಿತಗೊಂಡಿತು. ನಂತರ ಪರೀಕ್ಷೆಯನ್ನು ರದ್ದುಪಡಿಸಲಾಯಿತು. ಪರೀಕ್ಷಾ ಮಾಫಿಯಾದಿಂದ ವಿದ್ಯಾರ್ಥಿಗಳು ತಮ್ಮ ಹಕ್ಕುಗಳಿಂದ ವಂಚಿತರಾಗಲು ಅವಕಾಶ ನೀಡುವುದಿಲ್ಲ. ಇದು ಬಹಳ ದಿನದಿಂದ ನಡೆಯುತ್ತಿದೆ. ಜಾಲತಾಣಗಳ ಮೂಲಕ ತಪ್ಪು ಮಾಹಿತಿಗಳನ್ನು ನೀಡುತ್ತಿದ್ದು, ಅಂತಹವರನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆಗೆ ಒಳಪಡಿಸುವುದಾಗಿ ತಿಳಿಸಿದರು.

ರಾಜ್ಯ ಚುನಾವಣಾ ಆಯೋಗದಿಂದಲೇ ಎಸ್‌ಐಆರ್‌ಗೆ ಸಿಎಂ ಸಿದ್ದರಾಮಯ್ಯ ಚಿಂತನೆ

• ಕಾನೂನು ತಜ್ಞರೊಂದಿಗೆ ಸುದೀರ್ಘ ಚರ್ಚೆ • ಬಿಹಾರ, ಪಶ್ಚಿಮ ಬಂಗಾಲ ಫಲಿತಾಂಶದ ಶಾಕ್! • ಕಾನೂನು ರೂಪಿಸಿ ಸುಗ್ರೀವಾಜ್ಞೆ ಮೂಲಕ ರಾಜ್ಯ ಚುನಾವಣಾ ಆಯೋಗಕ್ಕೆ ಅಧಿಕಾರ ನೀಡಲು ಆಲೋಚನೆ

ಬೆಂಗಳೂರು, ಮೇ 15(ಕೆಎಂಶಿ)– ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಅನ್ನು ಸ್ವತಂತ್ರ ಸಂಸ್ಥೆಯಾದ ರಾಜ್ಯ ಚುನಾವಣಾ ಆಯೋಗದಿಂದಲೇ ನಡೆಸುವ ಸಾಧ್ಯಾಸಾಧ್ಯತೆ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಕಾನೂನು ತಜ್ಞರೊಂದಿಗೆ ಸುದೀರ್ಘ ಸಮಾಲೋಚನೆ ನಡೆಸಿದರು.

ಕೇಂದ್ರ ಚುನಾವಣಾ ಆಯೋಗ ಕರ್ನಾಟಕ ಸೇರಿದಂತೆ 16 ರಾಜ್ಯಗಳಲ್ಲಿ ಮತದಾರರ ಪಟ್ಟಿ ಎಸ್‌ಐಆರ್‌ಗೆ ಮುಂದಾಗಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಪ್ರತ್ಯೇಕವಾಗಿ ಪರಿಷ್ಕರಣೆ ನಡೆಸಲು ಹೊರಟಿದೆ.

ಬಿಹಾರ, ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಸಮಗ್ರ ಪರಿಷ್ಕರಣೆ ನಂತರ ನಡೆದ ವಿಧಾನ ಸಭಾ ಚುನಾವಣೆಗಳ ಫಲಿತಾಂಶ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಭಯ ಹುಟ್ಟಿಸಿದೆ. ಕೇಂದ್ರ ಸರ್ಕಾರದ ಕೈಗೊಂಬೆಯಾಗಿ ಚುನಾವಣಾ ಆಯೋಗ ಕಾರ್ಯನಿರ್ವಹಿಸುವ ಮೂಲಕ ದೊಡ್ಡ ಪ್ರಮಾಣದಲ್ಲಿ ಮತದಾರರನ್ನು ಪಟ್ಟಿಯಿಂದ ಕೈಬಿಡುವ ಸಾಧ್ಯತೆ ಇದೆ. ಎಸ್‌ಐಆರ್ ವಿರೋಧಿಸುತ್ತಲೇ ಬಂದಿರುವ ಸಿದ್ದರಾಮಯ್ಯ, ರಾಜ್ಯದಲ್ಲಿ ಸಮಗ್ರ ಪರಿಷ್ಕರಣೆಗೆ ಅವಕಾಶ ನೀಡಬಾರದೆಂದು ಈ ಹಿಂದೆಯೇ ಸಂಪುಟದ ಹಿರಿಯ ಸಚಿವರು ಹಾಗೂ ಅಧಿಕಾರಿಗಳ ಜೊತೆ ಎರಡು–ಮೂರು ಸಭೆಗಳನ್ನು ನಡೆಸಿದ್ದರು.

ಎಸ್‌ಐಆರ್ ಸಂಬಂಧ ಚರ್ಚೆ: ಮುಖ್ಯ ಚುನಾವಣಾ ಆಯೋಗ ಕರ್ನಾಟಕದಲ್ಲೂ ಎಸ್‌ಐಆರ್ ಮಾಡಲು ನಿರ್ಧರಿಸಿ, ವೇಳಾಪಟ್ಟಿ ಪ್ರಕಟಿಸುತ್ತಿದ್ದಂತೆ ಮುಖ್ಯಮಂತ್ರಿ ದಿಢೀರನೆ ಸರ್ಕಾರಿ ನಿವಾಸ ಕಾವೇರಿಯಲ್ಲಿ ಕಾನೂನು ಪರಿಣಿತರು ಮತ್ತು ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದರು. ರಾಜ್ಯ ಚುನಾವಣಾ ಆಯೋಗದಿಂದಲೇ ಮತದಾರರ ಪಟ್ಟಿ ಪರಿಷ್ಕರಣೆಗೆ ಸಂಬಂಧಿಸಿದಂತೆ ಸುಗ್ರೀವಾಜ್ಞೆ ಸಾಧ್ಯವೇ ಎಂಬ ಬಗ್ಗೆ ಪರಿಶೀಲಿಸುವಂತೆ ಕಾನೂನು ಇಲಾಖೆಗೆ ಮುಖ್ಯಮಂತ್ರಿ ಸಲಹೆ ಮಾಡಿದ್ದಾರೆ.



ಮುಖ್ಯ ಚುನಾವಣಾ ಆಯೋಗದ ನಿರ್ಧಾರವನ್ನು ಪಶ್ಚಿಮ ಬಂಗಾಳದ ಅಂದಿನ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತೀವ್ರ ವಿರೋಧಿಸಿದರೂ ಪರಿಷ್ಕರಣೆ ತಡೆಯಲು ಆಗಲಿಲ್ಲ. ಸುಮಾರು 92 ಲಕ್ಷ ಮತಗಳನ್ನು ರದ್ದುಪಡಿಸಲಾಗಿತ್ತು. ಮಮತಾ ನ್ಯಾಯಾಲಯದಲ್ಲಿ ಹೋರಾಟ ಮಾಡಿದರೆ ಹೊರತು ಸರ್ಕಾರದ ಮಟ್ಟದಲ್ಲಿ ಕಾನೂನು ನಿರ್ಧಾರಗಳನ್ನು ಕೈಗೊಳ್ಳಲಿಲ್ಲ.

ಸುಗ್ರೀವಾಜ್ಞೆಗೂ ಚಿಂತನೆ: ರಾಜ್ಯ ಸರ್ಕಾರದ ವತಿಯಿಂದಲೇ ಕಾನೂನು ರೂಪಿಸಿ ಪರ್ಯಾಯವಾಗಿ ಮತದಾರರ ಪಟ್ಟಿ ಪರಿಷ್ಕರಣೆ ಮಾಡಲು ರಾಜ್ಯ ಚುನಾವಣಾ ಆಯೋಗಕ್ಕೆ ಅಧಿಕಾರ ನೀಡಲು ಸುಗ್ರೀವಾಜ್ಞೆ ತರೋಣ ಎಂಬುದಾಗಿ ಕಾನೂನು ಇಲಾಖೆಗೆ ಹೇಳಿದ್ದಾರೆ.

ಕರ್ನಾಟಕದಲ್ಲಿ ಜೂನ್ 30ರಿಂದ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ನಡೆಯಲಿದೆ, ಅದಕ್ಕೂ ಮುನ್ನವೇ ರಾಜ್ಯ ಚುನಾವಣಾ ಆಯೋಗಕ್ಕೆ ಅಧಿಕಾರ ನೀಡುವ ಬಗ್ಗೆ ತಮಗೆ ವರದಿ ನೀಡುವುದಾಗಿ ಇಲಾಖೆ ಮುಖ್ಯಮಂತ್ರಿ ಅವರಿಗೆ ತಿಳಿಸಿದೆ.

ನೀಟ್–ಯುಜಿ 2026 ಪ್ರಶ್ನೆ ಪತ್ರಿಕೆ ಲೀಕ್ ಕಿಂಗ್ ಪಿನ್, ಪುಣೆಯ ಕೆಮಿಸ್ಟ್ರಿ 'ಲೆಕ್ಚರರ್' ಬಂಧನ

ನವದೆಹಲಿ: ನೀಟ್–ಯುಜಿ 2026 ರ ಪ್ರಶ್ನೆ ಪತ್ರಿಕೆ ಸೋರಿಕೆ ಹಿಂದಿನ ಕಿಂಗ್ ಪಿನ್ ನನ್ನು ಬಂಧಿಸಲಾಗಿದೆ ಎಂದು ಕೇಂದ್ರೀಯ ತನಿಖಾ ತಂಡ ಶುಕ್ರವಾರ ತಿಳಿಸಿದೆ. ಹಲವು ವರ್ಷಗಳಿಂದ ನೀಟ್ ಪ್ರಶ್ನೆ ಪತ್ರಿಕೆ ಸಿದ್ಧತೆಯ ಸಮಿತಿಯ ಭಾಗವಾಗಿದ್ದ ಲಾಟೂರಿನ ಕೆಮಿಸ್ಟ್ರಿ 'ಲೆಕ್ಚರರ್' ಪ್ರೊಫೆಸರ್ ಪಿ.ವಿ. ಕುಲಕರ್ಣಿ ಎಂಬುವರನ್ನು ಪುಣೆಯ ಅವರ ನಿವಾಸದಿಂದ ಬಂಧಿಸಲಾಗಿದೆ.

ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಪರವಾಗಿ ಪರೀಕ್ಷಾ ಪ್ರಕ್ರಿಯೆಯೊಂದಿಗೆ ತೊಡಗಿಸಿಕೊಂಡಿದ್ದ ಕುಲಕರ್ಣಿಗೆ ನೀಟ್–ಯುಜಿ 2026 ಪ್ರಶ್ನೆ ಪತ್ರಿಕೆಗಳನ್ನು ಪಡೆಯಲು ಅವಕಾಶವಿತ್ತು ಅದನ್ನು ಬಳಸಿಕೊಂಡು ತಮ್ಮ ಮನೆಯಲ್ಲಿ ವಿಶೇಷ ತರಬೇತಿ ತರಗತಿಗಳನ್ನು ನಡೆಸುತ್ತಿದ್ದರು. ಅಲ್ಲಿ ಪರೀಕ್ಷೆಗೂ ಮುನ್ನಾ ಪ್ರಶ್ನೆಗಳು ಮತ್ತು ಉತ್ತರಗಳನ್ನು ಹಂಚಿಕೊಳ್ಳಲಾಗುತ್ತಿತ್ತು ಎಂದು ಸಿಬಿಐ ಆರೋಪಿಸಿದೆ. 2026 ರ ಏಪ್ರಿಲ್ ಕೊನೆಯ ವಾರದಲ್ಲಿ, ಕುಲಕರ್ಣಿ ಮತ್ತೊಬ್ಬ ಆರೋಪಿ ಮನೀಷಾ ವಾಘ್ಮರೆ ಸಹಾಯದಿಂದ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿದ್ದರು ಎಂದು ಸಿಬಿಐ ಹೇಳಿದೆ. ವಾಘ್ಮರೆ ಅವರನ್ನು ಮೇ 14 ರಂದು ಏಜೆನ್ಸಿ ಬಂಧಿಸಿತ್ತು.

ಪುಣೆಯಲ್ಲಿರುವ ತಮ್ಮ ನಿವಾಸದಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ನಡೆಸುತ್ತಿದ್ದ ಕುಲಕರ್ಣಿ, ಪರೀಕ್ಷೆಗೆ ಸಂಬಂಧಿಸಿದ ಪ್ರಶ್ನೆಗಳು, ಸರಿಯಾದ ಉತ್ತರಗಳನ್ನು ಹೇಳುತ್ತಿದ್ದರು. ಅವರು ಹೇಳಿದ ಪ್ರಶ್ನೆಗಳನ್ನು ವಿದ್ಯಾರ್ಥಿಗಳು ತಮ್ಮ ನೋಟ್‌ಬುಕ್‌ಗಳಲ್ಲಿ ಕೈಬರಹದಲ್ಲಿ ಬರೆದುಕೊಂಡಿದ್ದರು. 03.05.2026 ರಂದು ನಡೆದ ನೀಟ್–ಯುಜಿ 2026 ಪರೀಕ್ಷೆಯ ಪ್ರಶ್ನೆ ಪತ್ರಿಕೆಯಲ್ಲಿಯೂ ಅದೇ ಪ್ರಶ್ನೆಗಳಿದ್ದವು ಎಂದು ಸಿಬಿಐ ಹೇಳಿಕೆಯಲ್ಲಿ ತಿಳಿಸಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಜೈಪುರ, ಗುರುಗ್ರಾಮ್, ನಾಸಿಕ್, ಪುಣೆ ಮತ್ತು ಅಹಲ್ಯಾನಗರದಿಂದ ಇದುವರೆಗೆ ಏಳು ಆರೋಪಿಗಳನ್ನು ಬಂಧಿಸಲಾಗಿದೆ. ಈ ಪೈಕಿ ಐದು ಆರೋಪಿಗಳನ್ನು ಈಗಾಗಲೇ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದ್ದು, ವಿವರವಾದ ವಿಚಾರಣೆಗಾಗಿ ಏಳು ದಿನಗಳ ಪೊಲೀಸ್ ಕಸ್ಟಡಿಗೆ ನೀಡಲಾಗಿದೆ. ಗುರುವಾರ ಬಂಧಿಸಲಾದ ಉಳಿದ ಇಬ್ಬರು ಆರೋಪಿಗಳನ್ನು ಪುಣೆಯ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗುತ್ತಿದ್ದು, ನಂತರ ಅವರನ್ನು ದೆಹಲಿಗೆ ಸ್ಥಳಾಂತರಿಸಲಾಗುವುದು ಎಂದು ಸಿಬಿಐ ಹೇಳಿದೆ.

ಮೇ 26ರಿಂದ ಕೇರಳಕ್ಕೆ ಮುಂಗಾರು ಪ್ರವೇಶ

ನವದೆಹಲಿ: ಈ ವರ್ಷದ ನೈಋತ್ಯ ಮುಂಗಾರು ಮೇ 26ರಿಂದ ಕೇರಳ ಪ್ರವೇಶಿಸುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಪ್ರತಿವರ್ಷ ಸಾಮಾನ್ಯವಾಗಿ ಜೂನ್ 1ರಂದು ಕೇರಳಕ್ಕೆ ಮುಂಗಾರು ಆಗಮಿಸುತ್ತದೆ. ಆದರೆ, ಈ ಬಾರಿ ಐದು ದಿನ ಮುಂಚಿತವಾಗಿ ಆರಂಭವಾಗುವ ನಿರೀಕ್ಷೆ ಇದೆ.

ಹವಾಮಾನ ಇಲಾಖೆಯ ಪ್ರಕಾರ, ಮೇ 26ಕ್ಕೆ ನಾಲ್ಕು ದಿನಗಳ ವ್ಯತ್ಯಾಸದ ಸಾಧ್ಯತೆಯೊಂದಿಗೆ ಮುಂಗಾರು ಕೇರಳ ಪ್ರವೇಶಿಸಬಹುದು ಎಂದು ಅಂದಾಜಿಸಲಾಗಿದೆ. ಕಳೆದ ವರ್ಷವೂ ಮೇ 24ರಂದು ಮುಂಗಾರು ಕೇರಳ ಪ್ರವೇಶಿಸಿತ್ತು.

ಭಾರತದಲ್ಲಿ ಸಾಮಾನ್ಯವಾಗಿ ನೈಋತ್ಯ ಮುಂಗಾರು ಪ್ರವೇಶಿಸುವ ಮೊದಲ ಹಂತವೇ ಕೇರಳ. ಇದನ್ನೇ ದೇಶದಲ್ಲಿ ಮಳೆಗಾಲ ಆರಂಭವಾಗುವ ಪ್ರಮುಖ ಸೂಚಕವಾಗಿ ಪರಿಗಣಿಸಲಾಗುತ್ತದೆ. ಮುಂಗಾರು ಆರಂಭವಾದ ಬಳಿಕ ಹಂತಹಂತವಾಗಿ ಕರ್ನಾಟಕ ಸೇರಿದಂತೆ ಇತರ ರಾಜ್ಯಗಳಿಗೆ ಮುಂಗಾರು ಮಳೆ ವಿಸ್ತರಿಸುತ್ತದೆ. ಈ ವರ್ಷ ದೇಶದಲ್ಲಿ ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಪೆಸಿಫಿಕ್ ಮಹಾಸಾಗರದಲ್ಲಿ ರೂಪುಗೊಳ್ಳುತ್ತಿರುವ ಎಲ್ ನಿನೊ ಪರಿಣಾಮದಿಂದ ಮುಂಗಾರು ದುರ್ಬಲವಾಗುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಎಲ್ ನಿನೊ ಎಂದರೇನು: ಎಲ್ ನಿನೊ ಎಂದರೆ ಪೆಸಿಫಿಕ್ ಮಹಾಸಾಗರದ ಮಧ್ಯ ಮತ್ತು ಪೂರ್ವ ಭಾಗದಲ್ಲಿ ಸಮುದ್ರದ ಮೇಲ್ಮೈ ಉಷ್ಣತೆ ಸಾಮಾನ್ಯಕ್ಕಿಂತ ಹೆಚ್ಚಾಗುವ ಹವಾಮಾನ ಸ್ಥಿತಿ. ಇದರ ಪರಿಣಾಮದಿಂದ ಜಗತ್ತಿನ ಹಲವೆಡೆ ಹವಾಮಾನದಲ್ಲಿ ದೊಡ್ಡ ಬದಲಾವಣೆಗಳು ಉಂಟಾಗುತ್ತವೆ. ಎಲ್ ನಿನೊ ಹವಾಮಾನ ಸ್ಥಿತಿ ಉಂಟಾದಾಗ ಸಾಮಾನ್ಯವಾಗಿ ಭಾರತದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ. ಇದರಿಂದ ಕೃಷಿ ಚಟುವಟಿಕೆಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆ ಇದೆ.

ಮೈಸೂರು ಮಿತ್ರ

ಮೈಸೂರಲ್ಲಿ ಮಾವು, ಹಲಸು ಮೇಳಕ್ಕೆ ಚಾಲನೆ

ರಾಸಾಯನಿಕ ಮುಕ್ತ ನೈಸರ್ಗಿಕವಾಗಿ ಮಾಗಿಸಿದ ಹಣ್ಣುಗಳ ಮಾರಾಟ

● ಒಂದೇ ಸ್ಥಳದಲ್ಲಿ ವಿವಿಧ ತಳಿಯ ಮಾವು, ಹಲಸು ಲಭ್ಯ ● ರೈತರಿಂದ ನೇರ ಮಾರಾಟ, ಮಧ್ಯವರ್ತಿಗಳಿಲ್ಲದೆ ಗ್ರಾಹಕರಿಂದ ನೇರ ಖರೀದಿ

ಮೈಸೂರು, ಮೇ15(ಬಿಎಲ್‌ಯು)– ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿಯ ಕುಪ್ಪಣ್ಣ ಪಾರ್ಕ್‌ನಲ್ಲಿ ಇಂದಿನಿಂದ ಮೂರು ದಿನಗಳ ಮಾವು ಮತ್ತು ಹಲಸು ಮಾರಾಟ ಮೇಳ ಆರಂಭವಾಗಿದೆ. ತೋಟಗಾರಿಕೆ ಇಲಾಖೆ ಆಯೋಜಿಸಿರುವ ಈ ಮೇಳದಲ್ಲಿ ವಿವಿಧ ರೀತಿಯ ಮಾವು ಹಾಗೂ ಹಲಸಿನ ಹಣ್ಣುಗಳು ಗ್ರಾಹಕರನ್ನು ಕೈಬೀಸಿ ಕರೆಯುತ್ತಿದೆ.

ಹಣ್ಣುಗಳ ರಾಜ ಮಾವು ಹಾಗೂ ಪೌಷ್ಟಿಕಾಂಶದ ಮತ್ತು ಔಷಧ ಗುಣವಿರುವ ಹಲಸಿನ ಹಣ್ಣುಗಳ ಮಾರಾಟ ಮತ್ತು ಪ್ರದರ್ಶನ ಹಣ್ಣು ಪ್ರಿಯರನ್ನು ಆಕರ್ಷಿಸುತ್ತಿದೆ. ಒಂದೇ ಸ್ಥಳದಲ್ಲಿ ವಿವಿಧ ರೀತಿಯ ಮಾವು ಹಾಗೂ ಹಲಸಿನ ಹಣ್ಣುಗಳನ್ನು ವೀಕ್ಷಿಸುವ ಹಾಗೂ ಖರೀದಿಸುವ ಅವಕಾಶ ಗ್ರಾಹಕರಿಗೆ ದೊರೆಯುತ್ತಿದೆ.

ತೋಟಗಾರಿಕೆ ಹಿರಿಯ ಸಹಾಯಕ ನಿರ್ದೇಶಕಿ ಮಮತ ರೈತರೊಡನೆ ಮೇಳಕ್ಕೆ ಚಾಲನೆ ನೀಡಿದರು. ಮೂರು ದಿನಗಳ ಕಾಲ ನಡೆಯುವ ಮೇಳ ವು ಬೆಳಿಗ್ಗೆ 9 ರಿಂದ ರಾತ್ರಿ 9 ಗಂಟೆವರೆಗೆ ತೆರೆದಿರಲಿದೆ.

ಮಧ್ಯವರ್ತಿಗಳಿಗೆ ಅವಕಾಶವಿಲ್ಲದೆ ಮಾವು ಬೆಳೆಯುವ ರೈತರು ಹಾಗೂ ಗ್ರಾಹಕರ ನಡುವೆ ನೇರ ಸಂಪರ್ಕ ಕಲ್ಪಿಸಲು ಉತ್ತಮ ಮಾರುಕಟ್ಟೆ ವ್ಯವಸ್ಥೆ ರೂಪಿಸಲಾಗಿದೆ. ಮಾವು ಬೆಳೆಯುವ ರೈತರಿಗೆ ನಷ್ಟವಿಲ್ಲದಂತೆ ಗ್ರಾಹಕರಿಗೆ ಉತ್ತಮ ಬೆಲೆಯಲ್ಲಿ ಖರೀದಿಸಲು ತೋಟಗಾರಿಕೆ ಇಲಾಖೆ ಮೇಳವನ್ನು ಆಯೋಜನೆ ಮಾಡಿದೆ.



ಮೈಸೂರಿನ ಹಾರ್ಡಿಂಜ್ ವೃತ್ತದ ಬಳಿಯ ಕುಪ್ಪಣ್ಣ ಪಾರ್ಕ್‌ನಲ್ಲಿ ಶುಕ್ರವಾರದಿಂದ ಮಾವು, ಹಲಸು ಮೇಳ ಏರ್ಪಡಿಸಲಾಗಿದ್ದು, ಫಲ ಪ್ರಿಯರು ತೀವ್ರಾಸಕ್ತಿಯಿಂದ ಖರೀದಿಯಲ್ಲಿ ತೊಡಗಿದ್ದಾರೆ.

ಕುಪ್ಪಣ್ಣ ಪಾರ್ಕ್‌ನ ವಿಶಾಲ ಮೈದಾನದಲ್ಲಿ 28 ಮಳಿಗೆಗಳನ್ನು ತೆರೆದಿದ್ದು, ಮೈಸೂರು, ಮಂಡ್ಯ ಹಾಗೂ ರಾಮನಗರ ಜಿಲ್ಲೆಯ ಮಾವು ಬೆಳೆಗಾರರು ಮಾವು ಹಾಗೂ ಹಲಸಿನ ಹಣ್ಣುಗಳನ್ನು ಮಾರಾಟ ಮಾಡುತ್ತಿದ್ದಾರೆ.

ಯಾವುದೇ ರಾಸಾಯನಿಕ ವಸ್ತುಗಳನ್ನು ಬಳಸದೆ ನೈಸರ್ಗಿಕವಾಗಿ ಮಾಗಿಸಿರುವ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದೆ. ಇಂತಹ ಹಣ್ಣುಗಳು ಯಾವುದೇ ರೀತಿಯ ಅಡ್ಡ ಪರಿಣಾಮವಿಲ್ಲದೆ ಆರೋಗ್ಯಕ್ಕೆ ಪೂರಕವಾಗಿದೆ.

ಮಾವು ಹಾಗೂ ಹಲಸು ಮೇಳದಲ್ಲಿ ವಿವಿಧ ರೀತಿಯ ಹೂವಿನ ಗಿಡಗಳ ಮಾರಾಟವೂ ಇದೆ.

15 ವಿವಿಧ, ವಿಶಿಷ್ಟ ತಳಿಗಳ ಮಾವು, ಹಲಸು ಮಾರಾಟ

ಮಾವು ಮೇಳದಲ್ಲಿ ಸುಮಾರು 15 ವಿವಿಧ ರೀತಿಯ ಮಾವುಗಳನ್ನು ಮಾರಾಟ ಮಾಡಲಾಗುತ್ತಿದೆ.

ಬಾದಾಮಿ, ರಸಪೂರಿ, ಮಲ್ಲಿಕಾ, ತೋತಾಪುರಿ, ಮಲಗೋವಾ, ದಶಹರಿ,, ರುಮಾನಿ, ಸಿಂಧೂರ, ಜೀರಿಗೆ, ಗುಲಾಬ್ ಖಸ್, ವಾಲಯ, ರತ್ನಪುರಿ ಆಲ್ಫೋನ್ಸೊ, ಸುಂದರಿ, ಲಾಲ್ ಬಾಷಾ, ಬಂಗನಪಲ್ಲಿ, ಕಾಲಪಾಡಿ ಹಣ್ಣುಗಳು ಲಭ್ಯವಿದೆ.

ಬಹಳ ವಿಶಿಷ್ಟ ತಳಿಯ ಮಾವಿನ ಹಣ್ಣುಗಳಾದ ಸಕ್ಕರೆ ಗುತ್ತಿ, ಪಸಂದ್, ಹಿಮಾಮ್, ಕೇಸರ್ ಹಣ್ಣುಗಳು ಕೂಡ ಮೇಳದಲ್ಲಿ ದೊರೆಯಲಿದೆ. ವಿಶಿಷ್ಟ ತಳಿಯ ಈ ಹಣ್ಣುಗಳು ಬಹಳ ಸಿಹಿ ಇದ್ದು, ಬಾಯಲ್ಲಿ ನೀರೂರಿಸುತ್ತವೆ. ಇನ್ನು ಈ ಹಣ್ಣುಗಳನ್ನು ಸವಿದರೆ ರುಚಿಯನ್ನು ಪದಗಳಲ್ಲಿ ವರ್ಣಿಸುವುದು ಅಸಾಧ್ಯ

ಮೇಳದಲ್ಲಿ ಹಲಸಿನ ಹಣ್ಣುಗಳನ್ನು ಕೂಡ ಮಾರಾಟ ಮಾಡಲಾಗುತ್ತಿದೆ. ಚಂದ್ರ ಹಲಸು ಹಾಗೂ ಮೈಸೂರು ತಳಿಯ ಹಲಸಿನ ಹಣ್ಣುಗಳನ್ನು ಮಾರಾಟ ಮಾಡಲಾಗುತ್ತಿದೆ. ಒಂದೇ ಸ್ಥಳದಲ್ಲಿ ವಿವಿಧ ರೀತಿಯ ಹಣ್ಣುಗಳು ದೊರೆಯುವುದರಿಂದ ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಮೇಳಕ್ಕೆ ಆಗಮಿಸುತ್ತಿದ್ದಾರೆ.

ಈ ಬಾರಿ ಮೈಸೂರು ಜಿಲ್ಲೆಯಲ್ಲಿ 15 ಸಾವಿರ ಟನ್ ಮಾವಿನ ಫಸಲು

ಮೈಸೂರು ಜಿಲ್ಲೆಯಲ್ಲಿ ಈ ಬಾರಿ ಅಂದಾಜು 15,228 ಟನ್ ಮಾವಿನ ಹಣ್ಣು ಫಸಲು ಇದೆ.

ಬೆಂಗಳೂರಿನ ಚಿಕ್ಕಬಳ್ಳಾಪುರ, ದೊಡ್ಡ ಬಳ್ಳಾಪುರ, ಚಿಂತಾಮಣಿ ದ್ರಾಕ್ಷಿ ಬೆಳೆಗೆ ಹೇಗೆ ಪ್ರಸಿದ್ಧಿಯಾಗಿದೆಯೊ ಹಾಗೆಯೇ ಮೈಸೂರು ವಿವಿಧ ತಳಿಯ ಮಾವಿನ ಹಣ್ಣಿಗೆ ಪ್ರಖ್ಯಾತಿ ಹೊಂದಿದೆ.

ಮೈಸೂರು ಜಿಲ್ಲೆಯಲ್ಲಿ ಈ ಬಾರಿ 2,575 ಎಕರೆಯಲ್ಲಿ ಮಾವು ಬೆಳೆಯಲಾಗಿದೆ. ಸುಮಾರು 15,228 ಟನ್ ಮಾವಿನ ಫಸಲು ಬಂದಿದೆ.

ಮೈಸೂರು ತಾಲೂಕಿನ ಕೇರ್ಗಳ್ಳಿ, ನಂಜರಾಜನಹುಂಡಿ, ಮೂಗನಹುಂಡಿ, ಬೋಗಾದಿ, ಯಡಹಳ್ಳಿ, ಧನಗಳ್ಳಿ, ಸಾಲುಂಡಿ, ಉದ್ಬೂರು, ಜಯಪುರ, ವಾಜಮಂಗಲ, ಹೊಸಹುಂಡಿ, ಮಾರಶೆಟ್ಟಿಹಳ್ಳಿ, ಉತ್ತನಹಳ್ಳಿ ಸೇರಿದಂತೆ ನೂರಾರು ಗ್ರಾಮಗಳಲ್ಲಿ ಈ ಹಿಂದೆ ಯಥೇಚ್ಛವಾಗಿ ಮಾವು ಬೆಳೆಯಲಾಗುತ್ತಿತ್ತು.

ವರ್ಷಕ್ಕೊಮ್ಮೆ ಬಂಪರ್ ಬೆಳೆಯಿಂದ ರೈತರು ಒಳ್ಳೆಯ ಲಾಭ ಗಳಿಸುತ್ತಿದ್ದರು. ಇದರಿಂದ ಮೈಸೂರು ಸುತ್ತಮುತ್ತಲಿನ ಮಾವು ದೇಶದ ಹಲವು ರಾಜ್ಯಗಳಲ್ಲಿ ಮಾರಾಟವಾಗುವುದರ ಜೊತೆಗೆ ವಿದೇಶಗಳಿಗೂ ರಫ್ತಾಗುತ್ತಿತ್ತು.

ಆದರೆ ಇತ್ತೀಚಿನ ವರ್ಷಗಳಲ್ಲಿ ಮುಡಾ ಬಡಾವಣೆಗಳ ನಿರ್ಮಾಣಕ್ಕಾಗಿ ರೈತರ ಭೂಮಿ ಸ್ವಾಧೀನಪಡಿಸಿಕೊಂಡಿದೆ. ಕೆಲವು ರೈತರು ಹಸನಾಗಿ ಬೆಳೆದಿದ್ದ ಮಾವಿನ ತೋಟಗಳನ್ನು ಖಾಸಗಿ ವ್ಯಕ್ತಿಗಳಿಗೆ ಮಾರಾಟ ಮಾಡಿದ್ದು, ಇಂತಹ ಜಮೀನಿನಲ್ಲಿ ಬೆಳೆದಿದ್ದ ಮಾವಿನ ಮರಗಳನ್ನು ಕಡಿದು ಬಡಾವಣೆ ನಿರ್ಮಿಸಲಾಗಿದೆ.

ಇದರಿಂದ ಮೈಸೂರು ತಾಲೂಕಿನಲ್ಲಿ ಸಾವಿರಾರು ಟನ್ ಮಾವು ಬೆಳೆ ಇಲ್ಲದಂತಾಗಿದೆ. ಒಂದು ಕಾಲದಲ್ಲಿ ಸಮೃದ್ಧ ಮಾವು ಬೆಳೆದು ಮಾರಾಟ ಮಾಡುತ್ತಿದ್ದ ಮೈಸೂರಿನ ಸುತ್ತಮುತ್ತಲಿನ ಗ್ರಾಮದ ರೈತರು ಈಗ ಅವರೇ ಮಾವಿನ ಹಣ್ಣು ಖರೀದಿಸುವ ಪರಿಸ್ಥಿತಿಗೆ ಬಂದಿದ್ದಾರೆ.


ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಗವತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕೆಡಿ (ಕ)	4 ಪ್ರದರ್ಶನಗಳು
ಲಿಡೋ	
ಶಿಖಂಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಶೇರ್ (ಕ)	4 ಪ್ರದರ್ಶನಗಳು

ವ್ಯವಸ್ಥೆ ನಿರ್ಲಕ್ಷ್ಯಕ್ಕೆ ಗುರಿಯಾದ ಶ್ರೀ ಕುವೆಂಪು ಜ್ಞಾನ ತಾಣ

ರಾಷ್ಟ್ರಕವಿ ಪ್ರತಿಮೆ ಸಂರಕ್ಷಣೆ, ಸಮರ್ಪಕ ಗ್ರಂಥಾಲಯ ಸೇವೆ, ಉದ್ಯಾನ ಅಭಿವೃದ್ಧಿಗೆ ಆಗ್ರಹ

ವಿಶ್ವಮಾನವ ಕುವೆಂಪು ಕ್ಷೇಮಾಭಿವೃದ್ಧಿ ಟ್ರಸ್ಟ್‌ನಿಂದ ನಗರ ಪಾಲಿಕೆಗೆ ಮನವಿ



ಕುವೆಂಪು ಜ್ಞಾನತಾಣ



ಹೆಚ್.ಕೆ.ರಾಮು

ಮೈಸೂರು, ಮೇ 15– ಮೈಸೂರು ಕುವೆಂಪು ನಗರದಲ್ಲಿನ ಶ್ರೀ ಕುವೆಂಪು ಜ್ಞಾನ ತಾಣದ ಸಮರ್ಪಕ ನಿರ್ವಹಣೆಗೆ ವಿಶ್ವಮಾನವ ಕುವೆಂಪು ಕ್ಷೇಮಾಭಿವೃದ್ಧಿ ಟ್ರಸ್ಟ್ ಆಗ್ರಹಿಸಿದೆ.

ಮೈಸೂರು ಮಹಾ ನಗರಪಾಲಿಕೆ ಆಯುಕ್ತರಿಗೆ ಮನವಿ ಮಾಡಿರುವ ಟ್ರಸ್ಟ್ ಅಧ್ಯಕ್ಷ ಹೆಚ್.ಕೆ. ರಾಮು, ಕುವೆಂಪು ಪ್ರತಿಮೆ ಸಂರಕ್ಷಣೆ ಜೊತೆಗೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ದ್ದಾರೆ.

ವಿಶ್ವಮಾನವ ಜೋಡಿರಸ್ತೆ ಹಾಗೂ ಚಿತ್ರಭಾನು ರಸ್ತೆ ನಡುವಿನ ಶ್ರೀ ಕುವೆಂಪು ಜ್ಞಾನ ತಾಣ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ರಾಷ್ಟ್ರಕವಿ ಕುವೆಂಪು ಅವರ ಪ್ರತಿಮೆಯು ರಕ್ಷಣೆಯಿಲ್ಲದೆ ಶಿಥಿಲಾವಸ್ಥೆ ತಲುಪುತ್ತಿದೆ. ಪಕ್ಷಿಗಳ ಪಿಕ್ಕೆಯಿಂದ ಸುಂದರವಾದ ಪ್ರತಿಮೆ ವಿರೂಪಗೊಳ್ಳುತ್ತಿದೆ. ಇಲ್ಲಿನ 'ಗೋಪುರ', ಮೆಟ್ಟಿಲುಗಳು ಸೇರಿದಂತೆ ಸುತ್ತಮುತ್ತಲ ಪ್ರದೇಶದಲ್ಲೆಲ್ಲಾ ಪಕ್ಷಿಗಳ ಪಿಕ್ಕೆ, ಮಕ್ಕ, ಕಸಕಡ್ಡಿ ಹರಡಿದೆ. ನಿರ್ವಹಣೆ ಇಲ್ಲದೆ ಉದ್ಯಾನವನವೂ ಹಾಳಾಗಿದೆ. ಇಲ್ಲಿ ಸ್ವಚ್ಛತೆಯೇ ಮರೀಚಿಕೆಯಾಗಿದೆ. ಇಲ್ಲಿನ ಗ್ರಂಥಾಲಯದ ಪೀಠೋಪಕರಣ ಹಾಳಾಗಿದ್ದು, ಕಿಟಕಿ–ಬಾಗಿಲುಗಳು ಕಾಣೆಯಾಗಿವೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಕವಿ ಕುವೆಂಪು ಅವರ ಪ್ರತಿಮೆಯುಳ್ಳ ನಿರ್ಮಾಣ ಅವ್ಯವಸ್ಥೆಯ ಗೂಡಾಗಿರುವುದು ದುರ್ದೈವದ ಸಂಗತಿ. ಇದು ಕುವೆಂಪು ಅವರ ಅಭಿಮಾನಿಗಳು ಸೇರಿದಂತೆ ನಾಗರಿಕರಿಗೆ ಬೇಸರ ತರಿಸಿದೆ. ಈಗಲಾದರೂ ಮೈಸೂರು ಮಹಾ ನಗರ ಪಾಲಿಕೆ ಕಣ್ತೆರೆದು ನೋಡಬೇಕು. ಕುವೆಂಪು ಪ್ರತಿಮೆ ರಕ್ಷಣೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಬೇಕು. ಗ್ರಂಥಾಲಯವನ್ನು ಸುಸಜ್ಜಿತಗೊಳಿಸಿ, ಓದುಗರಿಗೆ ಅನುಕೂಲ ಮಾಡಿಕೊಡಬೇಕು. ಹಾಗೆಯೇ ಇಲ್ಲಿನ ಕಿಟಕಿ–ಬಾಗಿಲು ನಾಪತ್ತೆ ಸಂಬಂಧ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು. ಇಲ್ಲಿನ ಉದ್ಯಾನದಲ್ಲಿ ಅಲಂಕಾರಿಕ ಹಾಗೂ ಇಲ್ಲಿಗೆ ಸರಿ ಹೊಂದುವ ಗಿಡ–ಮರಗಳನ್ನು ಬೆಳೆಸಿ, ಉತ್ತಮ ರೀತಿಯಲ್ಲಿ ನಿರ್ವಹಣೆ ಮಾಡಲು ಅಗತ್ಯ ಕ್ರಮ ವಹಿಸುವಂತೆ ಮನವಿ ಮಾಡಿದ್ದಾರೆ.

ಸಿಎಂ, ಡಿಸಿಎಂ ವಿರುದ್ಧ ಕೇಂದ್ರ ಸಚಿವ ಕುಮಾರಸ್ವಾಮಿ ಆರೋಪ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ



ಮೈಸೂರಿನ ಟೌನ್‌ಹಾಲ್ ಎದುರು ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಸಮಿತಿ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಮೇ 15(ಎಂಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಿಯಲ್ ಎಸ್ಟೇಟ್ ಏಜೆಂಟ್ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಏಕವಚನದಲ್ಲಿ ಸಂಬೋಧಿಸಿರುವ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಹೇಳಿಕೆ ಖಂಡಿಸಿ ಮೈಸೂರು ನಗರ(ಜಿಲ್ಲಾ) ಕಾಂಗ್ರೆಸ್ ಸಮಿತಿ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಟೌನ್‌ಹಾಲ್ ಎದುರಿನ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಶುಕ್ರವಾರ ಜಮಾವಣೆಗೊಂಡ ಕಾಂಗ್ರೆಸ್ ಕಾರ್ಯಕರ್ತರು, ಹೆಚ್‌ಡಿಕೆ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರಲ್ಲದೆ ಕೂಡಲೇ ಕ್ಷಮೆಯಾಚಿಸಬೇಕು ಎಂದು ಆಗ್ರಹಿಸಿದರು.

ಮೈಸೂರು–ಬಿಡದಿ ನಡುವೆ 7400 ಎಕರೆ ಪ್ರದೇಶದಲ್ಲಿ ಅಭಿವೃದ್ಧಿ ದೃಷ್ಟಿಯಿಂದ ರಾಜ್ಯ ಸರ್ಕಾರ ಟೌನ್‌ಶಿಪ್ ಮಾಡಲು ಮುಂದಾಗಿದೆ. ಆದರೆ, ಅಭಿವೃದ್ಧಿ ವಿರೋಧಿಯಾಗಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ತಾವು ಮುಖ್ಯಮಂತ್ರಿಯಾಗಿದ್ದಾಗ ಈ ಕಾರ್ಯ ಆಗಲಿಲ್ಲವಲ್ಲ ಎಂಬ ಅಸೂಯೆಯಿಂದ ರಾಜಕೀಯ ದ್ವೇಷ ಸಾಧಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ರಾಮನಗರ ಜಿಲ್ಲೆಯನ್ನು ಬೆಂಗಳೂರು ದಕ್ಷಿಣ ಎಂದು ಘೋಷಣೆ ಮಾಡಿ ಬಿಡದಿ ಬಳಿ 18 ಸಾವಿರ ಕೋಟಿ ರೂ.ವೆಚ್ಚದಲ್ಲಿ ಟೌನ್‌ಶಿಪ್ ನಿರ್ಮಾಣ ಮಾಡಲು ಮುಂದಾಗಿರುವುದನ್ನು ಸಹಿಸದೆ ದ್ವೇಷ ಸಾಧಿಸುತ್ತಿದ್ದಾರೆ. ಅಭಿವೃದ್ಧಿ ವಿರೋಧಿ, ಪಾರದರ್ಶಕ ಆಡಳಿತ ವಿರೋಧಿಯಾಗಿರುವ ಹೆಚ್‌ಡಿಕೆ ಅವರು ಕೂಡಲೇ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ನಗರ ವಕ್ತಾರ ಎಸ್.ರಾಜೇಶ್, ಮುಖಂಡರಾದ ಬಾಬು ರಾಜಶೇಖರ್, ಸೈಯದ್ ಫಾರೂಕ್, ಧನಪಾಲ್, ಸುನೀಲ್ ನಾರಾಯಣ, ಪೈ.ಮಹೇಶ್, ರಾಮು, ರದಿ ಉಲ್ಲಾಖಾನ್, ಮುರುಗನ್, ಮಹದೇವು, ರವಿ, ಕುರುಬಾರಹಳ್ಳಿ ಪ್ರಕಾಶ್, ಮಹಮ್ಮದ್ ಜಾಫರ್ ಮತ್ತಿತರರಿದ್ದರು.

ವಾಟಾಳ್ ವಿರುದ್ಧ ಅವಹೇಳನಕಾರಿ ಮಾತು; ಕರ್ನಾಟಕ ಸೇನಾ ಪಡೆ ಪ್ರತಿಭಟನೆ

ಮೈಸೂರು, ಮೇ 15(ಎಂಕೆ)– ಹಿರಿಯ ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್ ಅವರ ಬಗ್ಗೆ ಮಂಡ್ಯದ ಕಾರ್ಯಕರ್ತ ಶಿವಕುಮಾರ್ ಆರಾಧ್ಯ ಎಂಬುವರು ಅವಹೇಳನಕಾರಿಯಾಗಿ ಮಾತನಾಡಿರುವುದನ್ನು ಖಂಡಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಹಳೆ ಜಿಲ್ಲಾಧಿಕಾರಿ ಕಚೇರಿ ಎದುರು ಜಮಾವಣೆಗೊಂಡ ಸೇನಾ ಪಡೆಯ ಕಾರ್ಯಕರ್ತರು, ಅವಹೇಳನಕಾರಿಯಾಗಿ ಮಾತನಾಡಿರುವ ವ್ಯಕ್ತಿ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕನ್ನಡ ನಾಡಿನ ನೆಲ, ಜಲ, ಭಾಷೆ ಪರವಾಗಿ ಕಳೆದ 7 ದಶಕಗಳಿಂದ, ಹೋರಾಟ ಮಾಡುತ್ತಿರುವ ವಾಟಾಳ್ ನಾಗರಾಜ್, ರಾಜ್ಯದಲ್ಲಿ ಕನ್ನಡ ನಾಡಿನ ವಿಚಾರದಲ್ಲಿ ಏನೇ ಸಮಸ್ಯೆಯಾದರೂ ಮೊದಲು ಪ್ರತಿಭಟಿಸುತ್ತಾರೆ. ವಿನೂತನವಾಗಿ ಚಳುವಳಿಗಳನ್ನು ನಡೆಸಿ ರಾಜ್ಯ, ಕೇಂದ್ರ ಸರ್ಕಾರದ ಗಮನವನ್ನು ಸೆಳೆಯುವುದರಲ್ಲಿ ಅತ್ಯಂತ ಯಶಸ್ವಿಯಾಗಿದ್ದಾರೆ. ಇಂತಹ ಹಿರಿಯ ಹೋರಾಟಗಾರರ ಬಗ್ಗೆ ಮಂಡ್ಯದ ಶಿವಕುಮಾರ್ ಆರಾಧ್ಯ, ಹಗುರವಾಗಿ ಮಾತನಾಡಿರುವುದು ಖಂಡನೀಯ. ಈತನ ವಿರುದ್ಧ ಕೂಡಲೇ ಸುಮೋಟೋ ಕೇಸ್ ದಾಖಲಿಸಿ, ಈತನನ್ನು ಗಡಿಪಾರು ಮಾಡಬೇಕು ಎಂದು ಆಗ್ರಹಿಸಿದರು.

ವಾಕ್ ಸ್ವಾತಂತ್ರ್ಯ ಇದೆ ಎಂದು ಯಾವ ವ್ಯಕ್ತಿಯು ಇನ್ನೊಬ್ಬರ ವಿಷಯದಲ್ಲಿ ಇಷ್ಟೊಂದು ಹಗುರವಾಗಿ ಮಾತನಾಡಬಾರದು. ಇಂತಹದ್ದಕ್ಕೆ ಕಡಿವಾಣ ಹಾಕಬೇಕು. ಹಾಗೆಯೇ ಸರ್ಕಾರ ಈತನನ್ನು ಈ ಕೂಡಲೇ ಬಂಧಿಸಬೇಕು ಎಂದು ಒತ್ತಾಯಿಸಿದರು.



ಕರ್ನಾಟಕ ಸೇನಾ ಪಡೆ ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಕೃಷ್ಣಪ್ಪ, ಪ್ರಜೀಶ್, ಸಿಂಧುವಳ್ಳಿ ಶಿವಕುಮಾರ್, ಕೆ.ಎನ್.ನಾಗೇಗೌಡ, ಹೆಚ್.ಗಿರೀಶ್, ಡಾ.ಶಾಂತರಾಜೇಅರಸ್, ಮಧುವನ ಚಂದ್ರು, ಮಂಜುಳಾ ಮತ್ತಿತರರಿದ್ದರು.

ಮೇ 17 ರಂದು ಚಿತ್ರಮಂಜರಿ ಕಾರ್ಯಕ್ರಮ

ಮೈಸೂರು, ಮೇ 15– ಮೈಸೂರಿನ ಗಾನ ಲಹರಿ ಸಂಸ್ಥೆಯ ವತಿಯಿಂದ 'ಚಿತ್ರಮಂಜರಿ' ಸಂಗೀತ ಕಾರ್ಯಕ್ರಮವನ್ನು ಮೇ 17 ರಂದು ಸಂಜೆ 5:30ಕ್ಕೆ ಎಂಬಿಸಿಟಿ ಆಡಿಟೋರಿಯಂ, ವಿಶ್ವೇಶ್ವರ ನಗರ, ವಿದ್ಯಾರಣ್ಯಪುರಂನಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಕನ್ನಡ, ಹಿಂದಿ, ತೆಲುಗು ಹಾಗೂ ತಮಿಳ್ ಭಾಷೆಯ ಚಲನಚಿತ್ರ ಗೀತೆಗಳನ್ನು ಹಾಡಲಾಗುವುದು. ಸಂಗೀತ ರಸಿಕರಿಗೆ ಮನರಂಜನೆಯ ಜೊತೆಗೆ ಸುಮಧುರ ಸಂಗೀತ ಸಂಭ್ರಮವನ್ನು ಈ ಕಾರ್ಯಕ್ರಮ ನೀಡಲಿದೆ.

ಮೇ 26 ರಂದು ಅಪ್ರೆಂಟಿಸ್ ತರಬೇತಿಗೆ ಕ್ಯಾಂಪಸ್ ಸಂದರ್ಶನ

ಮೈಸೂರು,ಮೇ 15– ಬೆಂಗಳೂರಿನ ಟಯೋಟಾ ಕಿರ್ಲೋಸ್ಕರ್ ಕಂಪನಿ ವತಿಯಿಂದ ಐಟಿಐ ತರಬೇತಿ ಪಡೆದ ಅಭ್ಯರ್ಥಿಗಳಿಗೆ ಅಪ್ರೆಂಟಿಸ್ ತರಬೇತಿಗೆ ಸಂದರ್ಶನವನ್ನು ಮೇ.26 ರಂದು ಬೆಳಗ್ಗೆ 8.30ಕ್ಕೆ ಪಾಂಡವಪುರ ಪಟ್ಟಣದ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಏರ್ಪಡಿಸಲಾಗಿದೆ.

ಐಟಿಐ ಉತ್ತೀರ್ಣರಾಗಿರುವ ಫಿಟ್ಟರ್, ಎಲೆಕ್ಟ್ರಾನಿಕ್ ಮೆಕ್ಯಾನಿಕ್ ಎಲೆಕ್ಟ್ರಿಷಿಯನ್, ಟರ್ನರ್, ವೆಲ್ಡರ್, ಮೆಕಾನಿಸ್ಟ್, ಡಿಸೇಲ್ ಮೆಕಾನಿಸ್ಟ್, ಎಂಎಂವಿ ತರಬೇತಿ ಪಡೆದ 18 ರಿಂದ 25 ವರ್ಷದೊಳಗಿನ ಅಭ್ಯರ್ಥಿಗಳು ಸಂದರ್ಶನದಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗೆ ಮೊ: 9986164282 ಸಂಪರ್ಕಿಸಬಹುದು.

ಸನಾತನಿಗಳು ತಮ್ಮ ಅನಾರೋಗ್ಯಕರ ಚಿಂತನೆಗಳನ್ನು ಸಮಾಜದಲ್ಲಿ ಹರಡುತ್ತಲೇ ಇರುತ್ತಾರೆ

● ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಎಚ್ಚರಿಕೆ ● ಇಂತಹ ಬೆಳವಣಿಗೆಗಳ ಪ್ರಶ್ನಿಸುವ ಪ್ರವೃತ್ತಿ ಬೆಳೆಸಿಕೊಳ್ಳಲು ಕರೆ

ಮೈಸೂರು, ಮೇ 15(ಎಂಕೆ)– ಬಹುತ್ವದ ಭಾರತದಲ್ಲಿ ಎಲ್ಲರೂ ಚೆನ್ನಾಗಿರಬೇಕಾದರೆ ಕೋಮುವಾದಿ ಶಕ್ತಿಗಳಿಂದ ಸಮಾಜದಲ್ಲಿ ಅನಾರೋಗ್ಯಕರ ಚಿಂತನೆಗಳು ಹರಡುವುದನ್ನು ತಡೆಯಬೇಕು ಎಂದು ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಹೇಳಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇಂಜಿನಿಯರ್ಸ್ ಸಂಸ್ಥೆ ಸಭಾಂಗಣದಲ್ಲಿ ದಲಿತ ಸಂಘರ್ಷ ಸಮಿತಿ(ಸಂಯೋಜಿತ) ಜಿಲ್ಲಾ ಸಮಿತಿ ವತಿಯಿಂದ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ಅವರು 135ನೇ ವರ್ಷದ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ 'ಬಹುತ್ವ ಭಾರತ ಮತ್ತು ಸಂವಿಧಾನವನ್ನು ಅಸ್ಥಿರಗೊಳಿಸುತ್ತಿರುವ ಕೋಮುವಾದಿ ಶಕ್ತಿಗಳು' ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಸನಾತನಿಗಳು ಕಾಲ–ಕಾಲಕ್ಕೆ ಬೇರೆ ಬೇರೆ ರೂಪದಲ್ಲಿ ಅವರಲ್ಲಿನ ಅನಾರೋಗ್ಯಕರ ಚಿಂತನೆಯನ್ನು ಸಮಾಜಕ್ಕೆ ಹಂಚುವ ಕೆಲಸ ಮಾಡುತ್ತಲೇ ಇದ್ದಾರೆ. ಅದನ್ನು ಪ್ರಶ್ನಿಸದೆ ಸಹಿಸಿಕೊಂಡರೆ ನಮಗೆ ಆಪತ್ತು ತಪ್ಪಿದ್ದಲ್ಲ. ಹೀಗಾಗಿ ಹೊಸ ಮಾರ್ಗೋಪಾಯಗಳನ್ನು ಕಂಡುಕೊಳ್ಳುವ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಯುವ ಪೀಳಿಗೆ ಅನ್ಯಾಯಗಳನ್ನು ಸಹಿಸದೆ, ಪ್ರಶ್ನಿಸುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಇದರಿಂದ ತಕ್ಕಮಟ್ಟಿಗಾದರೂ ಶೋಷಣೆ ಕಡಿಮೆಯಾಗಬಹುದು. ಪ್ರತ್ಯೇಕ ಮತದಾನದ ಬಗ್ಗೆ ಅಂಬೇಡ್ಕರ್ ಪ್ರತಿಪಾದಿಸಿದಾಗ ಗಾಂಧೀಜಿ ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡಿದರು. ಗಾಂಧಿ ನಾನು ದಲಿತರ ದತ್ತು ಮಗ ಅಲ್ಲವೇ ಎಂದರೆ, ಅಂಬೇಡ್ಕರ್ ಹೌದು ನೀವು ದತ್ತು ಮಗ. ಆದರೆ ನಾನು ಮನೆ ಮಗ ಅವರ ಕಷ್ಟಗಳು ನಿಮಗೆ ತಡವಾಗಿ ಅರ್ಥವಾಗುತ್ತದೆ ಎಂದಿದ್ದರೆಂದು ಸ್ಮರಿಸಿದರು.



ದಲಿತ ಸಂಘರ್ಷ ಸಮಿತಿ(ಸಂಯೋಜಿತ) ಜಿಲ್ಲಾ ಘಟಕದಿಂದ ಆಯೋಜಿಸಿದ್ದ ವಿಚಾರ ಸಂಕಿರಣವನ್ನು ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಉದ್ಘಾಟಿಸಿದರು

ನಾವೆಲ್ಲಾ ಬುದ್ಧರ ಧ್ಯಾನದಲ್ಲಿ ಮುಳುಗಿದಾಗ ಉತ್ತಮ ಜೀವನ ಸಾಧ್ಯ. ಗ್ರಂಥಾಲಯ, ಶಿಕ್ಷಣ ಕೇಂದ್ರ ಮತ್ತು ಹೊಸ ಕಾಲದ ದೇವಾಲಯಗಳನ್ನು ಬೆಳೆಸುವ ಕೆಲಸವಾಗಬೇಕು. ತಲೆ ಮೇಲೆ ಮಲ ಹೊರುವ ಅನಿಷ್ಠ ಪದ್ಧತಿಯನ್ನು ನಿಲ್ಲಿಸಲಾಯಿತು. ಆದರೆ ತಲೆಯೊಳಗೆ ಮಲ ಇರುವವರೆಗೆ ಅಸ್ಪೃಶ್ಯತೆ ತೊಲಗಲು ಸಾಧ್ಯವಿಲ್ಲ. ಸಮಾನತೆ, ಸಹೋದರತ್ವ ನಮ್ಮ ಅಂತಿಮ ಗುರಿಯಾಗಿರಲಿ ಎಂದರಲ್ಲದೆ ಬಸವಲಿಂಗಪ್ಪ ಅವರ ಜನ್ಮಶತಾಬ್ಧಿ ಮಾಡಲು ಸರ್ಕಾರ ಹಿಂದೇಟು ಹಾಕುತ್ತಿದೆ. ಅವರು ಅಂಬೇಡ್ಕರ್ ಉತ್ತರಾಧಿಕಾರಿಯಾಗಿ ಕೆಲಸ ಮಾಡಿದ್ದರು ಎಂದು ನೆನೆದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಯೋಜಕ ವಿ.ನಾಗರಾಜ್ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿದ್ದರು. ಪ್ರಗತಿಪರ ಚಿಂತಕ ನಾ.ದಿವಾಕರ್, ಮುಖಂಡರಾದ ಹೆಚ್.ಎನ್.ಅಣ್ಣಯ್ಯ, ಡಾ.ಕೆ.ಪಿ.ಮಹಾಲಿಂಗು ಕಲ್ಕುಂದ, ವರಹಳ್ಳಿ ಆನಂದ್, ಶಿವಣ್ಣ ಕಂದೇಗಾಲ, ಕಾರ್ಯ ಬಸವಣ್ಣ ಮತ್ತಿತರರಿದ್ದರು.

ದೇಶದಲ್ಲಿ ಬೆಲೆ ಏರಿಕೆ ಪರ್ವ ಆರಂಭ; ಕೆಲವೇ ದಿನದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ 150 ರ ಗಡಿ ದಾಟಿಸುತ್ತಾರೆ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಭವಿಷ್ಯ

● ಕಾಂಗ್ರೆಸ್ ಇದ್ದಾಗ ಕಚ್ಚಾ ತೈಲ ಬೆಲೆ 120 ಡಾಲರ್; ಪೆಟ್ರೋಲ್–ಡೀಸೆಲ್ ಬೆಲೆ 40 ರೂ.

● ಇದು ಕಚ್ಚಾ ತೈಲ ಬೆಲೆ 103 ಡಾಲರ್; ಪೆಟ್ರೋಲ್–ಡೀಸೆಲ್ ಬೆಲೆ 102 ರೂ.


● ವಿದೇಶ ಪ್ರವಾಸ ಬೇಡವೆಂದ ಮೋದಿಯವರೇ ವಿದೇಶಕ್ಕೆ ಹೊರಟಿದ್ದಾರೆ

● ಸ್ಕೂಟರ್, ಸೈಕಲ್‌ನಲ್ಲಿ ಹೋಗುವುದು ಬಿಜೆಪಿ ನಾಯಕರ ಡ್ರಾಮಾ!

ಮೈಸೂರು, ಮೇ15(ಬಿಎಲ್ ಯು)– ಪಂಚರಾಜ್ಯ ಚುನಾವಣೆಯ ತರುವಾಯ ದೇಶದಲ್ಲಿ ಬೆಲೆ ಏರಿಕೆ ಪರ್ವ ಆರಂಭವಾಗಿದ್ದು, ಪೆಟ್ರೋಲ್ ಹಾಗೂ ಡೀಸೆಲ್ ದರವನ್ನು 150 ರೂಪಾಯಿ ಗಡಿ ದಾಟಿಸುತ್ತಾರೆ. ಕೇಂದ್ರ ಸರ್ಕಾರದ ಇಂತಹ ಜನ ವಿರೋಧಿ ನೀತಿಯನ್ನು ಜನರು ಅರ್ಥ ಮಾಡಿಕೊಳ್ಳಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಕರೆ ನೀಡಿದ್ದಾರೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಇಂದಿನಿಂದ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು 3 ರೂಪಾಯಿ ಹೆಚ್ಚಳ ಮಾಡಿದ್ದಾರೆ. ಹಂತ ಹಂತವಾಗಿ ಸುಮಾರು 30 ರಿಂದ 40 ರೂಪಾಯಿವರೆಗೆ ಹೆಚ್ಚಳ ಮಾಡಿ ಮುಂದಿನ ದಿನಗಳಲ್ಲಿ 150 ರೂಪಾಯಿ ಗಡಿ ದಾಟಿಸುತ್ತಾರೆ ಎಂದು ಕಿಡಿಕಾರಿದರು.

ಡಾ.ಮನಮೋಹನ್ ಸಿಂಗ್ ಅವರು ಪ್ರಧಾನಿ ಆಗಿದ್ದಾಗ ಕಚ್ಚಾ ತೈಲ ಬೆಲೆ ಒಂದು ಬ್ಯಾರೆಲ್‌ಗೆ 120 ಡಾಲರ್ ಇತ್ತು. ಆದರೂ ಅಂದು ಕೇವಲ 40 ರೂಪಾಯಿಗೆ ಪೆಟ್ರೋಲ್, ಡೀಸೆಲ್ ದೊರೆಯುತ್ತಿತ್ತು. ಆದರೆ ಇಂದು ಕಚ್ಚಾ ತೈಲ ಬೆಲೆ 103 ಡಾಲರ್ ಇದ್ದರೂ ಪೆಟ್ರೋಲ್ ಬೆಲೆ 102 ರೂಪಾಯಿ ಆಗಿದೆ.



ಆದರೂ ತೈಲ ಕಂಪನಿಗಳು ನಷ್ಟವಾಗುತ್ತಿದೆ ಎಂದು ಹೇಳುತ್ತಿದ್ದು, ದಿನೇ ದಿನೆ ಇಂಧನ ಬೆಲೆ ಹೆಚ್ಚಳ ಮಾಡುತ್ತಿದ್ದಾರೆ ಎಂದು ಲಕ್ಷ್ಮಣ್ ಆರೋಪಿಸಿದರು.

ಪಂಚರಾಜ್ಯ ಚುನಾವಣೆ ನಂತರ ಇಂಧನ ಬೆಲೆ ಹೆಚ್ಚಳ ಮಾಡುತ್ತಾರೆ ಎಂದು ನಾವು ಹೇಳಿದ್ದ ಭವಿಷ್ಯ ನಿಜವಾಗಿದೆ. ಈಗ ಬೆಲೆ ಏರಿಕೆ ಪರ್ವ ಆರಂಭವಾಗಿದ್ದು, ಇನ್ನು ಜನ ಸಾಮಾನ್ಯರಿಗೆ ದುಬಾರಿ ಬೆಲೆಯ ಶಾಕ್ ಕಾದಿದೆ ಎಂದರು.

ಮೋದಿಯವರೇ ವಿದೇಶಕ್ಕೆ ಹಾರಿದ್ದಾರೆ!: ಇಂಧನ ಮಿತ ಬಳಕೆ ಮಾಡಿ, ಚಿನ್ನ ಖರೀದಿಸಬೇಡಿ, ವಿದೇಶ ಪ್ರವಾಸ ಕೈಗೊಳ್ಳಬೇಡಿ ಎಂದು ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದ್ದರು. ಆದರೆ ಮೋದಿ ಅವರೇ ಇಂದು ವಿದೇಶ ಪ್ರವಾಸ ಹೊರಟಿದ್ದಾರೆ. ಮೋದಿ ಮಾತು ಅನುಸರಿಸಿ ಬೈಕ್, ಸೈಕಲ್‌ನಲ್ಲಿ ಸಂಚರಿಸುವ ಬಿಜೆಪಿ ನಾಯಕರ ಈ ಡ್ರಾಮಾ ಎಷ್ಟು ದಿನ ನಡೆಯುತ್ತದೆಯೊ ಕಾದು ನೋಡೋಣ ಎಂದು ಲೇವಡಿ ಮಾಡಿದರು.

ಕೇಂದ್ರ ಸರ್ಕಾರದ ಬೇಜವಾಬ್ದಾರಿತನ ಹಾಗೂ ವೈಫಲ್ಯದಿಂದ 23 ಲಕ್ಷ ವಿದ್ಯಾರ್ಥಿಗಳಿಗೆ ಮತ್ತೆ ನೀಟ್ ಬರೆಯುವ ಪರಿಸ್ಥಿತಿ ಬಂದಿದೆ. ಸಣ್ಣ ಸಣ್ಣ ವಿಚಾರಗಳನ್ನು ಮನ್ ಕಿ ಬಾತ್‌ನಲ್ಲಿ ಪ್ರಸ್ತಾಪಿಸುವ ಮೋದಿ ಅವರು ಗಂಭೀರವಾದ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಬಗ್ಗೆ ತುಟಿ ಬಿಚ್ಚುತ್ತಿಲ್ಲ ಎಂದು ಲಕ್ಷ್ಮಣ್ ಟೀಕಿಸಿದರು.

ತೈಲ ಬೆಲೆ ಏರಿಕೆ ಹಾಗೂ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ವಿಚಾರಗಳನ್ನು ಮರೆ ಮಾಚಲು ಬಿಜೆಪಿ ನಾಯಕರು ಹಿಜಾಬ್ ವಿಷಯವನ್ನು ವಿವಾದವಾಗಿ ಮಾಡುತ್ತಿದ್ದಾರೆ ಎಂದು ಆಪಾದಿಸಿದರು.

ಕೆಲವು ಧಾರ್ಮಿಕ ಆಚರಣೆಗಳನ್ನು ತಡೆಯಲು ಸಾಧ್ಯವಿಲ್ಲ. ಇತ್ತೀಚಿಗೆ ಪರೀಕ್ಷೆ ವೇಳೆ ಜನಿವಾರ ತೆಗೆಸಿರುವುದು ಬೆಳಕಿಗೆ ಬಂದ ಮೇಲೆ ರಾಜ್ಯ ಸರ್ಕಾರ ಶಾಲೆಗಳಲ್ಲಿ ಜನಿವಾರ, ಶಿವದಾರ, ರುದ್ರಾಕ್ಷಿ, ವಿಭೂತಿ, ಹಿಜಾಬ್ ಧರಿಸಬಹುದು ಎಂದು ಆದೇಶ ಮಾಡಿದೆ. ಈ ಹಿನ್ನೆಲೆಯಲ್ಲಿ ಬಿಜೆಪಿಯವರ ಮಾತಿಗೆ ಜನರು ಬೆಲೆ ಕೊಡಬಾರದು ಎಂದು ಲಕ್ಷ್ಮಣ್ ಸಲಹೆ ನೀಡಿದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ಜನರೊಂದಿಗೆ
ಜನತಾದಳ
ಸಶಕ್ತ ಜನತಾದಳ, ಸಮೃದ್ಧ ಕರ್ನಾಟಕ
ಕಾರ್ಯಕ್ರಮ
9964002028ಗೆ
Missed call ಕೊಡಿ.
ಜೆಡಿಎಸ್ ಸದಸ್ಯತ್ವ ಪಡೆಯಿರಿ
ದಿನಾಂಕ: 17.05.2026 ಭಾನುವಾರ ಸಮಯ : 10.30 ಗಂಟೆ
ಸ್ಥಳ: ನಾಗಲಿಂಗೇಶ್ವರ - ಬೋಗೇಶ್ವರ ದೇವಸ್ಥಾನದ ಎದುರು,
ಬೋಗಾದಿ ರಿಂಗ್ ರಸ್ತೆ, ಮೈಸೂರು